Mysore Agricultural Produce Marketing (Regulation) (Amendment) Bill 1969

(i) Statutory Resolution to disapprove the Ordinance No. 2
(ii) Motion to Consider the Bill
(iii) Amendment to Circulate the Bill to elicit Public Opinion

(Debate Contd.)

MR. SPEAKER.—Next item is, the statutory disapproval resolution moved by hon. member Sri Nagappa. Hon. Minister for Co-operation moved a motion for the consideration of the Mysore Agricultural Produce Marketing (Regulation) (Amendment) Bill, 1969 and there is also a motion moved by hon. Member Sri H. Siddaveerappa with regard to circulation of the Bill for eliciting public opinion. All these three motions are before the House. If the hon. Minister wants to say anything by way of preliminary remarks he may do so.

ಶ್ರೀ ಪಿ. ಎಂ. ನಾಡಗೌಡ (ಅಭಿವೃದ್ಧಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇದು ಒಂದು ಮಹತ್ವದ ಮಸೂದೆ ಎಂದು ಸರಕಾರ ಪರಿಗಣನೆ ಮಾಡಿದೆ. ಈ ಕಾಯಿದೆಯನ್ನು 1966ನೇ ಇಸವಿಯಲ್ಲಿ ಈ ಸದನ ಪಾಸು ಮಾಡಿತು. ಆದರೆ ಸರಕಾರ ಇದನ್ನು ಕಾರ್ಯಗತ ಮಾಡಿದ್ದು 1968 ರಲ್ಲಿ. ಈ ಒಂದು ಕಾಯಿದೆ ಮೂಲಭೂತವಾಗಿ ರೈತರ ಹಕ್ಕು ಬಾಧ್ಯತೆಗಳಿಗೆ ಸಂಪೂರ್ಣವಾಗಿ ರಕ್ಷಣೆ ಕೊಡುವುದರ ಸಲುವಾಗಿ ತಂದಿದೆ. ರೈತರಿಗೆ ಹೆಚ್ಚು ಸವಲತ್ತುಗಳು ಸಿಗಬೇಕು ಎಂದು ಇಂತಹ ಒಂದು ಕಾಯದೆ ಮಾಡಿ ಇದನ್ನು ಕಾರ್ಯಗತ ಮಾಡುತ್ತಿದೆ. ಇದರಲ್ಲಿ ಇನ್ನೂ ಒಂದು ಮಹತ್ವದ ವಿಚಾರ ಎಂದರೆ, ಈ ಕಾಯದೆಯ ತತ್ವ ಪ್ರಣಾಳಿಗಳನ್ನು ಚರ್ಚೆ ಮಾಡುವಾಗ ಈ ರಾಜ್ಯದ ಮಾನ್ಯ ಹೈ ಕೋರ್ಟಿನಲ್ಲಿ ಒಂದು ಪ್ರಸಂಗ ಬಂದು ನೂರಾರು ರಿಟ್ ಪಿಟಿಷನ್‌ಗಳು ಬಂದವು. ಇಂತಹ ರಿಟ್ ಪಿಟಿಷನ್‌ಗಳನ್ನು ತೀರ್ಮಾನ ಮಾಡುವಾಗ ಹೈ ಕೋರ್ಟು ಒಂದು ಸೂಚನೆ ಮಾಡಿ ಹಿಂದೆ ಇದ್ದಂತಹ ಕಮಿಟಿಗಳನ್ನು ಈ ಹೊಸ ಕಾಯಿದೆಯಂತೆ ಅವುಗಳನ್ನು ಮುಂದೂಡುವುದಕ್ಕೆ ಬರುವುದಿಲ್ಲ. ರೆಗ್ಯುಲೇಟೆಡ್ ಮಾರ್ಕೆಟ್ಟಿನ ಕಾಯಿದೆಯಲ್ಲಿರುವ ಸೆಕ್ಷನ್ 10 ರ ಪ್ರಕಾರ ಇದನ್ನು ಎರಡು ವರ್ಷಗಳು ಮುಂದೂಡುವುದಕ್ಕೆ ಅವಕಾಶವಿಲ್ಲ, ಆ ಕಾರಣದಿಂದ ಎಲೆಕ್ಷನ್ ಮಾಡಬೇಕೆಂದು ಸೂಚನೆ ಮಾಡಿದರು. ಮೊದಲಿಗೆ ಸರಕಾರವೇ ಇಲ್ಲಿನ ಕಮಿಟಿಗೆ ನಾಮಕರಣ ಮಾಡಬಹುದಾಗಿತ್ತು ಹಾಗೆ ಸರಕಾರ ನಾಮಕರಣ ಮಾಡಿದ್ದರೆ ತಮಗೆ ಬೇಕಾದವರನ್ನು ಸದಸ್ಯರನ್ನಾಗಿ ಹಾಕಿ ಅವರ ಮೂಲಕ ಈ ಕಾಯಿದೆಯ ಅಮಲು ಬಜಾವಣೆ ಮಾಡಲಿಕ್ಕೆ ಬರುತ್ತಿತ್ತು. ಆದರೆ ಪ್ರಜಾಸತ್ತಾತ್ಮಕವಾದ ರೀತಿಯಲ್ಲಿ ಮಾಡಬೇಕು ಎಂದು ಸರಕಾರ ಯೋಚಿಸಿ ಹೀಗೆ ನಾಮಕರಣ ಮಾಡುವುದು ಯೋಗ್ಯವಲ್ಲ ಮತ್ತು ಇದು ಕಾಯಿದೆಗೆ ತದ್ವಿರುದ್ಧವಾಗುತ್ತದೆ ಎಂದು ಹೈ ಕೋರ್ಟಿನವರು ಹೇಳಿದ ಮೇಲೆ ಒಂದು ಆರ್ಡಿನೆನ್ಸು ತರಲಾಯಿತು. ಆರ್ಡಿನೆನ್ಸಿನಲ್ಲಿ ಮೂರು ಮುಖ್ಯವಾದ ಉದ್ದೇಶಗಳಿವೆ ಎನ್ನುವುದನ್ನು ತಾವು ನೆನಪಿನಲ್ಲಿಡಬೇಕು. ಹಿಂದೆ ಇಲ್ಲಿ ಸುಮಾರು 87—88 ಕಮಿಟಿಗಳಿದ್ದವು ಮತ್ತು ಈ ಕಮಿಟಿಗಳಿಗೆ ಸುಮಾರು 8-10-12 ವರ್ಷಗಳಿಂದಲೂ ಚುನಾವಣೆಗಳೇ ಆಗಿರಲಿಲ್ಲ ಮತ್ತು ಇವು ಇಲ್ಲಿಯವರೆಗೂ ಕೆಲಸಗಳನ್ನು ನಡೆಸಿಕೊಂಡು ಬರುತ್ತಿದ್ದವು. ಇದರ ಪ್ಯಾಟರ್ನ್ ಕೂಡ ಬದಲು ಮಾಡಲಾಗಿದೆ. ಮೊದಲಿಗೆ ಕಮಿಟಿಗಳ ಸದಸ್ಯರು ಟ್ರೆಡರ್ಸ್‌ಗಳು ಇದ್ದರು ಮತ್ತು ರೈತರಿಗೆ ಪ್ರಾಧಾನ್ಯತೆಯನ್ನು ಇವರೇ ಕೊಡುತ್ತಿದ್ದರು ಮತ್ತು ಹಿಂದಿನ ಆಕ್ಟು ಪ್ರಕಾರ ಟ್ರೆಡರುಗಳೇ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳಾಗಿ ಮುಂದೆ ಹೊಸ ಕಮಿಟಿಯಾದಾಗಲೂ ಇರುತ್ತಿದ್ದರು. ಹಿಂದೆ ಘಟನಾತ್ಮಕವಾಗಿದ್ದ ಕಮಿಟಿಗಳಿಗೂ ಈಗ ಇರುವ ಕಮಿಟಿಗಳಿಗೂ ಏನೂ ಸಂಬಂಧ ಇರುವುದಿಲ್ಲ. ಇವನ್ನೆಲ್ಲಾ ವಿಚಾರ ಮಾಡಿಕೊಂಡು ಇಂತಹ ಒಂದು ಸರಿಯಾದ ಕಾಯಿದೆಯನ್ನು ಲೆಜಿಸ್ಲೇಚರು ಮುಂದೆ ತರದೇ ಇದು ಪೂರ್ತಿಯಾಗುವುದಿಲ್ಲ ಎಂದು ಮತ್ತು ಸರಕಾರದವರು ಇನ್ನು ಒಂದು ವರ್ಷದಲ್ಲಿ ಎಲ್ಲ ಕಮಿಟಿಗಳ ಚುನಾವಣೆಗಳನ್ನೂ ಮಾಡಬೇಕು ಎಂದು ನಿರ್ಧಾರ ಮಾಡಿದರು. ಇದನ್ನು ಮಾಡಲು ಕಾರಣವೇನು ಎನ್ನುವುದನ್ನು ನಾವು ಇಲ್ಲಿ ಮುಖ್ಯವಾಗಿ ನೆನಪಿನಲ್ಲಿ ಇಡಬೇಕು. ಹಿಂದೆ ಇದ್ದಂತಹ 83 ಕಮಿಟಿ

(ಶ್ರೀ ಪಿ. ಎಂ. ನಾಡಗೌಡ)

ಗಳನ್ನು ಕಾನ್ಸ್ಟಿಟ್ಯೂಟು ಮಾಡಿದಾಗ ಇದರ ಚೇರ್ಮನ್ನರವರೇ ಇದರ ಆಡಳಿತವನ್ನು ಮಾಡಿಕೊಂಡು ಹೋಗುತ್ತಿದ್ದರು ಮತ್ತು ಕೆಲವು ಕಡೆಗಳಲ್ಲಿ ಇದ್ದ ಕಮಿಟಿಗಳಲ್ಲಿ ಆಯಾ ಜಿಲ್ಲಾಧಿಕಾರಿಗಳೇ ಆಡಳಿತ ನಡೆಸಿಕೊಂಡು ಬರುತ್ತಿದ್ದರು. ಸುಮಾರು ಹತ್ತು ಹನ್ನೆರಡು ವರ್ಷಗಳಿಂದಲೂ ಇದೇ ಪ್ಯಾಟರ್ನ್ ಮುಂದುವರಿದುಕೊಂಡು ಬರುತ್ತಿದೆ, ಇದನ್ನು ದೂರ ಮಾಡಲು ರೈತರ ಹಿತವನ್ನು ರಕ್ಷಣೆ ಮಾಡಬೇಕು ಎನ್ನುವ ಉದ್ದೇಶದಿಂದ ಇಲ್ಲಿ ಅಡ್ಮಿನಿಸ್ಟ್ರೇಟರುಗಳನ್ನು ನೇಮಿಸಿ ಹೊಸ ಕಾಯಿದೆಯಂತೆ ಎಲೆಕ್ಷನ್‌ಗಳನ್ನು ಮಾಡಬೇಕು ಎಂದು ಇಲ್ಲಿ ಈ ಬಿಲ್ ತಂದಿದೆ. ಈ ಬಿಲ್ಲಿನಲ್ಲಿ ಇರುವ ಸೆಕ್ಷನ್ 10 ರಂತೆ ಸರಕಾರವೇ ಹಿಂದೆ ನಾಮಕರಣ ಮಾಡಿದ್ದರೆ ಆ ಕಮಿಟಿಗಳನ್ನು ಇನ್ನೂ ಎರಡು ವರ್ಷಗಳ ಕಾಲ ಇಲ್ಲವೇ ಮೂರು ವರ್ಷಗಳ ಕಾಲ ಮುಂದೂಡುವಂತೆ ಮಾಡಬಹುದಾಗಿತ್ತು. ಆದರೆ ಹೀಗೆ ಮಾಡಿದರೆ ಪ್ರಜಾಸತಾತ್ಮಕವಾಗುವುದಿಲ್ಲ ಎಂದು ಸರಕಾರ ತಿಳಿದುಕೊಂಡು ಇದಕ್ಕಾಗಿ ಒಂದು ಆರ್ಡಿನೆನ್ಸ್ ಮಾಡಿ ಆ ನಂತರ ಅದನ್ನು ಸರಿ ಮಾಡಲು ಇಂತಹ ಒಂದು ಬಿಲ್ಲನ್ನು ತರಲಾಗಿದೆ ಮತ್ತು ಇದನ್ನು ಮಾನ್ಯ ಸಭೆಯವರು ಒಪ್ಪಬೇಕೆಂದು ಕೇಳುತ್ತಿದ್ದೇನೆ. ಕೆಲವು ಸದಸ್ಯರು ಇದರ ಬಗ್ಗೆ ಬಹಳ ತೀಕ್ಷಣವಾದ ಟೀಕೆಗಳನ್ನು ಕೂಡ ಮಾಡಿದರು. ಸರಕಾರದವರು ಇದಕ್ಕಾಗಿ ಅಡ್ಮಿನಿಸ್ಟ್ರೇಟರುಗಳನ್ನು ನೇಮಕ ಮಾಡಿ ಅವರೇ ಮುಂದೆ ಚುನಾವಣೆಗಳನ್ನು ಮಾಡಬೇಕೆಂದು ಇದರಲ್ಲಿ ಮಾಡಲಾಗಿದೆ. ಇಂತಹ ಒಂದು ಹೊಸ ಕಾಯಿದೆಯನ್ನು ಮಾಡುತ್ತಿರುವುದು ಇದರಲ್ಲಿರುವ ಎರಡು ಮುಖ್ಯ ಕಲಮುಗಳಿಗಾಗಿ ಎರಡು ಕಲಮುಗಳು ಎಂದರೆ ಕಲಮು 10 ಮತ್ತು 11 ಕಲಮುಗಳು. 10 ನೇ ಕಲಮಿನ ಪ್ರಕಾರ ನಾಮಕರಣ ಮಾಡುವುದು, 11 ನೇ ಕಲಮಿನ ಪ್ರಕಾರ ಎಲೆಕ್ಷನ್‌ಗಳನ್ನು ನಡೆಸುವುದು. 10 ನೇ ಕಲಮಿನಂತೆ ಮಾರ್ಕೆಟ್ಟು ಕಮಿಟಿಗಳಿಗೆ ಅಡ್ಮಿನಿಸ್ಟ್ರೇಟರುಗಳು ಎಂದು ನೇಮಕ ಮಾಡಿ ಅವರ ಮೂಲಕ ಆಡಳಿತ ನಡೆಸಬೇಕು ಎಂದು ಮಾಡಲಾಗಿದೆ.

ಇದರಲ್ಲಿ ಇನ್ನೂ ಒಂದು ವಿಚಾರ ಇದೆ. ಅದು ಸೆಕ್ಷನ್ 4 ಮತ್ತು 6 ರಲ್ಲಿ ಹೇಳಿರುವಂತೆ ಇದರಲ್ಲಿರುವ ಚೀಫ್ ಮಾರ್ಕೆಟಿಂಗು ಆಫೀಸರು ಮಾರ್ಕೆಟ್ ಏರಿಯಾ ಯಾವುದು ಮತ್ತು ಯಾರ್ಡ್ ಯಾವುದು ಎನ್ನುವುದನ್ನು ನೋಟಿಫಿಕೇಷನ್ ಮೂಲಕ ತಿಳಿಸಬೇಕೆಂದು ಇದರಲ್ಲಿ ಮಾಡಲಾಗಿದೆ. ಮತ್ತು ಹೈ ಕೋರ್ಟಿನವರು ಇದರ ಬಗ್ಗೆ ಸಂಶಯ ಬಂತು ಎಂದು ಸೂಚನೆ ಕೊಟ್ಟಾಗ ಇದರಲ್ಲಿ ವ್ಯಾಲಿಡೇಷನ್ ಕೊಡುವುದರ ಸಲುವಾಗಿ ಸೆಕ್ಷನ್ 154 (ಎ) ಎಂದು ಇದರಲ್ಲಿ ಮಾಡಲಾಗಿದೆ. ಇದರಂತೆ ಕಾನ್‌ಸ್ಟಿಟ್ಯೂಷನರ್ ಅಗಿ ಕಮಿಟಿಗಳಿಗೆ ಯಾವ ರೀತಿಯಾದ ಅಧಿಕಾರಗಳು ಇರಬೇಕೆಂದು ಹೇಳಲಾಗಿದೆ. ಮತ್ತು ಇಲ್ಲಿರುವ ಅಧಿಕಾರಿಗಳೇ ಮಾರ್ಕೆಟ್ ಕಮಿಟಿ ಏರಿಯಾ ಯಾವುದು ಮತ್ತು ಯಾರ್ಡ್ ಯಾವುದು ಎನ್ನುವುದನ್ನು ಹೊಸದಾಗಿ ಕಮಿಟಿಗಳನ್ನು ಮಾಡಿ ಅದರಲ್ಲಿರುವ ಬೈಲಾಗಳ ಪ್ರಕಾರ ವಿವರಗಳನ್ನು ಕೊಡಲಾಗುತ್ತದೆ ಮತ್ತು ಸರಕಾರದವರ ಜುರಿಸ್‌ಡಿಕ್ಷನ್ ಹೇಗೆ ಇರಬೇಕು ಎನ್ನುವುದಕ್ಕೆ ಮುಖ್ಯವಾಗಿ ಇದರಲ್ಲಿ ಎರಡು ಮಾತುಗಳನ್ನು ಹೇಳಲಾಗಿದೆ. ಇದರಲ್ಲಿ ಅಡ್ಮಿನಿಸ್ಟ್ರೇಡರ್ಸ್‌ಗಳು ಎಂದು ಇರಬೇಕು ಅವರೇ ಮುಂದೆ ಎಲೆಕ್ಷನ್ ಮಾಡಬೇಕು ಎಂದು ಮಾಡಿದೆ. ಮುಂದೆ ಸೆಕ್ಷನ್ 4 ರಲ್ಲಿ ಹೇಳಿರುವಂತೆ ನೋಟಿಫಿಕೇಷನ್ ಹೊರಡಿಸಬೇಕು. ಇದು ಒಂದು ಮಹತ್ವವಾದ ವಿಚಾರ. ಇದನ್ನು ಅನುಸರಿಸಿ ನೋಟಿಫಿಕೇಷನ್ ಹೊರಡಿಸಿ ಅದರಂತೆ ವ್ಯಾಲಿಡೇಷನ್ ಮಾಡಬೇಕೆಂದು ಇಲ್ಲಿ ಬಿಲ್ ತರಲಾಗಿದೆ. ಈ ಬಿಲ್ಲಿನಲ್ಲಿ ಮೂರು ಮುಖ್ಯವಾದ ಅಂಶಗಳಿವೆ. ಒಂದನೇದು ಸಿಟಿ ಮುನಿಸಿಪಲ್ ಏರಿಯಾ ಹಾಗೂ ಪಂಚಾಯತಿಗಳ ಏರಿಯಾ, ಮಾರ್ಕೆಟಿಂಗು ಯಾರ್ಡ್ ಯಾವುದನ್ನು ಮಾಡಬೇಕು ಎಂದು ಹೇಳಿದೆ. ಎರಡನೇದು ಇದರಲ್ಲಿ ಯಾವ ರೀತಿ ಬದಲಾವಣೆ ಮಾಡಬೇಕು ಅದು ಹೇಗಿರಬೇಕು' ಎಂದು ಹೇಳಿದೆ. ಮೂರನೆಯದಾಗಿ ಡೆಪ್ಯೂಟಿ ಕಮೀಷನರ್ಸ್ ತಮ್ಮ ಹೆಡ್‌ಕ್ವಾರ್ಟರ್ಸ್‌ನಲ್ಲಿ ಅಡ್ಮಿನಿಸ್‌ಟ್ರೇಟರಾಗಿ ಇರಬೇಕು, ಇದೇ ರೀತಿ ಅಸಿಸ್ಟೆಂಟ್ ಕಮಿಷನರ್ಸ್, ತಾಸೀಲ್ದಾರ್ಸ್ ಇವರುಗಳೂ ತಮ್ಮ ತಮ್ಮ ಹೆಡ್ ಕ್ವಾರ್ಟರ್ಸ್‌ನಲ್ಲಿ ಅಡ್ಮಿನಿಸ್ಟ್ರೇಟರಾಗಿರಬೇಕು ಎಂದು ಮಾಡಿದ್ದೇವೆ. ಅವರಿಗೆ ಹೆಚ್ಚು ಕೆಲಸ ಇದ್ದ ಕಡೆ ಇನ್ನೊಬ್ಬ ಸ್ಪೆಷಲ್ ಆಫೀಸರ್ಸ್‌ನ್ನು ಅಪಾಯಿಂಟ್ ಮಾಡುವ ಅಧಿಕಾರ ಇಟ್ಟುಕೊಂಡಿದ್ದೇವೆ. ಈ ರೀತಿಯಾಗಿ ಆರ್ಡಿನೆನ್ಸ್ ಮಾಡಿದ್ದೇವೆ. ಅದುದರಿಂದ ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳುತ್ತೇನೆ. ಇದರಲ್ಲಿ ಯಾವ ತರಹ ಹಕ್ಕನ್ನೂ ಮೊಟಕು ಮಾಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿಲ್ಲ. ನಾವು ಏನು ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡುತ್ತೇವೋ ಅವರು ಅಲ್ಲಿ ಒಂದು ವರ್ಷ ಕಮಿಟಿ ಮಾಡಿದ ಮೇಲೆ ಬಿಟ್ಟು ಬರುತ್ತಾರೆ. ಆದುದರಿಂದ ಶೀಘ್ರದಲ್ಲೇ ಎಲೆಕ್ಷನ್ ಮಾಡಬೇಕೆಂದು ಈ ಬಿಲ್ಲನ್ನು ತಂದಿರುವುದರಿಂದ ಮಾನ್ಯ ಸದಸ್ಯರು ಇದನ್ನು ಒಪ್ಪಿಕೊಳ್ಳಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಈ ಅಮೆಂಡ್‌ಮೆಂಟ್ (6) ಮತ್ತು ಅಮೆಂಡ್‌ಮೆಂಟ್ (10) ಇದರ ಕ್ಲಾರಿಫಿಕೇಷನ್ ಕೊಟ್ಟನಂತರ ತಮ್ಮ ಅಭಿಪ್ರಾಯ ನೋಡಿಕೊಂಡು ಈ ಸಭೆಯು ಅಭಿಪ್ರಾಯಕೊಡಲು ಸಾಧ್ಯವಾಗುತ್ತದೆ. ಅಮೆಂಡ್‌ಮೆಂಟ್ 6ರಲ್ಲಿ ಏನು ಇದೆಯೋ ಅಮೆಂಡ್‌ಮೆಂಟ್ 10ರಲ್ಲೂ ಅದೇ ಇದೆ. ಆದುದರಿಂದ ಅಮೆಂಡ್‌ಮೆಂಟ್ 10 ಅದೇಸಾಕಾಗಿತ್ತು. ಅಮೆಂಡ್‌ಮೆಂಟ್ 6 ಅನಾವಶ್ಯಕ. ಈ ಅಮೆಂಡ್‌ಮೆಂಟ್ 10 ಹೈಕೋರ್ಟಿನವರು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಅದನ್ನು ನೋಡಬೇಕು.

ಶ್ರೀ ಪಿ. ಎಂ. ನಾಡಗೌಡ,—Marulasiddaiah and Others VS State of Mysore. ಈ ಜಡ್ಜ್‌ಮೆಂಟ್ ನೋಡಿದರೆ ಈ ಅಮೆಂಡ್‌ಮೆಂಟ್ ತರುವುದು ಈ ಒಂದು ಸೆಕ್ಷನ್ ಸಾಕಾಗುವುದಿಲ್ಲ. ಆದ್ದರಿಂದ ಎರಡು ಸೆಕ್ಷನ್‌ಗಳಿಗೂ ಅಮೆಂಡ್‌ಮೆಂಟ್ ತಂದಿದ್ದೇವೆ.

ಶ್ರೀ ಎಂ. ನಾಗಪ್ಪ.—ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಅಭಿವೃದ್ಧಿಯ ಖಾತೆ ಮಂತ್ರಿಗಳು ತಂದಿರತಕ್ಕ ಈ ಬಿಲ್ಲನ್ನು ಕೂಲಂಕುಷವಾಗಿ ಯೋಚಿಸಿ ನೋಡಬೇಕಾಗಿದೆ. ಇದರಲ್ಲಿ ಸತ್ಯಾಂಶಗಳು ಎಷ್ಟಿದೆ? ಇದನ್ನು ಒಪ್ಪಬೇಕೇ, ಒಪ್ಪಕೂಡದೇ ಎನ್ನುವುದನ್ನೂ ಯೋಚಿಸಬೇಕಾಗಿದೆ. ಸ್ವಾಮಿ, ಮೈಸೂರು ರಾಜ್ಯದ ವ್ಯವಸಾಯೋತ್ಪನ ಮಾರಾಟವನ್ನು (ಕ್ರಮಗೊಳಿಸುವುದಕ್ಕೆ ಸಂಬಂಧಿಸಿದ) (ತಿದ್ದುಪಡಿಯ) ವಿಧೇಯ, 1969 ಈ ಬಿಲ್ಲನ್ನು ನಮ್ಮ ಮುಂದೆ ಇಡಲಾಗಿದೆ. ಈ ಬಿಲ್ಲಿನಲ್ಲಿರುವ ಕಲಂಗಳನ್ನು ನೋಡುವುದಕ್ಕೆ ಮುಂಚಿತವಾಗಿ ನಮ್ಮ ರಾಜ್ಯಪಾಲರು ಮಾಡಿದ ಆರ್ಡಿನನ್ಸನ್ನು ಮೊದಲು ವಿಚಾರ ಮಾಡಬೇಕಾಗುತ್ತದೆ. ಅನಂತರ ಈ ಮಸೂದೆಯ ಕೆಲವು ಕಲಂಗಳ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ಮಾಡಿದ್ದೇನೆ.

ಮೊಟ್ಟಮೊದಲನೆಯದಾಗಿ ಮಾನ್ಯ ಮಂತ್ರಿಗಳು ಹೇಳಿದರು ಇದು ರೈತರ ಹಿತಸಾಧನೆಗೆಂದು ಮಾಡಿದಂಥ ಕಾಯಿದೆ ಎಂದು. ಅವರ ಈ ಅಭಿಪ್ರಾಯ ಸರಿಯಲ್ಲ. ನಾನಾದರೂ ಹೇಳುತ್ತೇನೆ, ಈ ರೆಗ್ಯುಲೇಷನ್ಸ್ ಏನು ಇದೆಯೋ ಅದು ರೈತರ ಹಿತಸಾಧನೆಗೆ ಎಂದು ಕಾಯಿದೆ ಮಾಡಿದ್ದೀರಾ! ಅಥವಾ ವರ್ತಕರಿಗೆ ಲಾಭವಾಗಬೇಕು ಎನ್ನುವ ಉದ್ದೇಶದಿಂದ ಈ ಕಾಯಿದೆ ಮಾಡಿದ್ದೀರಾ? ಇದು 2—3 ಅಂಶಗಳಿಂದ ಕೂಡಿದೆ ಎಂದು ನಾನು ಹೇಳುತ್ತೇನೆ. ಈ ಮಾನ್ಯ ಸಭೆಯಲ್ಲಿ ಕಾಯಿದೆ ಆದದ್ದು 1966ನೇ ಇಸವಿಯಲ್ಲಿ ಜಾರಿಗೆ ಕೊಟ್ಟದ್ದು 1968ನೇ ಇಸವಿಯಲ್ಲಿ. ಇದನ್ನು ಜಾರಿಗೆ ಕೊಡಲು 2 ವರ್ಷ ತಡ ಮಾಡಿದ್ದುದರಿಂದ ಕಾರಣವನ್ನು ಸ್ಪಷ್ಟಪಡಿಸಬೇಕು. ನನ್ನ ಎರಡೂವರೆ ವರ್ಷದ ಅನುಭವ ಹೇಳುವುದಾದರೆ ಸರ್ಕಾರದಲ್ಲಿ ಮಾಡುವಂಥ ಕಾಯಿದೆಗಳು ಹೈಕೋರ್ಟಿಗೆ ಹೋಗುತ್ತದೆ. ಕಾಯಿದೆ ರದ್ದುಗೊಳಿಸಿದ ಮೇಲೆ ಅದನ್ನು ತಿದ್ದುಪಡಿ ಮಾಡಿ ಈ ಸಭೆಗೆ ಬರತಕ್ಕದ್ದು ಎಂದರೆ ಸರ್ಕಾರದವರು ಅದರಲ್ಲಿರತಕ್ಕಂಥ, ನಿಯಮಗಳನ್ನು ಸರಿಯಾಗಿ ತಂದಿಲ್ಲ ಅಥವಾ ಆ ವಿಧೇಯಕ ಜನಗಳಿಗೆ ಉಪಯೋಗಕ್ಕೆ ಬರದಂತೆ ಮಾಡಿದ್ದಾರೆ ಎಂದು ಹೇಳುತ್ತೇನೆ. ಏತಕ್ಕೆಂದರೆ ಈ ಸಂಬಂಧವಾಗಿ ಹಿಂದೆ ಎಷ್ಟು ಅರ್ಜಿಗಳು ಬಂದುವು, ಏತಕ್ಕೆ ಬಂದುವು ಎನ್ನುವುದನ್ನು ಗಮನಿಸಬೇಕು. ಆದ್ದರಿಂದ ರೈತರ ಹಿತಸಾಧನೆಗೆ ಎಂದು ಹೇಳಿ ಈ ಕಾಯಿದೆ ಪಾಸು ಮಾಡಿದರೆ ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಮರುಳುಸಿದ್ದಯ್ಯ ಅಂಡ್ ಅದರ್ಸ್ ವರ್ಸಸ್ ಸ್ಟೇಟ್ ಆಫ್ ಮೈಸೂರು ಈ ಜಡ್ಜಮೆಂಟ್ ಆರ್ಡರನಲ್ಲಿ ಏನು ತಿಳಿಸಿದ್ದಾರೆ? ನೀವು ಏನು ಅಭಿಪ್ರಾಯ ಇಟ್ಟುಕೊಂಡಿದ್ದೀರಿ ತಿಳಿಸಿ. ವಿರೋಧಪಕ್ಷದಲ್ಲಿರುವಂಥವರೂ ಕೂಡ ರೈತರ ಹಿತಸಾಧನೆಗಳಿಗೆ ಇದ್ದಾರೆ ಎಂದು ಅರಿತ ಕೊಳ್ಳಬೇಕು. ನೀವು ನಿಷ್ಪಕ್ಷಪಾತವಾಗಿ ರೈತರ ಹಿತಸಾಧನೆಗಳನ್ನು ಮಾಡಬೇಕು ಎನ್ನುವ ಅಭಿಪ್ರಾಯ ಹೊಂದಿದ್ದರೆ, ರೈತರ ಹಿತಾಸಕ್ತಿ ಅಗುವ ಕಾಯಿದೆ ಆಗಿದ್ದರೆ ಅದನ್ನು ಸ್ವಾಗತಿಸಬಹುದು. ಬಹಳ ವರ್ಷದಿಂದಲೂ ಕಮಿಟಿಗಳಲ್ಲಿ ಅದೇ ಸದಸ್ಯರು, ಅದೇ ಅಧ್ಯಕ್ಷರು ಇದ್ದಾರೆ. 1966ನೇ ಇಸವಿಯಲ್ಲಿ ಮಾಡಿದಂಥ ಕಾಯಿದೆಯನ್ನು ಆಗಲೇ ಜಾರಿಗೆ ತಂದಿದ್ದರೆ ಈ ಪರಿಸ್ಥಿತಿ ಇರುತ್ತಿತ್ತೇ? ಇದರಿಂದ ತಾವು ಅವರಿಗೆ ರಕ್ಷಣೆ ಕೊಟ್ಟಿದ್ದೀರಿ ಎನ್ನುವುದು ಗೊತ್ತಾಗುತ್ತದೆ. ತಾವು ಒಂದು ಮಾರ್ಕೆಟ್‌ಯಾರ್ಡನ್ನು ಗೊತ್ತು ಮಾಡಿದಿರಿ. ಹೈಕೋರ್ಟಿನವರು ಅದು ಮಾರ್ಕೆಟ್‌ಯಾರ್ಡ್ ಆಗುವುದಿಲ್ಲ ಎಂದರು. ಆಮೇಲೆ ಮಾರ್ಕೆಟ್ ಏರಿಯಾ ಯಾವುದು ಎಂದು ಸ್ಪೆಸಿಫೈ ಮಾಡಿದಿರಿ. ಆ ಏರಿಯಾ ಮಾರ್ಕೆಟ್ ಏರಿಯಾಕ್ಕೆ ಬರುವುದಿಲ್ಲ ಎಂದು ಹೇಳಿದರು. ಈ ರೀತಿ ಹೈಕೋರ್ಟಿನವರು ಎರಡು ಸಾರಿ ಮಾಡಿದ್ದು ಸರ್ಕಾರದ ಗಮನದಲ್ಲಿದೆ. 1966ನೇ ಇಸವಿಯಿಂದ 1968ನೇ ಡಿಸೆಂಬರ್‌ರವರೆಗೂ ಚೀಪ್ ಮಾರ್ಕೆಟಿಂಗ್ ಏರಿಯಾ ಯಾವುದು ಇರಬೇಕೆಂದು ಹುರುಳಿಲ್ಲದ ನೋಟಿಫಿಕೇಷನ್ ಮಾಡಿದಿರಿ. ಪುನರಪಿ 1968ನೇ ಡಿಸೆಂಬರ್‌ನಲ್ಲಿ ಇದಕ್ಕೆ ತಿದ್ದುಪಡಿ ಮಾಡಿದಿರಿ. ರೈತರ ಹಿತಸಾಧನೆಗೆಂದು ಹೇಳಿ ಇದುವರೆಗೂ ಮಾರ್ಕೆಟಿಂಗ್ ಫೀಸ್ ಕಲೆಕ್ಟ ಮಾಡಿದಿರಿ. ಹೀಗೆ 1966ರಿಂದ 1969ರವರೆಗೂ ಕಲೆಕ್ಟ ಮಾಡಿದಂಥ ಫೀಸ್ ಆಗಲಿ ಕಮೀಷನ್ ಆಗಲಿ ಅದು ಇಲ್‌ಲೀಗಲ್, ಕಾಯಿದೆ ಬದ್ಧವಾಗಿಲ್ಲ, ಈ ಮಾತನ್ನು ತಾವು ಒಪ್ಪಿಕೊಳ್ಳ

(ಶ್ರೀ ಎಂ. ನಾಗಪ್ಪ)

ಬೇಕು. ಇಂತಹ ಒಂದು ಪರಿಸ್ಥಿತಿಯನ್ನು ಇದುವರೆಗೂ ನಡೆಸಿಕೊಂಡು ಬಂದಿದ್ದೀರಿ. ಇದು ರೈತರ ಹಿತಸಾಧನೆ ಆಗತಕ್ಕಂಥ ಮಸೂದೆ ಎಂದು ಹೇಳುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ರೈತರ ಹಿತಸಾಧನೆ ಆಗತಕ್ಕಂಥ ಮಸೂದೆ ಎಂದು ಹೇಳುವ ಹಾಗಿದ್ದರೆ 2 ರೂಪಾಯಿ ತೆಗೆದುಕೊಳ್ಳುವುದನ್ನು ವಿರೋಧ ಮಾಡಬೇಕಾಗಿತ್ತು. ಆದುದರಿಂದ ಈಗ ತಂದಿರುವ ತಿದ್ದುಪಡಿ ನೋಡಿದರೆ ಅಸಂತೋಷವಾಗುತ್ತದೆ. ಇದರಲ್ಲಿ ಒಂದೇ ಒಂದು ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ದಯವಿಟ್ಟು ತಾವು ಒರಿಜನಲ್ ಆಕ್ಟ್ 130ರಲ್ಲಿ ಏನು ಇದೆ ಎನ್ನುವುದನ್ನು ನೋಡಿ. ಅದು ಈ ರೀತಿ ಇದೆ—

> 130: Administrator to exercise powers and perform duties of market committees not validly constituted or in the working of which a deadlock is created: (1) Notwithstanding anything contained in this Act, or the rules, if at any time it shall appear to the State Government, that on account of a decision or order of a competent court, a market committee has not been validly constituted under this Act or that it is disabled from functioning or that the number of seats required to be filled by election under sub-section (2) of section 39 is not filled, or on any other account, the Government may by notification, cause all or any other powers and duties of the market committee and its chairman to be exercised and performed by such officer in such manner and for such period and subject to such conditions as it may, by notification, direct.
>
> (2) All the powers and the duties of the market committee exercised and performed *bona fide* till the date of the notification referred to in sub-section (1), by the persons who constituted such market committee shall be deemed to have been validly exercised and performed by the said persons; and no acts done by the said persons shall be deemed to be invalid or called in question on the ground merely that they were not member of a validly constituted market committee."

ಸ್ವಾಮಿ ತಾವು 130ನೇ ಸೆಕ್ಷನ್ ಅನ್ನು ಅವಲೋಕಿಸಿದರೆ ಮತ್ತು ರಾಜ್ಯಪಾಲರು ಹೊರಡಿಸಿರುವ ಆರ್ಡಿನೆನ್ಸ್‌ನಲ್ಲಿನ ಕ್ಲಾಜ್ 11 ಅಂದರೆ 154 ಎ ಸೆಕ್ಷನ್ ಅನ್ನು ಓದಿದರೆ ತಮಗೇ ಇವರಲ್ಲಿರುವ ವ್ಯತ್ಯಾಸ ಗೊತ್ತಾಗುತ್ತದೆ. ಹಿಂದೆ ಮಾಡಿದಂಥ ಕಮಿಟಿಗಳನ್ನು 19—7—69ಕ್ಕೆ ಮುಕ್ತಾಯಗೊಳಿಸುತ್ತೇವೆ; ಅದಾದನಂತರ ಇಂಥಿಂಥ ಆಡಳಿತಾಧಿಕಾರಿಗಳನ್ನು ನೇಮಕ ಮಾಡುತ್ತೇವೆ ಎನ್ನುವ ಮಾತನ್ನು ಆರ್ಡಿನೆನ್ಸ್ ಕ್ಲಾಜ್ 11ರಲ್ಲಿ ಹೇಳಿದ್ದಾರೆ. ಮೂಲ ಕಾಯಿದೆಯಲ್ಲಿರುವ 130ನೇ ಸೆಕ್ಷನ್ನಿಗೂ, ಆಮೇಲೆ ರಾಜ್ಯಪಾಲರು ಹೊರಡಿಸಿದಂಥ ಆರ್ಡಿನೆನ್ಸ್‌ನಲ್ಲಿರುವ 154ಎ ಎರಡನ್ನೂ ನೋಡಿದರೆ Redundant clauses are being introduced in one Act. ಸೆಕ್ಷನ್ 130ರ ಪ್ರಕಾರ ಸರ್ಕಾರಕ್ಕೆ ಒಂದು ಅಧಿಕಾರವಿದೆ. ಕೋರ್ಟ್ ಆರ್ಡರ್ ಪ್ರಕಾರವಾಗಲೀ, ಅಥವಾ ಯಾವುದೇ ಕಾರಣದಿಂದಾಗಲೀ ಇರತಕ್ಕ ಮಾರ್ಕೆಟ್ ಕಮಿಟಿಗಳನ್ನು ಮಾರ್ಪಾಡು ಮಾಡಬೇಕಾದ ಪರಿಸ್ಥಿತಿ ಉದ್ಭವಿಸಿದರೆ ಅದಕ್ಕೆ 130ನೇ ಸೆಕ್ಷನ್ ಪ್ರಕಾರ ಬೇಕಾದಷ್ಟು ಕ್ರಮ ತೆಗೆದುಕೊಳ್ಳಬಹುದಾಗಿದೆ.

4-00 P.M.

Sri P. M. NADGOUDA.—Section 130 can be availed against particular committees. The provisions made under the Ordinance of the amending Bill is against all the committees. We cannot avail of the original provision in respect of all committees.

ಶ್ರೀ ಎಂ. ನಾಗಪ್ಪ.—130ನೇ ಸೆಕ್ಷನ್ ಒಂದೇ ಕಮಿಟಿಗೆ ಮಾತ್ರ ಅನ್ವಯಿಸುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. The Market Committee has not been validly constituted under this Act. ಕೋರ್ಟಿನ ಒಂದು ನಿರ್ದೇಶನದ ಪ್ರಕಾರ ಎಂದು ಇದೆಯೋ ಹೊರತು ಒಂದೇ ಕಮಿಟಿ ಎಂದು ಇಲ್ಲ. ಎಲ್ಲ ಕಮಿಟಿಗಳೂ ಇಲ್ಲೀಗಲ್ ಎಂದು ಹೇಳತಕ್ಕ ಅಧಿಕಾರವನ್ನು ಕೊಟ್ಟಿದೆ. ನಾನು ಹೇಳತಕ್ಕ ಮಾತು ಏನೆಂದರೆ, ನನಗೆ ತಿಳಿದ ಮಟ್ಟಿಗೆ ನಮ್ಮ ರಾಜ್ಯದ ಹೈಕೋರ್ಟ್ ಸದ್ಯದಲ್ಲಿರುವ ಕಾಯಿದೆಯ ಪ್ರಕಾರ ಇರತಕ್ಕ ಸಮಿತಿಗಳು ಇಲ್ಲೀಗಲ್ ಎಂದು ಹೇಳಲಿಲ್ಲ. ಹೈಕೋರ್ಟಿನ ತೀರ್ಪಿನಲ್ಲಿರುವ ಅದಕ್ಕೆ ಸಂಬಂಧಪಟ್ಟ ಪ್ಯಾರಾ ಓದಿ ತೋರಿಸಿರಿ. The present committees are validly constituted. They will remain and continue to work until a fresh committee is constituted under section 10 of the Act.

ಶ್ರೀ ಪಿ. ಎಂ. ನಾಡಗೌಡ.—ಸೆಕ್ಷನ್ 102ರ ಪ್ರಕಾರ ಸರ್ಕಾರ ಎಲ್ಲ ಕಮಿಟಿಗಳಿಗೆ ನಾಮಕರಣ ಮಾಡುವ ಅಧಿಕಾರವಿದೆ.

> "On no account they can be continued under the new Act and the Government should take steps to nominate them. It is a categorical direction from the Court. In defference to the decision of the High Court, the Government is forced to take it.

ಎಂದು ಹೇಳಿದ್ದಾರೆ.

ಶ್ರೀ ಎಂ. ನಾಗಪ್ಪ.—ಸನ್ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಏನು ಹೇಳುತ್ತಿದ್ದೆ ಅದನ್ನು ಮಾನ್ಯ ಮಂತ್ರಿಗಳು ಸಮರ್ಥಿಸಿದರು ಎಂದು ನಾನು ಭಾವಿಸಿದ್ದೇನೆ. ನಾನು ಹೇಳತಕ್ಕುದಾದರೂ ಏನೆಂದರೆ, ಹೈಕೋರ್ಟ್ ಕ್ಯಾಟಗಾರಿಕಲ್ ಆಗಿ, ಸ್ಪೆಸಿಫಿಕ್ ಆಗಿ ಚುನಾವಣೆಗಳನ್ನು ಮಾಡುವುದಕ್ಕೆ ಮುಂಚಿತವಾಗಿ ನಡುಗಾಲದ ಕಮಿಟಿಯನ್ನು ನೇಮಕ ಮಾಡಬೇಕು ಎನ್ನುವ ಆದೇಶವನ್ನು ಕೊಟ್ಟಿದೆ. ಸರ್ಕಾರದಲ್ಲಿ ವಾಸ್ತವಿಕವಾಗಿ ಪ್ರಜಾಸತ್ತೆಯ ಬೆಳಕನ್ನು ರೈತರಲ್ಲಿ ಬೀರಬೇಕಾಗಿತ್ತು ಎನ್ನುವ ಉದ್ದೇಶವಿದ್ದರ ಇಂಥ ತಿದ್ದುಪಡಿಯನ್ನು ಮಾಡಬೇಕಾದ ಪ್ರಸಂಗವಿರಲಿಲ್ಲ. ಈಗಾಗಲೇ ಮಾನ್ಯ ಕೆ. ಎಚ್. ಪಾಟೀಲರು ಹೇಳಿದಂತೆ ಸೆಕ್ಷನ್ 10ನ್ನು ರಿಪೀಲ್ ಮಾಡಿದ್ದರೆ, ಅದಕ್ಕೆ ಬೇಕಾದಂಥ ತಿದ್ದುಪಡಿಯನ್ನು ಮಾಡಿದ್ದರೆ ಮಾತ್ರ ಚೆನ್ನಾಗಿತ್ತು. 130ನೇ ಸೆಕ್ಷನ್ ಪ್ರಕಾರ, ಯಾವುದೋ ಒಂದು ಕಮಿಟಿ ಇದ್ದರ ಮಾತ್ರ ಆ ಕಮಿಟಿಯನ್ನು ಮುಂದುವರಿಸಿ, ಸರ್ಕಾರ ಹಾಕಬೇಕಾದ ಆಡಳಿತಾಧಿಕಾರಿಯನ್ನು ನೇಮಕ ಮಾಡಿಕೊಂಡು ಆಡಳಿತವನ್ನು ನಡೆಸಬಹುದಾದ ಪರಿಸ್ಥಿತಿ ಇತ್ತು. ಆದರೆ ಟ್ರಾನ್ಸಿಟರಿ ಪ್ರಾವಿಜನ್ಸ್ ಎಂದು ಏನು ಹೊಸ ಸೆಕ್ಷನ್ ಸೇರಿಸುವುದಕ್ಕಾಗಿ ಸಭೆಯ ಮುಂದೆ ತಂದಿದ್ದಾರೆ ಅದು ಸರಿಯಾದುದಲ್ಲ, ಪ್ರಜಾಸತ್ತೆಗೆ ಸಂಪೂರ್ಣವಾಗಿ ವಿರೋಧಾಭಾಸವನ್ನುಂಟು ಮಾಡತಕ್ಕ ಕ್ಲಾಜ್ ಎಂದು ನಾನಾದರೂ ಭಾವಿಸಿದ್ದೇನೆ. ಆರ್ಡಿನೆನ್ಸ್ ಕ್ಲಾಜ್ 154, (ಸಿ) (1) ಎಕ್ಸ್‌ಪ್ಲನೇಷನ್ ನೋಡಿದರೆ ಅದರಲ್ಲಿ ಸ್ಪಷ್ಟವಿದೆ. ಅದನ್ನು ಸಭೆಯ ಗಮನಕ್ಕೆ ಮತ್ತು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅದರಲ್ಲಿ ಸ್ವಲ್ಪ ಮಾರ್ಪಾಡು ಮಾಡಿ ಈಗ ತಂದಂಥ ವಿಧೇಯಕದಲ್ಲಿ ಬೇರೆ ರೀತಿಯಲ್ಲಿ ರೂಪಿಸಿ ಯಾರಾದರೂ ಅಧಿಕಾರಿ ಆಗಬಹುದು ಎಂದು ಹೇಳಿದ್ದಾರೆ. ಎಷ್ಟರಮಟ್ಟಿಗೆ ಅದು ಸಮಂಜಸವಾಗಿದೆ ಎನ್ನುವ ಮಾತನ್ನು ನಾನು ವಿಧೇಯಕದ ಮೇಲೆ ಮಾತನಾಡುವಾಗ ಹೇಳುತ್ತೇನೆ. ತಿದ್ದುಪಡಿ ವಿಧೇಯಕದಲ್ಲಿ ಹೇಳಿರುವುದನ್ನು ನೋಡಿದರೆ ಸಣ್ಣ ಮಾರ್ಕೆಟ್ ಕಮಿಟಿಗಳಿಗೆ ದೊಡ್ಡ ಅಧಿಕಾರಿ, ದೊಡ್ಡ ಮಾರ್ಕೆಟ್ ಕಮಿಟಿಗಳಿಗೆ ಸಣ್ಣ ಅಧಿಕಾರಿ, ಈ ರೀತಿ ಹಾಕಬಹುದು ಎಂದಾಗುತ್ತದೆ. ಸಬ್ ಕ್ಲಾಜ್ (ಸಿ) ನಲ್ಲಿ 1, 2, 3 ಎಂದು ಎಕ್ಸ್‌ಪ್ಲನೇಷನ್ ಕೊಟ್ಟಿದ್ದಾರೆ. ಜಿಲ್ಲಾ ಸ್ಥಳದಲ್ಲಿರುವ ಮಾರ್ಕೆಟಿಂಗ್ ಕಮಿಯಲ್ಲಿ ಜಿಲ್ಲಾಧಿಕಾರಿಗಳು ಅದಕ್ಕೆ ಅಧ್ಯಕ್ಷರು ಅಥವ ಅಡ್ಮಿನಿಸ್ಟ್ರೇಟರ್ ಆಗುತ್ತಾರೆಂದು ಹೇಳಿದ್ದಾರೆ. ರೆವೆನ್ಯೂ ಸಬ್ ಡಿವಿಜನಲ್ಲಿ ಹೆಡ್‌ಕ್ವಾರ್ಟರ್ ಪ್ಲೇಸ್‌ನಲ್ಲಿ ಅಸಿಸ್ಟೆಂಟ್ ಕಮೀಷನರಿದ್ದರೆ ಮಾರ್ಕೆಟ್‌ಯಾರ್ಡಿಗೆ ಅವರೇ ಅಧಿಕಾರಿಯಾಗುತ್ತಾರೆಂದು ಆರ್ಡಿನೆನ್ಸ್‌ನಲ್ಲಿ ಇದೆ. ತಾಲ್ಲೂಕಿನಲ್ಲಿ ತಾಸಿಲ್ದಾರರು ಅಧಿಕಾರಿಯಾಗುತ್ತಾರೆ ಎಂದು ಇದೆ. 11ನೆಯ ಕ್ಲಾಜಿನ 1,2 ಮತ್ತು 3ನೆಯ ಎಕ್ಸ್‌ಪ್ಲನೇಷನ್‌ಗಳಲ್ಲಿ ಇದನ್ನು ಸೂಚಿಸಲಾಗಿದೆ. ಇದರಿಂದ ಬಹಳ ಕಷ್ಟವಾಗುತ್ತದೆ. ಉದಾಹರಣೆಗೆ ನಮ್ಮ ರಾಯಚೂರು ಜಿಲ್ಲೆಯಲ್ಲಿ ರಾಯಚೂರು ಟೌನಿನಲ್ಲಿ ಡಿ ಸಿ ಅಧಿಕಾರಿಯಾಗುವರು. ಆದರೆ ಕೊಪ್ಪಳ್ ಮತ್ತು ಗಂಗಾವತಿ ವಿಚಾರ ನೋಡಿ. ಕೊಪ್ಪಳ್‌ನಲ್ಲಿ ಮಾರ್ಕೆಟ್ ಕಮಿಟಿ ಬೆಳವಣಿಗೆ ಎಷ್ಟು ಮಟ್ಟಿಗೆ ಆಗಿದೆಯೆಂಬುದನ್ನು

(ಶ್ರೀ ಎಂ. ನಾಗಪ್ಪ)

ನೋಡಿ. ಈ ಎರಡೂ ನೋಡಿದರೆ ಕೊಪ್ಪಳ್ ಸಣ್ಣದು, ಅದಕ್ಕೆ ಅಸಿಸ್ಟೆಂಟ್ ಕಮೀಷನರು ಅಡ್ಮಿನಿಸ್ಟ್ರೇಟರಾಗುವರು. ಆದರೆ ಗಂಗಾವತಿ ಮಾರ್ಕೆಟ್ ಕಮಿಟಿ ವಿಚಾರ ತೆಗೆದುಕೊಂಡರೆ ಅದು ರಾಯಚೂರಿನ ಮಾರ್ಕೆಟ್ ಕಮಿಟಿಯೊಡನೆ ಕಂಪೀಟ್ ಮಾಡುವ ಸ್ಟೇಜಿನಲ್ಲಿದೆ. ಅಂಥ ಶಕ್ತಿ ಇರುವ ಕಡೆಗೆ ನಿಮ್ಮ ಆರ್ಡಿನೆನ್ಸ್ ಪ್ರಕಾರ ತಾಸಿಲ್ದಾರರು ಅಧಿಕಾರಿಯಾಗುವರು. ಅದುದರಿಂದ ಯೋಚನೆ ಮಾಡಬೇಕು. ತಾಸಿಲ್ದಾರರು ಬೇಡ ಎಂದು ಹೊಸದಾಗಿ ತಿದ್ದುಪಡಿ ತಂದಿದ್ದಾರೆಂದು ನಾನು ಭಾವಿಸುತ್ತೇನೆ. ರವಿನ್ಯೂ ಡಿವಿಜನ್‌ನಲ್ಲಿ, ಸಬ್ ಡಿವಿಜನ್‌ನಲ್ಲಿ, ಅಸಿಸ್ಟೆಂಟ್ ಕಮಿಷನರ್ ಅಪಲೇಟ್ ಅಥಾರಿಟಿ ಎಂದು ಹೇಳುವರು. ಹಾಗೆ ಹೇಳಿ ಅಸಿಸ್ಟೆಂಟ್ ಕಮೀಷನರಿಗೆ ಸಣ್ಣ ಮಾರ್ಕೆಟ್ ಅಧಿಕಾರ ಕೊಡುತ್ತಾರೆ. ಈ ದೃಷ್ಟಿಯಿಂದ ನೋಡಿದರೆ ಬಹಳ ಅನಾಮಲಸ್ ಆಗುವುದು. ವಿಧೇಯಕದಲ್ಲಿ ತಿದ್ದುಪಡಿ ಮಾಡಿರುವುದಾಗಿ ಹೇಳುತ್ತಾರೆ. ವಿಧೇಯಕ ಬಂದಾಗ ಅದನ್ನು ನೋಡುತ್ತೇನೆ. ಆದರೆ ಇಷ್ಟಾದರೂ ಗಮನಿಸಿದ್ದೀರಿ, ಸಂತೋಷ.

ಎರಡನೆಯದಾಗಿ ಈ ಆರ್ಡಿನೆನ್ಸ್ ಹೊರಡಿಸಬೇಕಾದ ಪ್ರಮೇಯವೇನಿತ್ತು? ಇದು ಮುಖ್ಯವಾದ ವಿಷಯ. ಇದನ್ನು 18ನೇ ಜುಲೈ 1969 ರಲ್ಲಿ ಹೊರಡಿಸಲಾಗಿದೆ, ಇಲ್ಲಿ 14ನೇ ಆಗಸ್ಟ್ 1969 ರಲ್ಲಿ ಈ ಸಭೆ ಸೇರಿದೆ, ಸೇರಿ ಒಂದು ತಿಂಗಳು ಕೂಡ ಆಗಿಲ್ಲ. ಹಿಂದಿನ ಸಭೆಯನ್ನು ಅಸೆಂಬ್ಲಿ ಮತ್ತು ಕೌನ್ಸಿಲುಗಳನ್ನು 10ನೇ ಏಪ್ರಿಲ್ 1969 ರಲ್ಲಿ ಮುಂದೂಡಲಾಗಿದೆ. ನನಗೆ ಗೊತ್ತಿರುವ ಹಾಗೆ ಹೈಕೋರ್ಟ್ ಜಡ್ಜ್‌ಮೆಂಟ್ ಮಾರ್ಚಿ 19 ಕ್ಕೆ ಮುಂಚೆ ಫೆಬ್ರುವರಿ 3 ಅಥವಾ 4ರಲ್ಲಿ ಆಗಿರಬೇಕು. ಅದಾದಮೇಲೆ ಸುಮಾರು 40 ದಿವಸಗಳ ಕಾಲ ಈ ಸಭೆ ನಡೆಯುತ್ತಿತ್ತು. ಆಗ ಈ ಸಭೆಯ ಮುಂದೆ ಇಂಥ ಮಸೂದೆಯನ್ನು ತರಲು ಏನು ಅನಾನುಕೂಲವಿತ್ತು ಎಂಬುದನ್ನು ಸ್ಪಷ್ಟಪಡಿಸಬೇಕು. ಅದಾದನಂತರ ರಾಜ್ಯಪಾಲರ ಅಜ್ಞೆಯಾದ 26 ದಿವಸಗಳಲ್ಲಿ ಈ ಸಭೆ ಮತ್ತೆ ಸೇರಿವೆ ಹಾಗಿರುವಾಗ 213 ನೆಯ ಆರ್ಟಿಕಲ್ ಪ್ರಕಾರ ಆರ್ಡಿನೆನ್ಸ್ ಹೊರಡಿಸಬೇಕಾದ ಅವಶ್ಯಕತೆ ಯೇನಿತ್ತು ಎಂದು ನಾನು ಪ್ರಶ್ನೆಮಾಡುತ್ತೇನೆ. ಈ ಸಭೆ ಸೇರುವುದಕ್ಕೆ ಮುಂಚೆ ಹೈಕೋರ್ಟ್ ಜಡ್ಜ್‌ಮೆಂಟ್ ಆಗಿತ್ತು, ಅನಂತರ ಸುಮ್ಮನಿದ್ದಿರಿ. ಮತ್ತೆ 14 ನೆಯ ತಾರೀಖು ಈ ಸಭೆ ಸೇರಿದೆ. ಆದರೆ ಸೂಕ್ತ ರೀತಿಯಲ್ಲಿ ಕ್ರಮ ತೆಗೆದು ಕೊಳ್ಳದೆ ತಾವು ರೈತರಿಗೆ ಅಹಿತವನ್ನುಂಟುಮಾಡಿದ್ದೀರಿ. ಅದನ್ನು ಗಮನಕ್ಕೆ ತರುತ್ತೇನೆ. ಹೈದರಾಬಾದು ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಆಗಿರುವ ಎರಡು ಹೈಕೋರ್ಟ್ ಜಡ್ಜ್‌ಮೆಂಟುಗಳನ್ನು ಗಮನಿಸಿ ಕಾನೂನನ್ನು ಮಾಡಿದ್ದಾರೆ. ಶ್ರೀ ಎ. ಆರ್. ಸೋಮನಾಥ ಐಯ್ಯರ್‌ರವರು ಮತ್ತು ಹೆಗ್ಗಡೆಯವರು ಮಾರ್ಕೆಟ್ ಯಾರ್ಡ್ ಅಂದರೇನು ಎಂಬುದನ್ನು ತಿಳಿಸಿದ್ದಾರೆ. 3ನೇ ಕ್ಲಾಸಿನಲ್ಲಿ ಸೆಕ್‌ಷನ್ 6 ಅಮೆಂಡ್ ಮಾಡುತ್ತಾ (2 ಎ) ಸೇರಿಸಿದ್ದಾರೆ, ಅದನ್ನು ನೋಡಬೇಕು.

Mr. Chairman [SRI B. P. KADAM] in the Chair

Original ಆಕ್ಟಿನಲ್ಲಿ ಎರಡನೆಯ ಕ್ಲಾಜನ್ನು ಓದಿದರೆ ಮಾರ್ಕೆಟ್ ಯಾರ್ಡ್ ಎಂದರೇನು ಎಂಬುದು ಗೊತ್ತಾಗುವುದು. ಆಗಲೇ ಹೇಳಿದಹಾಗೆ ಹೈದರಾಬಾದು ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಎರಡು ಜಡ್ಜ್‌ಮೆಂಟ್ ಹೈಕೋರ್ಟ್ ಕೊಟ್ಟಿದೆ. ಆದರೆ ಒಂದೇ ಸ್ಥಳದಲ್ಲಿ ಒಂದು ಗ್ರಾಮದ ಅಥವ ಪಟ್ಟಣದ ಪರಿಮಿತಿಯಲ್ಲಿರುವ ಒಂದು ಸ್ಥಳವನ್ನು ಮಾರ್ಕೆಟ್ ಎಂದು ಹೇಳಬಹುದೆಂದಿದೆ. ಒಂದು ಮಾರ್ಕೆಟ್ ಪರಿಮಿತಿಯಲ್ಲಿರದೆ ಎರಡು ಗ್ರಾಮಗಳ ನಡುವೆ ಅಥವ ಮೂರು ಗ್ರಾಮಗಳ ನಡುವೆ ಬರುವುದನ್ನೂ ಬೇಕಾದಾಗ ಮಾರ್ಕೆಟ್ ಸ್ಥಾಪಿಸಲು ಅವಕಾಶವಿರುವಂತೆ ತಿದ್ದುಪಡಿಮಾಡಲಾಗಿದೆ. ಇದರಲ್ಲಾಗುವ ಅನ್ಯಾಯವನ್ನು ಹೇಳುತ್ತೇನೆ. ಇದಕ್ಕೆ ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಇದೆ. ಏಕೆ ಹೀಗೆ ಮಾಡುವುದು ಎಂದು ಕೇಳುತ್ತೇನೆ. 25ನೇ ಫೆಬ್ರುವರಿ 1969ರಲ್ಲಿ ಒಂದು ಸರ್ಕ್ಯುಲರ್ ನೋಟಿಫಿಕೇಷನ್ ಹೊರಟಿರುವದನ್ನು ಸ್ವಲ್ಪ ನೋಡಬೇಕು,

"Notification No. M. C. 39139 RM 1/68-69 dated 25th February 1969.

Schedule A

The locality locally known as "Main Bazaar" within the Town Municipal limits of Gangavathi bounded—

On the East by—Residential houses of Islampur, Durgammanahalla, Sri Mallikarjuna Matha, Sri Channamallikarjuna Rice Mill and Sri Gayatri Rice Mills, Bus Stand."

ಇದರಲ್ಲಿ ಇಸ್ಲಾಂಪುರ ಅನ್ನುವುದು ಸೇರಿಲ್ಲ. ಈ ದೃಷ್ಟಿಯಿಂದ ತಾವು ಈ ತಿದ್ದುಪಡಿಯನ್ನು ತರತಕ್ಕ ಉದ್ದೇಶವಾದರೂ ಏನಿದೆ ಎಂಬುದನ್ನು ನೋಡಿದರೆ 25ನೇ ಫೆಬ್ರುವರಿ 1969ಕ್ಕೆ ಚೀಫ್ ಮಾರ್ಕೆಟಿಂಗ್ ಆಫೀಸರು ಹೊರಡಿಸಿದಂತಹ ಒಂದು ನೋಟಿಫಿಕೇಷನ್‌ನ್ನು ರೆಗ್ಯುಲರೈಸ್ ಮಾಡಬೇಕೆಂಬ ಉದ್ದೇಶದಿಂದ ತಾವು ಇದನ್ನು ತಂದಿದ್ದೀರಿ. ಈ ತಿದ್ದುಪಡಿ ಪ್ರಕಾರ ನಾನು ಅಧ್ಯಕ್ಷರ ಗಮನಕ್ಕೆ ತರುವುದೇನೆಂದರೆ ಇದಕ್ಕಿಂತ ಮುಂಚೆ ನಾನು ಈ ಸಭೆಯಲ್ಲಿ ಈ ಬಿಲ್ಲಿನ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಹೇಳಿದ್ದೆ, ಏನೆಂದರೆ ರೆಸ್ಟ್ರಿಕ್ಷನ್ ಆಫ್ ಟ್ರೇಡ್ ಅಂದರೆ ಏನು ಎಂಬುದನ್ನು ಗಮನಿಸಬೇಕು, ಆ ಮಾತು ಈ ಸಭೆಯಲ್ಲಿ ಬಂದಿತ್ತು. ಈಗ ಅದು ಯಾವ ಆರ್ಟಿಕಲ್ ಪ್ರಕಾರ ಅಪ್ಲೈ ಆಗುತ್ತದೆ ಎಂಬುದನ್ನು ಹೇಳುತ್ತೇನೆ. ಕ್ಲಾಸ್ 2 (ಎ) ನೋಡಿದರೆ ಃ ಅದು ಈ ರೀತಿ ಇದೆ.

Section 2A is the main section which is going to create a certain market for certain villages or for certain towns.

ತಾವು ಮಾಡುವುದು, ಒಂದು ಏರಿಯಾದಲ್ಲಿರತಕ್ಕ ಒಂದು ಗ್ರಾಮವೇ ಅಲ್ಲ, ಆ ಏರಿಯಾದಲ್ಲಿ ಬರತಕ್ಕ ಒಂದು ಅಥವಾ ಹೆಚ್ಚಿನ ಗ್ರಾಮದಲ್ಲಿ ಬರತಕ್ಕ ಮಾರ್ಕೆಟ್ ಕಮಿಟಿಯನ್ನು ಖಾಯಂ ಮಾಡಬೇಕೆನ್ನತಕ್ಕ ಒಂದು ನಿಯಮವನ್ನು ಇದರಲ್ಲಿ ಸೇರಿಸುತ್ತಾ ಇದ್ದೀರಿ. ತಮ್ಮ ಕ್ಲಾಸ್ 4 ಮತ್ತು 6ರ ಪ್ರಕಾರ ನೋಟಿಫಿಕೇಷನ್ ಮಾಡುವುದಕ್ಕೆ ಮುಂಚೆ ಅಲ್ಲಿರತಕ್ಕ ರೈತರು, ಅಲ್ಲಿರತಕ್ಕ ವ್ಯಾಪಾರಸ್ಥರು ಮತ್ತು ಇತರ ಜನರೂ ಸಹಿತ ಅದಕ್ಕೆ ವಿರೋಧ ಮಾಡತಕ್ಕ ಹಕ್ಕು ಉಂಟು, ಅಂತಹ ಒಂದು ಹಕ್ಕನ್ನು ಇಲ್ಲಿ ಮೊಟಕು ಮಾಡಿದ್ದೀರಿ. ನಾನು ಒಂದು ಉದಾಹರಣೆ ಕೊಟ್ಟೆ, ಅದರಂತೆ ಮಾರ್ಕೆಟ್ ಕಮಿಟಿಯಲ್ಲಿ ಅನೇಕ ಗ್ರಾಮಗಳು ಮತ್ತು ಆ ಗ್ರಾಮದ ಅನೇಕ ಭಾಗಗಳನ್ನು ಅದರಲ್ಲಿ ಸೇರಿಸಿದ್ದೀರಿ. ರೆಸ್ಟ್ರಿಕ್ಷನ್ ಆಫ್ ಟ್ರೇಡ್ ಅಂದರೇನು ? ಲೈಸೆನ್ಸ್ ಕೊಡುವುದು, ಪರ್ಮಿಟ್ ಕೊಡುವುದು. ರೈತರು ಮತ್ತು ಅಲ್ಲಿರತಕ್ಕ ದುಕಾನು ನಡೆಸತಕ್ಕವರು ಆ ಗ್ರಾಮಗಳಲ್ಲಿ ಅಥವಾ ಹಳ್ಳಿಗಳಲ್ಲಿ ಅಥವಾ ಪಟ್ಟಣಗಳಲ್ಲಿ ಅಲ್ಲೇ ವ್ಯಾಪಾರ ಮಾಡಬೇಕು, ಬೇರೆ ಕಡೆ ಮಾಡಕೂಡದು ಎಂಬ ಒಂದು ಅಧಿಕಾರವನ್ನು ಆಜ್ಞೆಯನ್ನು ಈ ಆರ್ಡಿನೆನ್ಸ್ ಪ್ರಕಾರ ಹೊರಡಿಸಿದ್ದೀರಿ. ಅಂದ ಮೇಲೆ 2 (ಎ) ಹೊರಡಿಸಬೇಕಾದರೆ. It is the fundamental right of the Governmen t to form a market committee in a certain market area. 2 (ಎ) ಪ್ರಕಾರ ಈ ಮಾರ್ಕೆಟಿಂಗ್ ಏರಿಯಾ ನಿರ್ಣಯ ಮಾಡುವುದು. ಒಂದು ಅಥವಾ ಎರಡು ಗ್ರಾಮಗಳನ್ನು ಸೇರಿಸಿ ಎಂದರೆ ಆ ಗ್ರಾಮಗಳಲ್ಲಿರತಕ್ಕ ಜನ ಅಥವಾ ಅಲ್ಲಿರತಕ್ಕ ವ್ಯಾಪಾರಸ್ಥರು, ರೈತರು ತಮ್ಮ ಮಾಲುಗಳನ್ನು ಬೇರೆಯವರ ಹತ್ತಿರ ಮಾರಾಟ ಮಾಡಕೂಡದು. ಡಿಕ್ಲೇರ್ ಮಾಡಿದಂಥಹ ಏರಿಯಾದಲ್ಲಿ ಮಾತ್ರ ಅವರು ತಮ್ಮ ಮಾಲುಗಳನ್ನು ಮಾರಾಟ ಮಾಡಬೇಕು ಎಂದು ಹೇಳಿ ಒಂದು ಶಾಸನವನ್ನು ತಂದಿದ್ದೀರಿ. ತಮ್ಮ ಮೂಲಕ ಮಾನ್ಯ ಸಭೆಯ ಗಮನವನ್ನು ಸೆಳೆಯಬಯಸುತ್ತೇನೆ. ತಾವು ದಯವಿಟ್ಟು ಆರ್ಟಿಕಲ್ 304ನ್ನು ನೋಡಬೇಕು.

Article 304(b) says :

"impose such reasonable restrictions on the freedom of trade, commerce or intercourse with or within that State as may be required in the public interest.

Provided that no Bill or amendment for the purposes of clause (b) shall be introduced or moved in the Legislature of a State without the previous sanction of the President."

(ಶ್ರೀ ಎಂ. ನಾಗಪ್ಪ)

As per clause 2, a condition is there, namely, if any merchant is carryine on business within a particular area wherein a market Committee is deemed to be formed under section 2A, it will be deemed to be a committee constituted under this amendment. Therefore, definitely it puts a restriction on trade. ನಾನು ಖಚಿತವಾಗಿ ಈ ಸಭೆಯ ಗಮನಕ್ಕೂ ಮಾನ್ಯ ಅಧ್ಯಕ್ಷರ ಗಮನಕ್ಕೂ ಮತ್ತು ತಮ್ಮ ವತಿಯಿಂದ ಮಾನ್ಯ ಮಂತ್ರಿಗಳ ಗಮನಕ್ಕೂ ಈ ವಿಷಯವನ್ನು ಸ್ಪಷ್ಟವಾಗಿ ತರುತ್ತೇನೆ. ದಯವಿಟ್ಟು ತಾವು ಇದನ್ನು ಪ್ರೆಸ್ಟೀಜ್ ಅಂತ ತಿಳಿದುಕೊಳ್ಳಕೂಡದು, ಏಕೆಂದರೆ ನಾಳೆ ಏನಾದರೂ ಇದರಿಂದ ನಷ್ಟವಾಯಿತು ಎಂದರೆ ನಿಮಗೆ ಯಾರಿಗೂ ಆಗುವುದಿಲ್ಲ, ಸರ್ಕಾರಕ್ಕೂ ಅಲ್ಲ, ಲಾ ಡಿಪಾರ್ಟ್‌ಮೆಂಟಿನಲ್ಲಿ ಕುಳಿತು ಅಡ್ವೈಸ್ ಮಾಡುವವರಿಗೂ ಅಲ್ಲ ಮತ್ತು ಸರ್ಕಾರದಲ್ಲಿರತಕ್ಕ ನಿಮಗೆ ಅಡ್ವೈಸ್ ಮಾಡತಕ್ಕ ಸೆಕ್ರೆಟರಿಗಳಿಗೂ ಅಲ್ಲ.

ಶ್ರೀ ಪಿ. ಎಂ. ನಾಡಗೌಡ.—ಸೆಕ್ಷನ್ 2(ಎ) ತಂದಿರುವುದು ರೀಪಿಲ್ಡ್ ಎನ್‌ಅಕ್ಟ್‌ಮೆಂಟ್ ಸಲುವಾಗಿ. ಅಲ್ಲಿ ಏನು ಒಂದು ಸೆಕ್ಷನ್ ಕೊಟ್ಟಿದ್ದಾರೆ ಅದು ಫೈನಲ್ ಅಲ್ಲ ಅಂತ ಸೆಕ್ಷನ್ 6ರ ಕೆಳಗೆ ಚೀಫ್ ಮಾರ್ಕೆಟಿಂಗ್ ಆಫೀಸರು ಇದ್ದಾರೆ, ನೋಟೀಸು ಕೊಟ್ಟು ಎಲ್ಲಾ ಮಾಡಿ ಮಾರ್ಕೆಟಿಂಗ್ ಕಮಿಟಿ ಮಾಡುತ್ತಾರೆ.

ಶ್ರೀ ಎಂ. ನಾಗಪ್ಪ.—ಸನ್‌ಮಾನ್ಯ ಅಧ್ಯಕ್ಷರೇ, ನಾನಾದರೂ ತಿಳಿದುಕೊಂಡಿದ್ದೇನೆ. ಮೊದಲು ಇದ್ದ ಸೆಕ್ಷನ್ 2ರ ಪ್ರಕಾರ ಒಂದು ಪಟ್ಟಣದಲ್ಲಿರತಕ್ಕ ಒಂದು ಭಾಗವನ್ನು, ಒಂದು ಏರಿಯಾವನ್ನು, ಒಂದು ಪ್ಲೇಸನ್ನು ತಾವು ಡಿಫೈನ್ ಮಾಡಿದ್ದೀರಿ. 2(ಎ) ನಿರ್ದಿಷ್ಟವಾಗಿ ಇದೆ. ಇದರ ಪ್ರಕಾರ ರಾಯಚೂರು ಮತ್ತು ಅದರ ಪಕ್ಕದಲ್ಲಿರತಕ್ಕ ಕೆಲವು ಹಳ್ಳಿಗಳನ್ನು ಅದಕ್ಕೆ ಸೇರಿಸಿದರೆ ಅಂತಹ ಭಾಗವನ್ನು ಮಾರ್ಕೆಟಿಂಗ್ ಏರಿಯಾ ಅಂತ ಕ್ಲಾಸ್ 2ರ ಪ್ರಕಾರ ಮಾಡಲಿಕ್ಕೆ ಬರುತ್ತಾ ಇರಲಿಲ್ಲ. ಕ್ಲಾಸ್ 2(ಎ) ಪ್ರಕಾರ ಆ ಲಿಮಿಟ್ಸ್ ಮೀರಿ ಮಾರ್ಕೆಟಿಂಗ್ ಕಮಿಟಿ ಮಾಡಲಿಕ್ಕೆ ಬರುತ್ತದೆ ಎಂಬ ನಿಯಮವನ್ನು ತಾವು ಈ ನೋಟಿಫಿಕೇಷನ್ ಪ್ರಕಾರ ಮಾಡಬಹುದು. ಅದಕ್ಕೆ ಒಂದು ಉದಾಹರಣೆ ಹೇಳಿದೆ, ಗಂಗಾವತಿಯಲ್ಲಿ ನೋಟಿಫಿಕೇಷನ್ ಮಾಡಿದ್ದೀರಿ, ಸೆಕ್ಷನ್ 2ರ ಪ್ರಕಾರ ಆ ರೀತಿ ಮಾಡುವುದಕ್ಕೆ ಬರುತ್ತಾ ಇರಲಿಲ್ಲ. ಇನ್ನೊಂದು ಹಳ್ಳಿ ಭಾಗ ಸೇರಿಸತಕ್ಕ ಅಧಿಕಾರ ಸೆಕ್ಷನ್ 6(2) ಪ್ರಕಾರ ಇರಲಿಲ್ಲ, ಈಗ ಆ ಅಧಿಕಾರ ತಿದ್ದುಪಡಿ ಮಸೂದೆಯಿಂದ ತೆಗೆದುಕೊಂಡು ಅದನ್ನು ವ್ಯಾಲಿಡೇಟ್ ಮಾಡುತ್ತಾ ಇದ್ದೀರಿ. ಇದರಲ್ಲಿರತಕ್ಕ ರಿಸ್ಟ್ರಿಕ್ಷನ್ ಅಂದರೆ ಈಗ ರಾಯಚೂರು ಇದೆ, ಅದರ ಪಕ್ಕದಲ್ಲಿ ರಾಂಪುರ ಇದೆ. ತಾವು ಹೇಳತಕ್ಕ ಪ್ರಕಾರ ಅದನ್ನು ರಾಯಚೂರು ಅಂಡ್ ರಾಂಪುರ ಮಾರ್ಕೆಟ್ ಯಾರ್ಡ್ ಅಂತ ಓದಬೇಕಾಗುತ್ತದೆ. ಆ ರೀತಿ ಆಗುವುದಾದರೆ ರಾಂಪುರದಲ್ಲಿ ವ್ಯಾಪಾರ ಮಾಡುವಂತಹ ಎಲ್ಲಾ ರೈತರು, ದುಕಾನ್‌ದಾರರೂ ತಮ್ಮ ಅಂಗಡಿಗಳನ್ನು ಆ ಮಾರ್ಕೆಟ್ ಏರಿಯಾಕ್ಕೇ ಸಾಗಿಸಬೇಕಾಗುತ್ತದೆ, ಸಾಗಿಸದಿದ್ದರೆ ಅದು ಇಲ್ಲೀಗಲ್ ಆಗುತ್ತದೆ.

They are liable for punishment under this Act. It is definitely a restriction on the trade of the villagers who have been included in the market areas.

ಆದ್ದರಿಂದ ನಾನು ಹೇಳುವುದೇನೆಂದರೆ ತಾವು ಪ್ರೆಸ್ಟೀಜ್ ಮೇಲೆ ನಿಂತುಕೊಳ್ಳಬೇಡಿ. ಈಗಾಗಲೇ ಮಾರ್ಕೆಟ್ ಯಾರ್ಡ್ ಬಗ್ಗೆ ಎರಡು ಹೈಕೋರ್ಟಿನ ತೀರ್ಮಾನಗಳು ಇವೆ. ಇವತ್ತು ಕಾಯಿದೆ ಮಾಡುತ್ತಾ ಇದ್ದೀರಿ, ಬಹಳ ಸಂತೋಷ. ಸಮಂಜಸವಾದ ಉತ್ತರ ಕೊಡುತ್ತೀರಿ ಅಥವಾ ಮೆಜಾರಿಟಿ ಮೇಲೆ ಕೈ ಎತ್ತಿಸುತ್ತೀರಿ, ಈ ಮಸೂದೆಯನ್ನು ಪಾಸ್ ಮಾಡಿಸುತ್ತೀರಿ, ಮತ್ತೆ ನಿಮ್ಮ ಮುಖಕ್ಕೆ ಮಸಿ ಹತ್ತುತ್ತದೆ. ಇದರಿಂದ ರೈತರ ಹಿತವನ್ನು, ಜನತೆಯ ಹಿತವನ್ನು ಎಷ್ಟುಮಟ್ಟಿಗೆ ಸಾಧಿಸಿದಂತಾಗುತ್ತದೆ ಎಂಬ ಮಾತನ್ನು ಸರ್ಕಾರ ಯೋಜನೆ ಮಾಡಬೇಕು.

4-30 P.M.

ಅದಕ್ಕಾಗಿ ನಾನು ಹೇಳುತ್ತಿರುವುದು—ಆರ್ಟಿಕಲ್ 304(ಬಿ) ಪ್ರಕಾರ ಆರ್ಡಿನೆನ್ಸ್ ಒಂದನ್ನು ಹೊರಡಿಸುವುದಕ್ಕೆ ನಮ್ಮ ರಾಷ್ಟ್ರಾಧ್ಯಕ್ಷರಿಂದ ಅಪ್ಪಣೆ ಪಡೆಯಬೇಕು. ಹಾಗೆ ಅಪ್ಪಣೆಯನ್ನು ಪಡೆಯದೆ ಇದರ ಬಗ್ಗೆ ಹೀಗೊಂದು ಆರ್ಡಿನೆನ್ಸ್‌ನ್ನು ಹೊರಡಿಸುವುದಕ್ಕೆ ಬರುವುದಿಲ್ಲ. ಇಂಥ ಒಂದು ಮಸೂದೆ

ಯನ್ನು ಇಲ್ಲಿ ಚರ್ಚೆ ಮಾಡುವುದಕ್ಕೂ ಸಹಾ ಈ ಮಾನ್ಯ ಸಭೆಗೆ ಅಧಿಕಾರವಿಲ್ಲ. ಯಾವ ಒಂದು ಮಸೂದೆಯನ್ನು ಇಲ್ಲಿ ಚರ್ಚೆಮಾಡುವುದಕ್ಕೆ ಈ ಸಭೆಗೆ ಅಧಿಕಾರವಿಲ್ಲವೋ ಅಂಥ ಮಸೂದೆಗೆ ಅಂಗೀಕಾರ ಮುದ್ರೆಯನ್ನು ಒತ್ತುವುದಕ್ಕೆ ಮಾನ್ಯ ರಾಜ್ಯಪಾಲರಿಗೂ ಅಧಿಕಾರವಿಲ್ಲ. ಆರ್ಟಿಕಲ್ 304(ಬಿ) ಪ್ರಕಾರ ಗೌರ್ನರುಗಳಿಗೆ ಅಂಥ ಮಸೂದೆಗೆ ಅಂಗೀಕಾರ ನೀಡುವುದಕ್ಕೆ ಅಧಿಕಾರವಿಲ್ಲ.

Art 213(1).

"If at any time, except when the Legislative Assembly of a State is in session or where there is a Legislative Council in a State, except when both Houses of the Legislature are in session, the Governor is satisfied that circumstances exist which render it necessary for him to take immediate action, he may promulgate such Ordinances as the circumstances appear to him to require :

Provided that the Governor shall not, without instructions from the President, promulgate any such Ordinance if—

(a) a Bill containing the same provisions would under this Constitution have required the previous sanction of the president for the introduction thereof into the Legislature."

ಅದಕ್ಕಾಗೇ ನಾನು ಇದರ ಬಗ್ಗೆ ಹೇಳುವುದೇನೆಂದರೆ—ಆರ್ಟಿಕಲ್ 304(ಬಿ) ಪ್ರಕಾರ ಎಲ್ಲಿ ವ್ಯಾಪಾರ ಅಥವಾ ಒಂದು ಟ್ರೇಡಿಗೆ ಅಡಚಣೆಯುಂಟಾಗುತ್ತದೋ ಅಂಥ ಸಂದರ್ಭದಲ್ಲಿ ಒಂದು ಮಸೂದೆಯನ್ನು ಅದಕ್ಕೆ ಸಂಬಂಧಪಟ್ಟಹಾಗೆ ಈ ಸಭೆಯಲ್ಲಿ ಮಂಡಿಸುವುದಕ್ಕೆ ಅವಕಾಶವಿಲ್ಲ, ಅದನ್ನು ಚರ್ಚೆಮಾಡುವುದಕ್ಕೆ ಈ ಮಾನ್ಯ ಸಭೆಗೆ ಅಧಿಕಾರವೂ ಇಲ್ಲ, ಪಾಸ್ ಮಾಡುವುದಕ್ಕೆ ಮೊದಲೇ ಸಾಧ್ಯವಿಲ್ಲ ಎಂಬುದನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. ಇದೇ ಸಂದರ್ಭದಲ್ಲಿ ನಾನು ಮಾನ್ಯ ಸಭೆಯ ಗಮನಕ್ಕೆ ಇದೇ ವಿಚಾರದಲ್ಲಿ ಕೊಟ್ಟಿರತಕ್ಕ ಒಂದು ಹೈಕೋರ್ಟಿನ ರೂಲಿಂಗನ್ನು ಎ.ಐ.ಆರ್. 1964 ಕೇರಳ, ಪುಟ 92 ತರಲಿಚ್ಛಿಸುತ್ತೇನೆ.

"Section 3 of Act 5 of 1950 is void and inoperative for lack of Presidential sanction under the proviso to art. 304(b) of the Constitution. The proviso to clause (b) of art. 304 states that no Bill or amendment for the purposes of clause (b) shall be introduced or moved in the Legislature of a State without the previous sanction of the President. The mere fact that the Bill was originally introduced in the Legislative Assembly on a date prior to the date of the Constitution, will not save section 3 of the Act from the operation of the proviso to clause (b) of article 304, as it was only subsequent to the coming into force of the Constitution that the Bill in its final from as redrafted by the Select Committee was introduced and moved in the State Legislature. Even though under clause (3) of Article 246 of the Constitution the Legislature of the State was competent to enact the impugned section, its validity would depend upon the further question whether or not any other Constitutional limitation has been transgressed in enacting the section. Article 304 modifies and controls the power conferred by clause (3) of article 246. These two articles have to be read and construed to gether for the purpose of determining the validity of the impugned section of the Act. The

(ಶ್ರೀ ಎಂ. ನಾಗಪ್ಪ)

> proviso to clause (b) of Art. 304 expressly prohibits the introduction and the moving of a Bill without previous sanction of the President. The direction is mandatory and contravention of the proviso is, therefore, fatal to the validity and the legality of the section. Section 3 of the Act has, therefore, to be declared illegal."

ಇವರಲ್ಲಿ ನಡೆದಿರತಕ್ಕ ವಿದ್ಯಮಾನಗಳೇನೆಂದರೆ—ಇದರಲ್ಲಿ ಅಡಕವಾಗಿರತಕ್ಕ ಫ್ಯಾಕ್ಟ್ಸ್ ಏನೆಂದರೆ ಅಡತ್ ಅಂಗಡಿಯ ವ್ಯಾಪಾರಗಾರನು ಲೈಸೆನ್ಸ್ ಇಲ್ಲದೆ ವ್ಯಾಪಾರಮಾಡುತ್ತಿದ್ದ. ಅತನ ಬಗ್ಗೆ ಕ್ರಮ ಕೈಗೊಳ್ಳಲು ಆ ಸರ್ಕಾರ ಆಕ್ಟನ್ನು ಅಮೆಂಡ್ ಮಾಡಿ ಅನಂತರ ಆ ವ್ಯಕ್ತಿಯ ಮೇಲೆ ಒಂದು ಕೇಸನ್ನು ಹಾಕಿದರು. ಆ ಕೇಸು ಹೈಕೋರ್ಟಿನ ಮುಂದೆ ವಿಚಾರಣೆಗೆ ಬಂದು ಅಲ್ಲಿ ಡಿಸ್‌ಮಿಸ್ ಆಯಿತು. ಆ ಅಡತ್ ಷಾಪ್ ಈ ಆಕ್ಟಿನ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಹೇಳಿದ್ದಾರೆ.

The Bill that has been latterly moved cannot save the Adat shopkeeper to file a suit.

ಆದ್ದರಿಂದ ಸರ್ಕಾರದವರು ಇದನ್ನು ಅಷ್ಟು ಹಗುರವಾಗಿ ಭಾವಿಸಬಾರದು. ಇಲ್ಲಿ ಮಾಡತಕ್ಕ ಕಾನೂನುಗಳೇನಿವೆ ಅವುಗಳ ಬಗ್ಗೆ ಯಾರಾದರೂ ನಾಳೆ ಹೈಕೋರ್ಟಿಗೆ ಒಂದು ರಿಟ್ ಹಾಕಿದರೆ ಅವು ಎಂದೂ ಫೈಲಾಗಬಾರದು. ಅಂಥ ಬಂದೋಬಸ್ತಾದ ಆಕ್ಟುಗಳನ್ನು ನಾವಿಲ್ಲಿ ಪಾಸಮಾಡಬೇಕು.

ಶ್ರೀ ಬಿ. ಎಲ್. ಗೌಡ (ಸಹಕಾರ ಶಾಖೆಯ ಉಪಮಂತ್ರಿಗಳು).—ಇದರ ಮೇಲೆ ರಿಟ್ ಹೋಗಿದ್ದವರೆಲ್ಲರೂ ಕೇಸನ್ನು ಕಳೆದುಕೊಂಡು ಹಿಂದಿರುಗಿದ್ದು ತಮಗೆಲ್ಲರಿಗೂ ಗೊತ್ತೇ ಇದೆ.

ಶ್ರೀ ಕೆ. ಎಚ್. ಪಾಟೀಲ್.—ಎಲ್ಲ ರಿಟ್ಟುಗಳು ಫೈಲಾದವು ಎಂದು ತಾವು ಹೇಳಬಾರದು. ವಿಚಾರಣೆ ಆಗದಿರತಕ್ಕ ರಿಟ್ಟರ್ಜಿಗಳು ಇನ್ನೂ ಎಷ್ಟೋ ಇವೆ. ಹಾಗಿರುವಾಗ ಎಲ್ಲವೂ ಫೈಲಾದವು ಎಂದು ಹೇಳುವುದು ಸರಿಯಾದ್ದಲ್ಲ,

ಶ್ರೀ ಎಂ. ನಾಗಪ್ಪ.—ಅಧ್ಯಕ್ಷರೇ ನಾನು ಹೇಳುವುದಿಷ್ಟೆ. ಸರ್ಕಾರದವರು ಈ ದಿವಸ ತರತಕ್ಕ ಯಾವುದೇ ಒಂದು ನಿರ್ಣಯ ಅಥವಾ ಖಾಯಿದೆ ಬಗ್ಗೆ ಸಾರ್ವಜನಿಕರಿಗೆ ಬಹಳ ಸಂಶಯ ವುಂಟಾಗಿದೆ. ಆದ್ದರಿಂದ ಸರ್ಕಾರದವರು ಈ ಒಂದು ಖಾಯಿದೆಯನ್ನು ಕೇವಲ ರೈತರ ಹಿತದೃಷ್ಟಿಯಿಂದಲೇ ಮಾಡಿದೆ ಎಂದು ಹೇಳಿದರೂ ಜನರು ಇದರ ಬಗ್ಗೆ ನೂರಾರು ರಿಟ್ಟುಗಳನ್ನು ಕೋರ್ಟಿಗೆ ಹಾಕೇ ಹಾಕುತ್ತಾರೆ. ಬರೀ ಇಲ್ಲಿಯ ಹೈಕೋರ್ಟು ಒಂದರಲ್ಲಿ ನಮ್ಮ ಶಾಸನ ಸಭೆಯ ಖಾಯಿದೆಗಳು ಊರ್ಜಿತವಾದರೆ ಸಾಲದು. ಅವು ಸುಪ್ರೀಂ ಕೋರ್ಟಿನಲ್ಲೂ ಊರ್ಜಿತವಾಗಬೇಕು. ನನಗೆ ಈ ಮಸೂದೆಯ ಬಗ್ಗೆ ಒಂದು ದೊಡ್ಡ ಸಂಶಯ ಬಂದಿದೆ. ಇದು ಟ್ರೇಡಿಗೆ ಅಡ್ಡಿಅಡಚಣೆ ಉಂಟುಮಾಡತಕ್ಕ ಒಂದು ಮಸೂದೆಯಾಗಿದೆ ಎಂಬ ಅನುಮಾನ ನನಗೆ ತುಂಬಾ ಉಂಟಾಗಿದೆ. ಆದುದರಿಂದ ಸರ್ಕಾರದವರು ಈ ವಿಚಾರದಲ್ಲಿ ಸಭೆಗೆ ಸಮಾಧಾನಮಾಡುವುದಕ್ಕೆ ಮೊದಲು ಅವರು ತಮ್ಮ ಲಾ ಇಲಾಖೆಯ ತಜ್ಞರನ್ನು ಕರೆಸಿ ಈ ವಿಚಾರದಲ್ಲಿ ಅವರು ಮೊದಲು ಅನುಮಾನವನ್ನು ಪರಿತ್ಯಾಗಮಾಡಿಕೊಳ್ಳಬೇಕೆಂದು ವಿಂತಿಮಾಡಿಕೊಳ್ಳುತ್ತೇನೆ. ಸರ್ಕಾರದವರು ಮೊದಲು ಇದರಲ್ಲಿ ಅಂಥ ಲಕೂನಾ ಯಾವುದೂ ಇಲ್ಲವೆಂಬುದನ್ನು ಖಾತ್ರಿಮಾಡಿಕೊಳ್ಳಬೇಕು. ಅನಂತರ ಅವರು ಸಭೆಗೆ ಖಾತರಿ ಕೊಡಬಹುದು. ಅಡ್ವೊಕೇಟ್ ಜನರಲ್‌ರವರನ್ನು ಕನ್‌ಸಲ್ಟ್‌ಮಾಡಿ ಎಂದು ಸಲಹೆ ಮಾಡುತ್ತೇನೆ. ಇಂಥ ಕಾನೂನುಗಳನ್ನು ಮಾಡಿದರೆ ಸರ್ಕಾರಕ್ಕೂ ನಷ್ಟವಿಲ್ಲ. ವ್ಯಾಪಾರ ಮಾಡತಕ್ಕ ಜನರಿಗೂ ನಷ್ಟವಿಲ್ಲ. ಆದರೆ ಯಾರಿಗೆ ನಷ್ಟ ಎಂದರೆ ಸಾಮಾನುಗಳನ್ನು ಮಾರಾಟ ಮಾಡತಕ್ಕ ರೈತನಿಗೆ ಬಹಳ ನಷ್ಟವಾಗುತ್ತದೆ. ಇಂಥ ಮಸೂದೆಗಳಿಂದ ಜನರ ನಂಬಿಕೆಯನ್ನು ಸರ್ಕಾರ ಕಳೆದುಕೊಳ್ಳಬೇಕಾಗುವುದು. ಇದರಿಂದ ಬಹಳ ಅನ್ಯಾಯ ರೈತರಿಗಾಗುತ್ತದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ರೈತರ ಅಭಿವೃದ್ಧಿಯ ಬಗ್ಗೆ ತರತಕ್ಕ ಮಸೂದೆಗಳ ಬಗ್ಗೆ ಹೀಗೆ ಪದೇ ಪದೇ ತಿದ್ದುಪಡಿಗಳನ್ನು ಮಾಡುವುದು ಅವರಿಗೆ ಬಹಳ ಹಾನಿಯನ್ನುಂಟುಮಾಡುತ್ತದೆ. ಆದ್ದರಿಂದ ಈ ಅನುಮಾನಗಳನ್ನೂ ಪರಿಹರಿಸಿಕೊಂಡ ನಂತರ ಇದನ್ನು ಚರ್ಚೆಗೆ ತಂದರೆ ಒಳ್ಳೆಯದೆಂದು ಹೇಳುತ್ತೇನೆ. ಈಗತಾನೆ ಮಾನ್ಯ ಮಂತ್ರಿಗಳು ಒಂದು ವಿಷಯವನ್ನು ಸಭೆಯ ಗಮನಕ್ಕೆ ತಂದರು. ಅದು ಏನೆಂದರೆ ಹೈಕೋರ್ಟಿನವರು ತಮ್ಮ ತೀರ್ಮಾನದಲ್ಲಿ ಏನೋ ಒಂದು ಅಬ್‌ಸರ್ವೇ

ಷನ್ ಮಾಡಿದ್ದರು ಅದನ್ನು ದೂರಮಾಡುವುದಕ್ಕಾಗಿ ಅಕ್ಟನ್ನು ತಿದ್ದುಪಡಿಮಾಡಲಾಯಿತು ಎಂದು. ಆ ನಂತರ ಇಲ್ಲಿ ಸೆಕ್ಷನ್ 154ಕ್ಕೆ ತಂದಿರುವ ತಿದ್ದುಪಡಿಯಲ್ಲಿ ಏನು ಹೇಳಿದ್ದಾರೆಂಬುದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ.

The explanation clause says :—

(i) The deputy Commissioner, in respect of a market committee of a market area, the market yard of which is situated in the head quarters of the district.

ಅಂದರೆ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿರತಕ್ಕ ಮಾರ್ಕೆಟ್ ಯಾರ್ಡ್ ಅಥವಾ ಮಾರ್ಕೆಟ್ ಕಮಿಟಿಗೆ ತಾವು ಅಡ್ಮಿನಿಸ್ಟ್ರೇಟರನ್ನು ಹಾಕುತ್ತೀರಿ ಎಂದು ಇದೆ.

(ii) The Assistant Commissioner of the revenue sub-division, in respect of a market committee of a market area, the market yard of which is situated in the head quarters of the revenue sub-division other than the head quarters of the district ;

(iii) the Tahsildar of the taluk.......... "

Gangavathi is a sub-divisional head-quarter ಅಲ್ಲಿ ಮಾರ್ಕೆಟ್ ಕಮಿಟಿ ಎಷ್ಟು ಬೆಳವಣಿಗೆಯಾಗಿದೆ ? ಆದರೆ ಮಾರ್ಕೆಟ್ ಕಮಿಟಿಯನ್ನು ಬದಲಾಯಿಸುವ ಶಕ್ತಿ ಆ ಕಮಿಟಿಗೆ ಬರಲಿಲ್ಲ.

ಶ್ರೀ ಬಿ. ಎಲ್. ಗೌಡ.—ಮಾನ್ಯ ಶ್ರೀ ನಾಗಪ್ಪನವರು 154 ನೇ ಸೆಕ್ಷನ್ನಿಗೆ ಇನ್ನೊಂದು ಪ್ರಾವಿಷನ್ ಹಾಕಿ ಎಂದು ಹೇಳಿದರು. ಆದ್ದರಿಂದ ತಹಸೀಲ್ದಾರರಿಗಿಂತ ಹೆಚ್ಚಿಗೆ ಅಂತಸ್ತು ಇರುವಂಥ ನೌಕರರನ್ನು ನೇಮಕಮಾಡಬಹುದು ಎಂಬುದಾಗಿ ಅಮೆಂಡಿಂಗ್ ಬಿಲ್‌ನಲ್ಲಿ ಪ್ರೊವೈಡ್ ಮಾಡಿದ್ದೇವೆ.

Sri M. NAGAPPA.—Sub-clause (2) says :—

"Notwithstanding anything contained in sub-section (1), the State Government may, at any time after the 19th day of July, 1969, by Notification, appoint, from time to time,......

The explanation creates again a difficulty in the minds of the people.

Sub- lause (2) is not properly worded. ಈ ಎಕ್ಸ್‌ಪ್ಲನೇಷನ್ ಕ್ಲಾರಿಫೈ ಮಾಡುವುದಕ್ಕೆ ಇದೆಯೆಂದು ತಿಳಿದುಬರುವುದಿಲ್ಲ. ಇದು ಮ್ಯಾನ್‌ಡೇಟರಿ ಇದ್ದಹಾಗೆ ಇದೆ. ಅದು ಅಷ್ಟು ಸ್ಪಷ್ಟವಾಗಿಲ್ಲ. ಯಾವ ದೃಷ್ಟಿಯಿಂದ ತಿದ್ದುಪಡಿಮಾಡಬೇಕೆಂಬುದನ್ನು ದಯವಿಟ್ಟು ನೋಡಬೇಕು. ಬಾಕಿಯೆಲ್ಲಾ ಕಾನ್‌ಸಿಕ್‌ವೆನಿಯಲ್ ಅಮೆಂಡ್‌ಮೆಂಟ್ಸ್ ಇರುವ ಕಾರಣ ನಾನು ಹೆಚ್ಚಿಗೆ ವಿರೋಧಮಾಡುವುದಿಲ್ಲ. ಸೆಕ್ಷನ್ 10ನ್ನು ಅಮೆಂಡ್‌ಮೆಂಟ್ ಮಾಡಿದರೆ ದೋಷಗಳು ದೂರವಾಗುತ್ತಿತ್ತು. ಅದರ ಬಗ್ಗೆ ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ಕೇಳಿಕೊಂಡು, ಅಧ್ಯಕ್ಷರು ನನಗೆ ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri K. H. PATIL (Hubli).—Sir before commencing, I would like to know whether we should talk on all the three motions together or on the dis-approval Motion of my friend Sri Nagappa.

Mr. CHAIRMAN.—Hon. Members may speak on all these motions together.

ಶ್ರೀ ಕೆ. ಎಚ್. ಪಾಟೀಲ್.—ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತಿನದಿವಸ ನಮ್ಮ ಎದುರಿಗೆ ಮೂರು ಸೂಚನೆಗಳಿವೆ. ಮೊದಲನೆಯದು ಆರ್ಟಿಕಲ್ 213ರನ್ವಯ ಕೈಕೊಂಡ ಕ್ರಮ ಅನ್ಯಾಯವಾದುದು. ಅದರ ಪ್ರಕಾರ ಹೊರಡಿಸಲಾದ ಆರ್ಡಿನೆನ್ಸ್ ಕ್ರಮಬದ್ಧವಾಗಿಲ್ಲ, ಯೋಗ್ಯವಾದುದಲ್ಲ ಸಾಧುವಾದುದಲ್ಲವೆಂದು ಅವನ್ನು ಡಿಸ್‌ಅಪ್ರೂವ್ ಮಾಡುವುದಕ್ಕೋಸ್ಕರ ನನ್ನ ಮಾನ್ಯ ಸ್ನೇಹಿತರಾದಂಥ

(ಶ್ರೀ ಕೆ. ಎಚ್. ಪಾಟೀಲ್)

ಶ್ರೀಮಾನ್ ನಾಗಪ್ಪನವರು ಕಳುಹಿಸಿದಂಥ ಒಂದು ರೆಸಲ್ಯೂಷನ್. ಅನಂತರ ಆ ಆರ್ಡಿನೆನ್ಸನ್ನು ರಿಪ್ಲೇಸ್ ಮಾಡಿದಂಥ ಬಿಲ್ಲನ್ನು ಈ ಸಭೆಯ ಮುಂದೆ ಮಂಡಿಸಿದಾಗ ನಾನೂ ಮತ್ತು ನನ್ನ ಹಿರಿಯ ನಾಯಕರಾದ ಶ್ರೀಮಾನ್ ಸಿದ್ದವೀರಪ್ಪನವರು ಇದನ್ನು ಸಾರ್ವಜನಿಕರ ಅಭಿಪ್ರಾಯಕ್ಕೆ ಅವಗಾಹನೆಗೆ ಕಳುಹಿಸಬೇಕೆಂದು ಮಾಡಿರುವ ಸೂಚನೆ ಮತ್ತು ಮೂರನೆಯದು ಆರ್ಡಿನೆನ್ಸನ್ನು ರೀಪ್ಲೇಸ್ ಮಾಡಲು ತಂದಿರುವ ಮಸೂದೆ. ಆದರೆ ಈಗ ಈ ಮೂರು ಸೂಚನೆಗಳನ್ನು ಒಟ್ಟಿಗೆ ವಿಚಾರಮಾಡುವುದು ಬಹಳ ಸಂದಿಗ್ಧವಾದ ಪರಿಸ್ಥಿತಿ. ನಿಜವಾಗಿಯೂ ಇದರಲ್ಲಿರುವ ತಾರತಮ್ಯಗಳನ್ನು ಪರಿಶೀಲನೆಮಾಡುವುದಾದರೆ, ನ್ಯಾಯಾಅನ್ಯಾಯಗಳನ್ನು ತೂಗಿ ನೋಡುವುದಾದರೆ ಕಾಯಿದೆ ಕಾನೂನುಗಳನ್ನು ಸಮನಾಗಿ ವಿಂಗಡಣೆ ಮಾಡಿ ನಮ್ಮ ಮನಸ್ಸನ್ನು ಪರಿಶೀಲಿಸುವುದಾದರೆ ಈ ಆರ್ಡಿನೆನ್ಸನ್ನು ಡಿಸ್‌ಅಪ್ರೂವ್ ಮಾಡತಕ್ಕ ಮಾನ್ಯ ಶ್ರೀ ನಾಗಪ್ಪನವರ ತಿದ್ದುಪಡಿಯನ್ನು ಮೊಟ್ಟಮೊದಲು ವಿಚಾರಮಾಡಬೇಕು. ವಿಚಾರಣೆ ನಂತರ ಈ ಸಭೆ ಶ್ರೀ ನಾಗಪ್ಪನವರ ಸೂಚನೆಯನ್ನು ಎತ್ತಿ ಹಿಡಿದಿದ್ದರೆ ಬಹುಭಾಗದ ಚರ್ಚೆ ನಿಂತುಹೋಗುತ್ತಿತ್ತು. ಮಾನ್ಯ ಶ್ರೀ ನಾಗಪ್ಪನವರ ಮೋಷನ್ ಪಾಸಾಗಿಬಿಟ್ಟರೆ ನಿಮ್ಮ ಆರ್ಡಿನೆನ್ಸ್ ಫೇಲ್ ಆಗುತ್ತದೆ. ನಮ್ಮ ಸರಕಾರ ಕಳಚಿಹೋಗುತ್ತದೆಂಬ ಭಯ ನಮ್ಮ ಈ ಮೈಸೂರು ಸರ್ಕಾರದವರಿಗೆ ಇದ್ದಂತೆ ನನಗೆ ಭಾಸವಾಗುತ್ತದೆ. ಇದನ್ನು ವಿಚಾರಮಾಡದೆ ಈ ಮೂರನ್ನೂ ಸಮ್ಮಿಳನ ಮಾಡಿರುವುದು, ನೋಡಿದರೆ ತಮ್ಮ ತಪ್ಪುಗಳ ತಿದ್ದುಪಡಿ ಉದ್ದೇಶದಿಂದ ಈ ಸಭೆಗೆ ಇವು ಈ ರೀತಿ ಬರುತ್ತಿವೆಯೆಂದು ನಾನು ಭಾವಿಸುತ್ತೇನೆ. ಈ ಆರ್ಡಿನನ್ಸ್ ಹೊರಡಿಸುವ ಸಂದರ್ಭ ಏನು ಬಂತು ಎನ್ನುವ ಮಾತನ್ನು ನನ್ನ ಸ್ನೇಹಿತರಾದಂಥ ಮಾನ್ಯ ಶ್ರೀ ನಾಗಪ್ಪನವರು ಬಹಳ ವಿಶದವಾಗಿ ವರ್ಣಿಸಿದ್ದಾರೆ. 213ನೇ ಆರ್ಟಿಕಲ್ ಪ್ರಕಾರ ಆರ್ಡಿನನ್ಸ್ ಹೊರಡಿಸಬೇಕಾದರೆ ಮೊಟ್ಟಮೊದಲನೆಯದಾಗಿ ರಾಜ್ಯಪಾಲರಿಗೆ ಸರ್ಕಾರದವರು ಸಮರ್ಪಕವಾದಂಥ ಕಾರಣಗಳನ್ನು ಕೊಡಬೇಕು, ಆದರೆ ಸಮರ್ಪಕವಾದಂಥ ಕಾರಣವನ್ನು ರಾಜ್ಯಪಾಲರಿಗೆ ಕೊಡುವುದಕ್ಕೆ ಸರ್ಕಾರ ಅಸಮರ್ಥವಾಗಿದೆ. ರಾಜ್ಯಪಾಲರನ್ನು ವಂಚಿಸಿ ಸರ್ಕಾರ ಜಯಶೀಲರಾಗಿದ್ದಾರೆಂದು ನನಗೆ ಸ್ಪಷ್ಟವಾಗಿ ಕಂಡುಬರುತ್ತದೆ. ನಂತರ ಈ ಆರ್ಡಿನನ್ಸನ್ನು ಯಾವಾಗ ಹೊರಡಿಸಿದ್ದು ಎಂಬ ಮಾತು ಈಗಾಗಲೇ ಈ ಸಭೆಯಲ್ಲಿ ಬಂದಿರುವುದರಿಂದ, ತಾರೀಕುಗಳ ಅಂತರ ತೆಗೆದುಕೊಂಡರೆ ಹೈಕೋರ್ಟ್ ನಿರ್ಣಯದ ನಂತರ ಕೆಲವಾರು ತಿಂಗಳುಗಳಿಂದ ಸುಮ್ಮನೆ ಇದ್ದ ಸರ್ಕಾರ ಈಗ್ಗೆ ಕೆಲವಾರು ದಿವಸಗಳಲ್ಲಿ ಈ ಸಭೆ ಸೇರುತ್ತದೆಂದು ತಿಳಿದು ಇಷ್ಟೊಂದು ಅವಸರದಿಂದ, ತರಾತುರಿಯಿಂದ ರಾಜ್ಯಪಾಲರಿಗೆ ಶಿಫಾರಸ್ಸುಮಾಡಿ ಅವರ ಸಹಿ ಪಡೆಯುವ. ಕಾರಣವೇನಿತ್ತು ? ಆರ್ಡಿನನ್ಸ್ ಯಾವಾಗಲೂ ಬಹಳ ವಿಶೇಷ ಸಂದರ್ಭದಲ್ಲಿ ಉಪಯೋಗ ಮಾಡಲು ಸರ್ಕಾರಕ್ಕೆ ಇರುವ ಅಸ್ತ್ರವೆಂದು ಕಾಣುತ್ತದೆ. ಅದನ್ನು ದಿನಂಪ್ರತಿ ವ್ಯವಹಾರಕ್ಕೆ ಉಪಯೋಗ ಮಾಡುವುದು ಸರಿಯಲ್ಲ. ನಿಜವಾಗಿ ಈ ಸಭೆಯಿಂದ ಟೀಕೆಮಾಡಿಸಿಕೊಳ್ಳಲಿಕ್ಕೆ ಯೋಗ್ಯವಲ್ಲವೆನ್ನುವ ಹಕ್ಕನ್ನು ಪಡೆದಿರತಕ್ಕ ರಾಜ್ಯಪಾಲರು ನಿಮ್ಮ ವಿಚಾರಶೀಲತ್ವದಿಂದ ದೂರವಿರುವ ವರ್ತನೆಯಿಂದ ಟೀಕೆಗೊಳಗಾಬೇಕಾಗುತ್ತದೆ. ಅದಕ್ಕೆ ಸರ್ಕಾರ ಹೊಣೆ. ಉಳಿದ ಮಾತುಗಳನ್ನು ಬಿಡೋಣ.

Sri V.N. PATIL (Humnabad).—Sir, with the permission of the Chair, I rise to a Point of Order. Of course, it will be a lighter side of the picture. According to the Indian tradition, clean shave is taken when something bad happens. The Hon. Deputy Minister for Home is sitting with a black cap and with a clean shave. I want to know whether he has changed his white cap to a black cap ? And whether it was on the death of the Syndicate or on account of the defeat of Sri Sanjeeva Reddy ? I request that the Deputy Home Minister may please make a statement.

Mr. CHAIRMAN.—That is entirely a personal matter concerning the Hon. Deputy Minister for Home. That can never be a Point of Order here.

ಶ್ರೀ ಕೆ. ಎಚ್. ಪಾಟೀಲ್.—ಸ್ವಾಮಿ, ಸರ್ಕಾರದವರೇ ಈ ಸದನಕ್ಕೆ ಕೊಟ್ಟಿರುವಂತಹ ಆಶ್ವಾಸನೆಗಳನ್ನು ಸದಾ ಕಾಲ ನಡೆಸಿಕೊಂಡು ಹೋಗುವುದು, ಸೌಜನ್ಯದಿಂದ ಕೂಡಿದಂತಹ ಸರ್ಕಾರಕ್ಕೆ

ಒಳ್ಳೆಯದು. ಪ್ರಜಾಪ್ರಭುತ್ವದ ವಿಷಯವಾಗಿ ಬಹಳ ಪ್ರಗತಿಪರವಾಗಿ ಮಾತನಾಡುತ್ತಿದ್ದ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಅಂದಿನ ದಿವಸ ಸಹಕಾರಿ ಮಂತ್ರಿಯಾಗಿದ್ದಾಗ ಹೇಳಿದಂತಹ ಮಾತನ್ನು ಜ್ಞಾಪಿಸಿಕೊಳ್ಳಬಹುದು. ಅವರು ಸಹಕಾರಿ ಮಂತ್ರಿ ಪದವಿಯನ್ನೇ ತೆಗೆಯುವ ಮಟ್ಟಕ್ಕೆ ನಾವು ಹೋಗಬಹುದು ಎಂದು ಹೇಳಿದ್ದರು. ನಂತರ ಅದೇ ಮಂತ್ರಿ ಪದವಿಗೆ ಶ್ರೀಮಾನ್ ನಾಡಗೌಡರನ್ನು ತಂದು ಇಟ್ಟರು. ಆ ಕಾಲಕ್ಕೆ ಮಾನ್ಯ ಪುಟ್ಟಸ್ವಾಮಿಯವರು ಈ ಬಿಲ್ಲನ್ನು ಇಟ್ಟು ಅವರು ಹೇಳಿದಂತಹ ಮಾತು ಈ ರೀತಿ ಇದೆ.

"The provisions now recommended by the Committee are of a substantive nature relating to the trade and commerce and the Committee felt that it was necessary for the proper working of the marketing committee and they were in the public interest and therefore sanction of the President under proviso to article 304 (b) of the Constitution of India for moving the Bill was found necessary and it has been now obtained."

ಸ್ವಾಮಿ, ಮಂತ್ರಿವರ್ಯರ ಮಾತು ಅಂದರೆ, ರಸ್ತೆಯಲ್ಲಿ ಆಡುವಂತಹ, ಬೇಜವಾಬ್ದಾರಿ ಮನುಷ್ಯನು ಮಾತನಾಡತಕ್ಕ ಮಾತಲ್ಲವೆಂದು ನಾನು ತಿಳಿದುಕೊಂಡಿದ್ದೇನೆ "was found Necessary" ಎಂದು ಹೇಳಿದ್ದಾರೆ. ಕಾಯ್ದೆ ಪ್ರಶ್ನೆಯ ಪರಿಶೀಲನೆ ಮಾಡಿ, ತಮ್ಮ ಅಭಿಪ್ರಾಯಕ್ಕೆ ಬಂದು, ಆ ಅಭಿಪ್ರಾಯದ ಪ್ರಕಾರ ರಾಜ್ಯಪಾಲರಿಗೆ ಕಳುಹಿಸಿದರು. ಅನಂತರ ಪ್ರೆಸಿಡೆಂಟರಿಗೆ ಹೋಯಿತು. ಮೊನ್ನೆ ಮೊನ್ನೆ ಮಾನ್ಯ ಪಿ. ಎಂ. ನಾಡಗೌಡರು ಮಾತನಾಡುತ್ತಾ ಅಂದು ಸರ್ಕಾರ ತಪ್ಪುಮಾಡಿದೆ. ಇವತ್ತು ನಾನು ಏಕೆ ತಪ್ಪು ಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

"Received the assent of the President on the 19th day of August 1966."

ಎನ್ನುವಂತಹ ಮಾತನ್ನು ಈ ಕಾಯಿದೆಯಲ್ಲಿ ನಮೂದಿಸಿದೆ. ಅಂದರೆ ಅಂದು ಸರ್ಕಾರಕ್ಕೂ ಬೇಕು, ರಾಜ್ಯಪಾಲರಿಗೂ ಬೇಕು ಎಂದು ಪ್ರೆಸಿಡೆಂಟರು ಅಸೆಂಟ್ ಕೊಟ್ಟರು. ಇವತ್ತಿನ ದಿವಸ ಪ್ರೆಸಿಡೆಂಟ್ ಅಸೆಂಟ್ ಜರೂರು ಇಲ್ಲವೆಂದು ಏಕೆ ಸರ್ಕಾರದಿಂದ ಹೇಳುತ್ತಿದ್ದಾರ ? ಈ ಸಂದರ್ಭದಲ್ಲಿ ನಾವು ಈ ಕಾಯಿದೆಯಲ್ಲಿರತಕ್ಕ ಅನೇಕ ಕಲಮುಗಳನ್ನು ಪರಿಶೀಲಿಸೋಣ. ಮೊದಲನೇದಾಗಿ 6ನೇ ಕಲಂ ಮಾರ್ಕೆಟ್ ಯಾರ್ಡ್ಸ್, ಮಾರ್ಕೆಟ್ ಸಬ್ ಯಾರ್ಡ್ಸ್ ; ಸಬ್ ಮಾರ್ಕೆಟ್ಸ್, ಮತ್ತು ಸಬ್ ಮಾರ್ಕೆಟ್ ಯಾರ್ಡ್ ಎನ್ನುವುದರ ಬಗ್ಗೆ ಇದೆ. ಸೆಕ್ಷನ್ 8ರಲ್ಲಿ 'ಕಂಟ್ರೋಲ್ ಆಫ್ ಮಾರ್ಕೆಟಿಂಗ್ ಆಫ್ ಅಗ್ರಿಕಲ್ಚರಲ್ ಪ್ರೊಡ್ಯೂಸ' ಇದೆ. 9 ರಲ್ಲಿ ಎಸ್ಟೇಬ್ಲಿಶ್‌ಮೆಂಟ್ ಆಫ್ ಮಾರ್ಕೆಟ್ ಕಮಿಟಿ ಅಂಡ್ ಇಟ್ಸ್ ಇನ್‌ಕಾರ್ಪರೇಶನ್ಸ್ ಎಂದು ಇದೆ. ಸೆಕ್ಷನ್ 63 ರಲ್ಲಿ ಪವರ್ಸ್ ಅಂಡ್ ಡ್ಯೂಟೀಸ್ ಆಫ್ ದಿ ಕಮಿಟಿ ಇದೆ. ಇನ್ನು ಏನು ಪವರ್ಸ್ ಇವೆಯೆಂಬುದನ್ನು ನೋಡೋಣ. 65 ರಲ್ಲಿ ಲೆವಿ ಆಫ್ ಮಾರ್ಕೆಟ್ ಫೀ ಎಂದು ಇದೆ. 66 ಪವರ್ಸ್ ಟು ಆರ್ಡರ್ ಪ್ರೊಡಕ್ಷನ್ ಆಫ್ ಅಕೌಂಟ್ಸ್, ಇನ್‌ಸ್ಪೆಕ್ಷನ್ ಅಂಡ್ ಸೀಜರ್. 62 ಪವರ್ ಟು ಸ್ಟಾಪ್ ವೆಹಿಕಲ್ಸ್. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಎಷ್ಟುಮಟ್ಟಿಗೆ ರಿಸ್ಟ್ರಿಕ್ಷನ್ಸ್ ಇಂಪೋಸ್ ಮಾಡುತ್ತಿದ್ದಾರೆಂಬುದನ್ನು ಸೂಕ್ಷ್ಮವಾಗಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. 70 ರಲ್ಲಿ ಕಂಪೆನ್‌ಸೇಶನ್ ಆಫ್ ಫೈನಾನ್ಸ್. ಆ ಮೇಲೆ ಪ್ರೊಹಿಬಿಶನ್ ಆಫ್ ಸರ್ಟನ್ ಸೆಕ್ಷನ್ಸ್ ಎನ್ನುವಂತಹ ಮಾತು 79 ರಲ್ಲಿದೆ. ಅದೇ ರೀತಿ 88 ರಲ್ಲಿ ಟ್ರೇಡರ್ಸ್ ಸೆಕ್ಯೂರಿಟಿ ಆಕ್ಟ್, 86 ಸೆಕ್ಯೂರಿಟಿ ಆಫ್ ಕಮಿಶನ್ ಏಜೆಂಟ್, 87 ರಲ್ಲಿ ಡಿಪಾಸಿಟ್ ಆಫ್ ಕ್ಯಾಶ್ ಸಕ್ಯೂರಿಟಿ ಇನ್ ದಿ ಬ್ಯಾಂಕ್. ಬ್ಯಾಂಕಿನಲ್ಲಿ ಇಷ್ಟು ಹಣ ಇಡಲೇಬೇಕೆಂದು ರಿಸ್ಟ್ರಿಕ್ಷನ್ ಹಾಕುತ್ತಿದ್ದಾರೆ. ಈ ಎಲ್ಲಾ ಕಾಲಮುಗಳನ್ನು ಸೇರಿಸಿ ಈವತ್ತಿನ ದಿವಸ ಈ ಕಾಯಿದೆಗೆ ಅಮೆಂಡ್‌ಮೆಂಟ್ ತಂದಿದ್ದಾರೆ. ಇದರೊಳಗೆ ಪ್ರಾಮುಖ್ಯವಾದ ಸೆಕ್ಷನ್ ಯಾವುದು ? ಕಾಯಿದೆಯನ್ನು ನಡೆಸಿಕೊಂಡು ಹೋಗಬೇಕಾದರೆ ಮಾರ್ಕೆಟ್ ಕಮಿಟಿ ಬೇಕು. ಅದು ಎಸ್ಟಾಬ್ಲಿಷ್ ಆಗದೆ ಇದು ಯಾವುದೂ ನಡೆಯುವ ಹಾಗೆ ಇಲ್ಲ. ಸೆಕ್ಷನ್ 63 ರಲ್ಲಿ ಪವರ್ಸ್ ಅಂಡ್ ಡ್ಯೂಟೀಸ್ ಆಫ್ ದಿ ಮಾರ್ಕೆಟ್ ಕಮಿಟಿ ಎಂದು ಇದೆ. ಈ ಸೆಕ್ಷನನ್ನು ಬಿಟ್ಟು ಮತ್ತು ಯಾವುದಾದರೂ ಸೆಕ್ಷನೊಳಗೆ ರಿಸ್ಟ್ರಿಕ್ಷನ್ ಮಾಡುವ ಅಧಿಕಾರ ಯಾರಿಗಾದರೂ ಇದೆಯೇ, ಇಲ್ಲವೇ ?

"To implement the provisions of this Act, rules and the bye-laws thereunder in the market area."

(ಶ್ರೀ ಕೆ. ಎಚ್. ಪಾಟೀಲ್)

ಇಂಥ ಮಾರ್ಕೆಟ್ ಕಮಿಟಿ ಕಾನ್‌ಸ್ಟಿಟ್ಯೂಟ ಮಾಡುವುದಕ್ಕೆ ಹೊರಟಿದ್ದಾರೆ. ತಾವು ಇವತ್ತು ಯಾವ ಅಧಿಕಾರ ಕೊಟ್ಟಿದ್ದೀರಿ, ಮಾರ್ಕೆಟ್ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿದ್ದೀರಿ, ಇದು ನಿಜವಾಗಿಯೂ ನೇರವಾದ ರಿಸ್ಟ್ರಿಕ್ಷನ್ ಆಗುತ್ತದೆ. ಮಾನ್ಯ ನಾಗಪ್ಪನವರು ಒಂದು ನೋಟಿಫಿಕೇಶನ್ ತೆಗೆದುಕೊಂಡು ಬಂದು ಹೇಳಿದರು. ಇವತ್ತಿನ ದಿವಸ ಪ್ರತಿಯೊಂದು ನೋಟಿಫಿಕೇಶನ್ಸ್ ಕೂಡ ಹಾಗೆ ಇದೆ. ಅಲ್ಲಿ ಮಾರ್ಕೆಟ್ ಯಾರ್ಡ್ ಎಸ್ಟೆಬ್ಲಿಷ್ ಮಾಡುತ್ತಾರೆ, ಮಾರ್ಕೆಟ್ ಯಾರ್ಡ್ ಹೊರಗಡೆ ವ್ಯವಹಾರ ಮಾಡುತ್ತಾರೆ. ನೀವು ಹೇಳಬಹುದು, ನಾವು ರೆಗ್ಯುಲೇಶನ್ ಮಾಡುತ್ತೇವೆ ಎಂದು. ಒಬ್ಬ ಡ್ರೈವರನು ಲೈಸನ್ಸ್ ಫೀಕೊಟ್ಟರೆ ಅವನು ಬೇಕಾದಲ್ಲಿ ಬೇಕಾದ ವಾಹನ ಹೊಡೆಯಬಲ್ಲನು. ಅವನಿಗೆ ಇದೇ ಸ್ಥಳದಲ್ಲಿ ಹೊಡೆಯ ಬೇಕೆಂಬ ನಿರ್ಭಂದವಿಲ್ಲ. ಅವನು ಫೀ ಕೊಟ್ಟರೆ ಬೇಕಾದಲ್ಲಿ ಓಡಬಹುದು. ನಿಮ್ಮದು ಹಾಗೆ ಅಲ್ಲ. ಇವತ್ತು ಅಂಗಡಿಗಳಲ್ಲಿ ಪುಸ್ತಕಗಳನ್ನು ಹೇಗೆ ಇಡಬೇಕು, ಎಂದು ರಿಸ್ಟ್ರಿಕ್ಷನ್ಸ್ ಇಂಪೋಸ್ ಮಾಡುವವರು ನೀವು. ನೀವು ಹೇಳಬಹುದು, ಬೇರೆ ವ್ಯಾಪಾರಸ್ಥರಿಗೂ ರೆಗ್ಯುಲೇಟ್ ಮಾಡುತ್ತೇವೆ, ರೈತನು ಕೂಡ ತನ್ನ ಮನಸ್ಸಿಗೆ ಬಂದಂತೆ ಮಾರಲಾಗುವುದಿಲ್ಲ ಎಂದು ಮಾರ್ಕೆಟ್ ಕಮಿಟಿಯ ಕ್ರಮಗಳನ್ನು ಅನುಸರಿಸಿ ಮಾರಬೇಕಾಗುತ್ತದೆ. ಇದರಿಂದ ನೀವು ಇಡೀ ಮೈಸೂರು ಜನತೆಯ ಮೇಲೆ ಗುರುತರವಾದಂತಹ ರಿಸ್ಟ್ರಿಕ್ಷನ್ಸ್ ಹೇರಿ, ಅದು ಯಾವ ರೀತಿಯಿಂದ ರೈತನ ಹಿತದೃಷ್ಟಿಯಿಂದ ಪಾಸಾಗಬೇಕೋ ಹಾಗೆ ಮಾಡದೆ ಅದಕ್ಕೆ ತದ್ವಿರುದ್ಧವಾಗಿ ಪಾಸ್ ಮಾಡಿಕೊಳ್ಳುತ್ತೀರಿ. ಇವತ್ತು ನಿಮಗೆ ಧೈರ್ಯವಿಲ್ಲ. ಇವತ್ತು ನೀವು ಜನನಾಯಕರ ಶಿಷ್ಯ ಎಂದು ಈ ಕೆಲಸವನ್ನು ಮಾಡುತ್ತಿದ್ದೀರಿ. ನೀವು ಎರಡು ಕೋಟಿ ಜನತೆಯ ಮೇಲೆ ಹೇರಿದಂತಹ ಅಕ್ರಮ ಕಾಯಿದೆಯು ಬಹಳ ಅಕ್ರಮತರದ್ದಾಗಿದೆ. ಹೀಗೆ ಮಾಡುತ್ತಿರುವ ಸರ್ಕಾರವನ್ನು ಡಿಸ್‌ಮಿಸ್ ಮಾಡುವುದೇ ಲೇಸು. ಇವತ್ತು ಇಂಥ ಕಾಯಿದೆಗಳ ಮೇಲೆ ಬಡವರ ರಿಟ್‌ಗಳು ಬಂದಾಗ ಅವರಿಗೆ ವಕೀಲರಿಗೆ ರೊಕ್ಕ ಕೊಡಲು ಇಲ್ಲದೆ ಅವು ಯೋಗ್ಯ ರೀತಿಯಿಂದ ಮಂಡನೆಯಾಗದೆ ಹೋಗಬಹುದು. ನೀವು ಇವತ್ತು ಎರಡು, ಎರಡೂವರೆ ಸಾವಿರ ರೂಪಾಯಿಗಳನ್ನು ಪ್ರತಿ ದಿವಸ ಸರ್ಕಾರಿ ಪರವಾದ ವಕೀಲರಿಗೆ ಕೊಡುತ್ತಿದ್ದೀರಿ. ಇದು ಯಾರ ಹಣ ನೀವು ಒಂದು ನಾಟಕವನ್ನು ಮಾಡುತ್ತಿದ್ದೀರಿ.

5-00 P.M.

ಇವೊತ್ತು ಈ ಕಾನೂನಿನ ಸಂಬಂಧದಲ್ಲಿ ವಿವಾದಗಳು ಬಂದು ಯಾವ ಮನುಷ್ಯನಿಗೆ ಹೊಟ್ಟೆ ಉರಿಯುತ್ತದೆಯೋ ಅವನು ಕೋರ್ಟಿಗೆ ಹೋಗಿ ತನ್ನ ಪರವಾಗಿ ಅಲ್ಲಿ ಆರ್ಗ್ಯೂ ಮಾಡುವುದಕ್ಕೆ ಒಂದು ದಿವಸಕ್ಕೆ $2\frac{1}{2}$ ಸಾವಿರ ರೂಪಾಯಿಗಳನ್ನು ಕೊಟ್ಟು ದೊಡ್ಡ ದೊಡ್ಡ ಅನುಭವಿಕ ವಕೀಲರನ್ನು ತರುವುದಕ್ಕೆ ಸಾಧ್ಯವಿಲ್ಲ. ಈಗ ನಾವು ಈ ಕಾಯಿದೆಯನ್ನು ಇಲ್ಲಿ ತರದಿದ್ದರೆ ನೀವು ನಮ್ಮನ್ನು ಬೈಯುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ ಎಂದು ಶ್ರೀಮಾನ್ ನಾಡಗೌಡರು ಹೇಳಿದ್ದಾರೆ. ಇದರಿಂದಲೇ ಇವರ ಮನಸ್ಸಿನ ಇಂಗಿತ ವ್ಯಕ್ತವಾಗುತ್ತದೆ. ಮಾರುಕಟ್ಟೆ ಸಮಿತಿಗಳಿಗೆ ಸಕಾಲದಲ್ಲಿ ಚುನಾವಣೆಯನ್ನು ನಡೆಸದೆ ಸರ್ಕಾರದವರು ತಮಗೆ ಬೇಕಾದವರಿಗೆ ಕೆಲವರಿಗೆ ರಾಜಕೀಯ ಸಹಕಾರವನ್ನು ನೀಡಲು ಮಾರುಕಟ್ಟೆ ಸಮಿತಿಗಳಿಗೆ ತಮಗೆ ಬೇಕಾದವರನ್ನು ನಾಮಕರಣ ಮಾಡುವ ಪದ್ಧತಿಯನ್ನು ಇಟ್ಟುಕೊಂಡಿದ್ದರು. ಈಗಿನ ಹೊಸ ವ್ಯವಸ್ಥೆಯಿಂದ ಈ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆಯನ್ನು ಮಾಡುವ ಅಧಿಕಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ, ಅಸಿಸ್ಟೆಂಟ್ ಕಮೀಷನರಿಗೆ ಇದೆ. ಪ್ರತಿಯೊಂದು ಮಾರುಕಟ್ಟೆಯ ಆಡಳಿತಕ್ಕೆ ಸಂಬಂಧಪಟ್ಟಹಾಗೆ ವ್ಯವಹಾರವನ್ನು ಮಾಡಲು ಚೀಫ್ ಮಾರ್ಕೆಟಿಂಗ್ ಆಫೀಸರ ಕೈಯ್ಯಲ್ಲಿ ಅಧಿಕಾರವನ್ನು ಕೊಟ್ಟಿದ್ದಾರೆ. ನಿಜವಾಗಿಯೂ ನಾನು ಕಳಕಳಿಯಿಂದ ಬಿನ್ನಹ ಮಾಡಿಕೊಳ್ಳುತ್ತೇನೆ. ಈ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆಯನ್ನು ಮಾಡದೆ ಇರುವ ತಪ್ಪು ನಮ್ಮದು, ನಮಗೆ ಬಹಳ ಕೆಲಸ ಇತ್ತು ಎಂದು ಸರ್ಕಾರದವರು ಇಲ್ಲಿ ಹೇಳಬಹುದಾಗಿತ್ತು. ಆ ಮಾತುಗಳನ್ನು ಹೇಳದೆ ತಪ್ಪು ಮಾತುಗಳನ್ನು ಇಲ್ಲಿ ಹೇಳಿ ತಾವು ಮಾಡಿದಂತಹ ಕಾರ್ಯವನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೊರಟಿರುವುದು ನಿಜವಾಗಿಯೂ ಸಮರ್ಪಕವಾದುದಲ್ಲ. ಚುನಾವಣಾ ಮತದಾರರ ಪಟ್ಟಿಯನ್ನು ತಯಾರು ಮಾಡಿ ಚುನಾವಣೆಯನ್ನು ಮಾಡದಿದ್ದರೆ ತಪ್ಪಾಗುತ್ತದೆ ಎಂದು ಅನೇಕ ಕಮಿಟಿಗಳವರು ಹೇಳಿದ್ದಾರೆ. ಅದೇರೀತಿ ಹೈಕೋರ್ಟಿನವರು ಡೈರೆಕ್ಷನ್ ಸಹ ಕೊಟ್ಟಿದ್ದಾರೆ. ಆ ರೀತಿ ಅವರು ಡೈರೆಕ್ಷನ್ ಕೊಟ್ಟ ಮೇಲೂ ಕೂಡ ವ್ಯಾಪಾರಸ್ಥರು ಮತ್ತು ಒಕ್ಕಲಿಗರ ನಡುವೆ ವಿವಾದಗಳು ಏಳುವುದಕ್ಕೆ ಅವಕಾಶವನ್ನು ಕೊಡದೆ ಅದನ್ನು ಸರಿಪಡಿಸ

ಬೇಕಾಗಿತ್ತು. ಆ ರೀತಿ ಮಾಡದೆ ಅವರು ಸರ್ಕಾರದ ಮೇಲೆ ರಿಟ್ ಹಾಕುವುದಕ್ಕೆ ಅವಕಾಶ ಮಾಡಿಕೊಟ್ಟಿರುವಂಥಾದ್ದು ನನಗೆ ತಿಳಿಯದ ಪ್ರಸಂಗ. ಇದು ಸರ್ಕಾರದ ಹೊಣೆಗೇಡಿತನವನ್ನು ತೋರಿಸುತ್ತದೆ. ಇದಕ್ಕೆ ನಿಮ್ಮ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರನ್ನು ಸಮಾಧಾನ ಪಡಿಸಲು ಕೈಕೊಳ್ಳುವ ನಿಮ್ಮ ವರ್ತನೆ ಕಾರಣವೇ? ಸರ್ಕಾರದವರು ಇಷ್ಟೊಂದು ಹೊಣೆಗೇಡಿತನ ದಿಂದ ವರ್ತಿಸಿ ಈ ಮಾರುಕಟ್ಟೆ ಸಮಿತಿಗಳ ಚುನಾವಣೆಯನ್ನು ಸಕಾಲದಲ್ಲಿ ಮಾಡದೆ ಪ್ರಜಾ ಪ್ರಭುತ್ವವನ್ನು ಕೊಲೆ ಮಾಡುತ್ತಿದ್ದಾರೆ. ಈ ಮಾರ್ಕೆಟ್ ಸಮಿತಿಗಳ ಅಧಿಕಾರವನ್ನೆಲ್ಲಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು, ಅಸಿಸ್ಟೆಂಟ್ ಕಮೀಷನರು ಮತ್ತು ತಹಶೀಲ್ದಾರರ ಕೈಯಲ್ಲಿ ಇದೆ. ಅವರು ಎಲ್ಲರಿಗೂ ಒಂದೇ ರೀತಿಯಲ್ಲಿ ಸರಿಸಮಾನವಾಗಿ ನಡೆದುಕೊಳ್ಳುತ್ತಾರೆಯೇ? ಇವೊತ್ತು ಈ ರಾಜ್ಯ ಸರ್ಕಾರದವರು ಎಂದರೆ ಈ ರಾಜ್ಯ ಸರ್ಕಾರವನ್ನು ನಡೆಸುತ್ತಾ ಇರತಕ್ಕಂಥ ಕಾಂಗ್ರೆಸ್ಸಿನವರು ತಮ್ಮ ಹಿಂದೆ ಮುಂದೆ ಓಡಾಡತಕ್ಕಂಥ ಕೆಲವರ ಚಾಡಿ ಮಾತುಗಳನ್ನು ಕೇಳಿ ಅದರಂತೆ ನಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇವೊತ್ತು ನೀವು 2 ಕೋಟಿ ಜನತೆಯಿಂದ ಆರಿಸಿ ಬಂದಿರತಕ್ಕ ಜನತಾಪ್ರತಿನಿಧಿಗಳಾಗಿರುತ್ತೀರಿ. ಆದ್ದರಿಂದ ನೀವು ಅದನ್ನು ಅರಿತುಕೊಂಡು ಜನತೆಯ ಅಭಿಪ್ರಾಯದಂತೆ ಕೆಲಸ ಮಾಡಬೇಕು. ಶ್ರೀಮಾನ್ ಹನುಮಂತಯ್ಯನವರು ಈ ಮನೆಯ ಎದುರಿಗೆ ಒಂದು ತಕ್ಕಡಿಯನ್ನು ಹಾಕಿಸಿದ್ದಾರೆ. ಆ ನ್ಯಾಯ ತಕ್ಕಡಿಯಂತೆ ನಡೆಯುವವರು ಇಂದು ಸರ್ಕಾರದಲ್ಲಿ ಯಾರು ಇದ್ದಾರೆ? ಆ ನ್ಯಾಯ ತಕ್ಕಡಿಗೆ ಕುಂದು ಬರುವ ರೀತಿಯಲ್ಲಿ ನೀವು ನಡೆದುಕೊಳ್ಳುತ್ತಿದ್ದೀರಿ, ಇದು ನಿಜವಾಗಿಯೂ ಸರಿಯಲ್ಲ. ಈ ಕಾನೂನಿಗೆ ಸಂಬಂಧಪಟ್ಟ ಹಾಗೆ ಹೈಕೋರ್ಟಿನವರು ಕೊಟ್ಟಂತಹ ಜಡ್ಜ್‌ಮೆಂಟ್ ಕಾಪಿಯನ್ನು ಕೊಡಿಸಿಕೊಡಬೇಕೆಂದು ನಾವು ಅಧ್ಯಕ್ಷರನ್ನು ಕೇಳಿಕೊಂಡಿದ್ದೆವು. ಅದನ್ನು ಕೊಟ್ಟಿದ್ದರೆ ಅದರಲ್ಲಿ ಹೈಕೋರ್ಟಿನವರು ತಪ್ಪು ಮಾಡಿದ್ದಾರೆಯೇ, ನಾವು ತಪ್ಪು ಮಾಡಿದ್ದೇವೆಯೇ, ಅಥವಾ ವಕೀಲರು ತಪ್ಪು ಮಾಡಿದ್ದಾರೆಯೇ ಎಂಬುದನ್ನು ನೋಡಬಹುದಾಗಿತ್ತು. ಆದರೆ ಅಧ್ಯಕ್ಷರು ಆ ಜಡ್ಜ್‌ಮೆಂಟ್ ಕಾಪಿಯನ್ನು ನಮಗೆ ಕೊಡಿಸಲಿಲ್ಲ. ಈ ಕಾನೂನಿಗೆ ಸಂಬಂಧಪಟ್ಟ ಹಾಗೆ ಹೈಕೋರ್ಟ್ ಎದುರಿಗೆ ಅಡ್ವಕೇಟ್ ಜನರಲ್ ಅವರು ಒಂದು ಮಾತನ್ನು ಇಟ್ಟಿದ್ದಾರೆ. ಅದನ್ನು ನಾನು ತಮ್ಮ ನಜರಿಗೆ ತರುತ್ತೇನೆ. ಅದು ಈ ರೀತಿ ಇದೆ. The Judges on this point have interpreted on the arguments advanced by the Advocate General. It is as follows :

> "The argument placed before us by Mr. Advocate General that in all cases where there is an old Market Committee the Constitution of a first Market Committee under Section 10 is wholly unnecessary, is in our opinion, unacceptable. The new Act contemplates the establishment of a Market Committee in a particular way, it is of significance to observe that Section 11 speaks of a second and subsequent market Committees. Although that is what the marginal note says, we should not altogether overlook the description which that marginal note gives, and what is clear from the language of Section 11 is that the elected market Committee which comes into being under it is the second market Committee and the first Market Committee which is its predecessor is no other than the nominated marketed Committee to which Section 10 refers."

ಈ ಪ್ರಕಾರವಾಗಿ ಹೈಕೋರ್ಟಿನವರ ಎದುರಿಗೆ ಸರ್ಕಾರದವರು ತಮ್ಮ ವಾದವನ್ನು ಮಂಡಿಸಿ ದಾಗ ಹೈಕೋರ್ಟಿನವರು ಅದನ್ನು ಒಪ್ಪಲಿಲ್ಲ. ಹೈಕೋರ್ಟಿನವರು ಕೊಟ್ಟಂಥ ಜಡ್ಜ್‌ಮೆಂಟ್ ಅನ್ನು ನಾವು ವಿಚಾರ ಮಾಡೋಣ ಎಂದು ಹೇಳುವುದಾದರೆ ಆ ಜಡ್ಜ್‌ಮೆಂಟ್ ಕಾಪಿ ಈಗ ನಮ್ಮಲ್ಲಿ ಇಲ್ಲ. ಈ ಮಾರುಕಟ್ಟೆಯ ಸಮಿತಿಗಳಿಗೆ ಸರ್ಕಾರದವರು ಸದಸ್ಯರನ್ನು ನಾಮಿನೇಟ್ ಮಾಡುವ ಪದ್ಧತಿಯನ್ನು ಏನು ಅನುಸರಿಸುತ್ತಿದ್ದರು ಅದು ಕ್ರಮಬದ್ಧವಾಗಿಲ್ಲ ಸರಿಯಾಗಿಲ್ಲ ಎಂದು ಹೈಕೋರ್ಟಿನವರು ಹೇಳಿದ್ದಾರೆ. ಅದು ಹೋಗಲಿ, ಒಂದು ವೇಳೆ ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟಿಗೆ ಹೋಗಲು ಸರ್ಕಾರದ ಬಳಿ ಹಣ ಇಲ್ಲದಿದ್ದರೆ, ಹೈಕೋರ್ಟಿನ ತೀರ್ಪನ್ನು ಒಪ್ಪಿಕೊಳ್ಳಬೇಕಾಗಿತ್ತು. ಆದರೆ ಆರ್ಡಿನನ್ಸ್ ಹೊರಡಿಸಿ, ಈಗ ಸಭೆಯ ಮುಂದೆ ಮಸೂದೆಯನ್ನು ಮಂಡಿಸಿರುವುದು ನ್ಯಾಯವಲ್ಲ. ಈ ಮಾತನ್ನು ಕಾಂಗ್ರೆಸ್ ಪಕ್ಷದ ಸದಸ್ಯರುಗಳೇ ಹೇಳುತ್ತಿದ್ದಾರೆ. ರಾಷ್ಟ್ರಾಧ್ಯಕ್ಷರ

(ಶ್ರೀ ಕೆ. ಎಚ್. ಪಾಟೀಲ್)

ಚುನಾವಣೆಯ ನಂತರ ಕಾಂಗ್ರೆಸ್ ಪಾರ್ಟಿಯೊಳಗೇ ಜಗಳ ನಡೆದಿದೆ. ಸರ್ಕಾರದವರು ಮಾಡಿರುವಂತಹ ಶಿಫಾರಸ್‌ಗಳು ಏನಿವೆ ಅವನ್ನು ಹೈಕೋರ್ಟಿನವರು ತಳ್ಳಿಹಾಕಿದ ಮೇಲೆ, ಮತ್ತೆ ರಾಜ್ಯಪಾಲರನ್ನು ನಂಬಿಸಿ ಆರ್ಡಿನೆನ್ಸ್ ಹೊರಡಿಸಿದಿರಿ. ಅಂದರೆ ಈ ಮಂತ್ರಿಮಂಡಲದವರು ರಾಜ್ಯಪಾಲರಿಗೂ ಕೂಡ ಮೋಸ ಮಾಡಿದ್ದಾರೆ. ಹೈಕೋರ್ಟಿನ ತೀರ್ಪಿನ ನಂತರ ಈ ಬಗ್ಗೆ ಲಾ—ಸೆಕ್ರೆಟರಿಯವರೊಡನೆ ವಿಚಾರ ಮಾಡಬಹುದಿತ್ತು ಆದರೆ ಆ ರೀತಿ ಮಾಡಲಿಲ್ಲ. ಆರ್ಡಿನೆನ್ಸ್ ಹೊರಡಿಸಿದಮೇಲೆ ಇದು ರಾವಣನ ರಾಜ್ಯವಾಗಿದೆ ಎಂದು ಆ ಕಡೆಯ ಸದಸ್ಯರು ಕೂಡ ಹೇಳಿದ್ದಾರೆ. ಆರ್ಡಿನೆನ್ಸ್ ಹೊರಡಿಸದೆ, ಒಂದೇ ಸಲ ಈ ತಿದ್ದುಪಡಿಮಸೂದೆಯನ್ನು ಸಭೆಯ ಮುಂದೆ ತಂದಿದ್ದರೆ ಅನೇಕ ಕಾಂಗ್ರೆಸ್ ಸದಸ್ಯರು ಕೂಡ ಓಟು ಮಾಡುತ್ತಿರಲಿಲ್ಲವೆಂದುಕೊಂಡು ಆರ್ಡಿನೆನ್ಸ್ ಹೊರಡಿಸಿದಿರಿ. ಇವತ್ತಿನದಿವಸ ಎಂ. ಆರ್. ಪಾಟೀಲ್ ಅವರು ಸಭೆಯಲ್ಲಿ ಇಲ್ಲ. ಅವರು ಈ ಬಿಲ್‌ನ ಪರವಾಗಿ ಓಟು ಮಾಡಬಾರದೆಂದುಕೊಂಡು ಮನೆಗೆ ಹೋಗಿದ್ದಾರೆಂದು ನಾನು ತಿಳಿದಿದ್ದೇನೆ. ಡಾಕ್ಟರ್ ನಾಗನಗೌಡರು ಕೂಡ ಇಂತಹ ಅನ್ಯಾಯ ಮಸೂದೆಗಳನ್ನು ತಂದು ಪಾಸ್ ಮಾಡುತ್ತಾರೆ ಎಂದುಕೊಂಡು ಸತ್ತರು ಎಂದು ಕಾಣುತ್ತದೆ. ಈ ಮೂಲಕ ತಾವು ಆಡಳಿತವನ್ನು ದುರುಪಯೋಗ ಮಾಡಿಕೊಂಡು ತಮ್ಮ ಕಡೆಯ ಸದಸ್ಯರಿಂದ ಪಕ್ಷದ ಶಿಸ್ತಿನ ಭೀತಿಯಿಂದ ಕೈಎತ್ತಿಸಿ ಇಂತಹ ಮಸೂದೆಗಳನ್ನು ಪಾಸ್ ಮಾಡಿಕೊಳ್ಳುತ್ತಿದ್ದೀರಿ. ಇದರಿಂದ ತಮ್ಮ ಅಧಿಕಾರದ ಅಂತ್ಯವಾಗುತ್ತಿದೆ ಎಂದು ಕಾಣುತ್ತದೆ. ಆವತ್ತಿನದಿವಸ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಾತನಾಡುತ್ತಾ ಈ ರೀತಿ ಹೇಳಿದ್ದಾರೆ :

> "We have started to regulate. Sir, this Bill will further facilitate starting of regulated market committees in the remaining areas also."

ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯನ್ನು ಪ್ರಾರಂಭ ಮಾಡುತ್ತೇವೆ ಎಂಬ ಮಾತನ್ನು ಮಾನ್ಯ ರಾಮಕೃಷ್ಣಹೆಗ್ಡೆಯವರು 1963ರಲ್ಲಿಯೇ ಹೇಳಿದ್ದಾರೆ. 1963ರಲ್ಲಿ ಹೇಳಿದ್ದು 1966ರಲ್ಲಿ ಕಾಯಿದೆ ಆಯಿತು. 1968ರಲ್ಲಿ ಅಮಲ್‌ನಲ್ಲಿ ಬಂತು. ಅಮಲ್‌ನಲ್ಲಿ ಬಂದ ಕೆಲವೇ ತಿಂಗಳಲ್ಲಿ ಹೈಕೋರ್ಟಿಗೆ ಹೋಯಿತು. ಈ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳಿಗೆ ಚುನಾವಣೆಯನ್ನು ನಡೆಸಿದರೆ ಈಗ ತಮ್ಮ ಕೈಯಲ್ಲಿರುವ ಅಧಿಕಾರ ತಪ್ಪಿಹೋಗಬಹುದು, ಆದ್ದರಿಂದ ಅಧಿಕಾರಿಗಳನ್ನು ನಾಮಕರಣ ಮಾಡುವುದು ಒಳ್ಳೆಯದು ಎಂಬ ವಿಚಾರಗಳು ಮಾನ್ಯ ನಾಡಗೌಡರ ಕಿವಿಯಲ್ಲಿ ಬಡಿಯುತ್ತಿದೆ. ಒಂದುವೇಳೆ ತಮ್ಮಅಧಿಕಾರವನ್ನು ಉಳಿಸಿಕೊಳ್ಳಲು, ತಮಗೆ ಬೇಕಾದವರನ್ನು ಈ ಕಮಿಟಿಗಳಿಗೆ ನಾಮಕರಣ ಮಾಡಲು ಹೊರಟರೆ ಬಹಳ ಮಂದಿಯನ್ನು ತಾವು ಅಸಮಾಧಾನ ಮಾಡ ಬೇಕಾಗುತ್ತಿತ್ತು. ಏಕೆಂದರೆ ಬಹಳ ಮಂದಿ ತಮ್ಮ ಸುತ್ತ ಮುತ್ತಿಕೊಂಡಿದ್ದರು. ಬಾಗಲಕೋಟೆಯ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗೆ ಮುರ್ನಾಳ್ ಅವರನ್ನು ನೇಮಿಸಬೇಕೋ, ಎಡಹಳ್ಳಿ ಅವರನ್ನು ನೇಮಿಸಬೇಕೋ ಎಂಬ ಬಗ್ಗೆ ವಿವಾದವೆದ್ದು ಕೊನೆಗೆ ತಹಶಿಲ್‌ದಾರರನ್ನು ನೇಮಕ ಮಾಡಿದಿರಿ. ಮಾನ್ಯ ಮಂತ್ರಿಗಳಾದ ನಾಡಗೌಡರು ಮೈಸೂರು ರಾಜ್ಯದ ಸಿಂಡಿಕೇಟಿನ ಸದಸ್ಯರಾಗಿದ್ದಾರೆ. ಜನನಾಯಕರೆಂದು ಕರೆಸಿಕೊಳ್ಳುವವರ ಶಿಷ್ಯರಾಗಿದ್ದಾರೆ. ಮಾನ್ಯ ಮಂತ್ರಿಗಳನ್ನು ನಾನು ಒಂದು ಮಾತನ್ನು ಕೇಳುತ್ತೇನೆ. ತಮಗೆ ಸೌಜನ್ಯ ಏನಾದರೂ ಇದ್ದರೆ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ಜಾಗ್ರತೆ ಚುನಾವಣೆಯನ್ನು ನಡೆಸಬೇಕು. ಚುನಾವಣೆ ಜಾಗ್ರತೆನಡೆಸುತ್ತೇವೆಂದು ಹೇಳುತ್ತಾರೆ, ಆದರೆ ಇದುವರೆಗೆ ಯಾವ ಒಂದು ನೋಟಿಫಿಕೇಷನನ್ನು ಕೂಡ ಅಡ್ಮಿನಿಸ್ಟ್ರೇಟರ್ ಮೂಲಕ ಹೊರಡಿಸಿಲ್ಲ. ತಮ್ಮ ಕಡೆಯ ಸದಸ್ಯರುಗಳೇ ಈ ಬಿಲ್‌ನ ಪರವಾಗಿ ಎಲ್ಲಿ ಓಟು ಮಾಡುವುದಿಲ್ಲವೋ ಎಂಬ ಕಾರಣದಿಂದ ಆರ್ಡಿನೆನ್ಸ್ ಹೊರಡಿಸಿದಿರಿ. ಈಗ ತಮ್ಮ ಕಡೆಯ ಸದಸ್ಯರಿಗೆ ಏನು ಹೇಳುತ್ತಿದ್ದೀರಿ ಎಂದರೆ, ಮಾಡಿದ್ದು ತಪ್ಪಾಗಿದೆ, ತಾವುಗಳು ಪರವಾಗಿ ಓಟು ಕೊಡದಿದ್ದರೆ ವೀರೇಂದ್ರಪಾಟೀಲರ ಮಂತ್ರಿ ಮಂಡಲ ಪತನವಾಗುತ್ತದೆ ಎಂಬುದಾಗಿ. ಹೊಲಸು ಮಾಡಿದ ಮಕ್ಕಳನ್ನು ತಾಯಿಯಾದವಳು ಎತ್ತಿಕೊಳ್ಳುವಂತೆ, ತಮ್ಮ ಕಡೆಯ ಸದಸ್ಯರುಗಳು ಸರಿಯೋ ತಪ್ಪೋ ತಾವು ಹೇಳಿದಂತೆ ಪಕ್ಷದ ಮಮತೆಯಿಂದಾಗಿ ಕೇಳಬೇಕಾಗಿದೆ. ಆರ್ಟಿಕಲ್ 213 ಪ್ರಕಾರ ಆರ್ಡಿನೆನ್ಸ್ ಹೊರಡಿಸಿದ್ದೀರಿ. ಆ ರೀತಿ ಆರ್ಡಿನೆನ್ಸ್ ಹೊರಡಿಸಬೇಕಾದ ಅವಶ್ಯಕತೆ ಏನಿತ್ತು ? ಒಂದೇ ಸಲ ಮಸೂದೆಯನ್ನೇ ಸಭೆಯಮುಂದೆ ತರಬಹುದಿತ್ತು. ಅಲ್ಲದೆ ಆರ್ಟಿಕಲ್ 304ರ ಪ್ರಕಾರ ಆರ್ಡಿನೆನ್ಸ್ ಹೊರಡಿಸಲು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಸಹ ತಾವು ಪಡೆದಿಲ್ಲ. ಈ ಬಗ್ಗೆ ಮಾನ್ಯ ಸಿದ್ಧವೀರಪ್ಪನವರು ಮತ್ತು ಮಾನ್ಯ ನಾಗಪ್ಪನವರು ವಿವರಣೆ ಕೇಳಿದಾಗ ರಾಷ್ಟ್ರಾಧ್ಯಕ್ಷರ ಅನುಮತಿಯ ಅವಶ್ಯಕತೆ ಇಲ್ಲ ಎಂದು ಹೇಳಿದಿರಿ. ಇದುಕ್ರಮಬದ್ಧ ವರ್ತನೆಯೇ ?

ಇದಕ್ಕೆ ಕಾನ್‌ಸ್ಟಿಟ್ಯೂಷನಲ್ ರೈಟ್ ಪ್ರಕಾರ ಗವರ್ನರವರು ಪರ್ಮಿಷನ್ ಕೊಡಲೇಬೇಕು. ಆರ್ಟಿಕಲ್ 304 ರ ಪ್ರಕಾರ ಪ್ರೆಸಿಡೆಂಟ್‌ರವರ ಅಸೆಂಟು ಪಡೆಯುವುದು ಅವಶ್ಯ ಇದೆ. ಹಾಗಿದ್ದರೂ ಇದರ ಅವಶ್ಯಕತೆ ಇಲ್ಲ ಎಂದು ತಾವು ಇಲ್ಲಿ ಬಿಲ್ ತಂದು ಇದನ್ನು ಪಾಸು ಮಾಡಬೇಕೆಂದು ಕೇಳುತ್ತಿದ್ದೀರಿ. ಇದರಿಂದ ನೀವು ಗವರ್ನರ್‌ರವರಿಗೆ ಕೆಟ್ಟ ಹೆಸರು ತರುತ್ತಿದ್ದೀರಿ. ಇದರ ಬಗ್ಗೆ ನೀವೇ ಆದರೂ ಕೂಡ ನಿಮ್ಮ ಲೀಗಲ್ ಡಿಪಾರ್ಟ್‌ಮೆಂಟ್ ಮೂಲಕ ಸರಿಯಾದ ವಿವರಣೆಗಳನ್ನು ಪಡೆದು ಇಲ್ಲಿಗೆ ಈ ಬಿಲ್‌ನ್ನು ತಂದಿದ್ದೀರಾ ಎಂದು ನಾನು ಕೇಳಬೇಕಾಗಿದೆ. ನಾಳೆ ಇಂತಹ ಒಂದು ಕಾಯಿದೆ ಕೋರ್ಟಿಗೆ ಹೋದರೆ ಅವರು ಇದನ್ನು ಇನ್‌ವ್ಯಾಲಿಡ್ ಎಂದು ಹೇಳಿದರೆ ಆಗ ನಿಮ್ಮ ಲಾ ಇಲಾಖೆಯ ಅಧಿಕಾರಿಗಳ ಮುಖಕ್ಕೆ ಮಸಿ ಬಳಿದಂತಾಗುವುದಿಲ್ಲವೇ? ಇದರ ಬಗ್ಗೆ ತಾವು ಇಲ್ಲಿಯವರೆಗೂ ಏಕೆ ಆಲೋಚನೆ ಮಾಡಲಿಲ್ಲ? ಆರ್ಟಿಕಲ್ 304 ಏತಕ್ಕಾಗಿ ಇಂಪೋಜ್ ಮಾಡಿದ್ದಾರೆ ಎನ್ನುವುದನ್ನಾದರೂ ತಾವು ಮನಸ್ಸಿಗೆ ತೆಗೆದುಕೊಂಡಿದ್ದೀರಾ ಎಂದು ಇಲ್ಲಿ ತಮ್ಮನ್ನು ಕೇಳಬೇಕಾಗಿದೆ. ಘಟನಾತ್ಮಕವಾಗಿ ಕೊಟ್ಟಿರುವ ಅಧಿಕಾರವನ್ನು ನೀವು ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ. ಫ್ರೀ ಟ್ರೇಡ್ ಎನ್ನುವುದು ಒಂದೊಂದು ಕಡೆ ಒಂದೊಂದು ರೀತಿಯಲ್ಲಿರಕೂಡದು. ಇಲ್ಲಿ ಒಂದು ರೀತಿ ಆಂಧ್ರದಲ್ಲಿ ಒಂದು ರೀತಿ ಮಹಾರಾಷ್ಟ್ರದಲ್ಲಿ ಒಂದು ನಮೂನೆ ಆಗಬಾರದೆಂದು ಇದನ್ನೆಲ್ಲಾ ಪ್ರೆಸಿಡೆಂಟ್‌ರವರು ಪರಿಶೀಲನೆ ಮಾಡಿ ಎಲ್ಲ ರಾಜ್ಯಗಳಿಗೂ ಅನುಕೂಲವಾಗುವಂತೆ ಅವರು ತಮ್ಮ ಅಸೆಂಟ್ ಕೊಡಬೇಕು. ಇದೂ ಅಲ್ಲದೆ ಇದರಲ್ಲಿರುವ ಕೆಲವು ಕಲಮುಗಳು ರಿಡಂಡೆಂಟ್ ಆಗಿವೆ. ಇದರಂತೆ ನೀವು ಹೊರಡಿಸುವ ಎಷ್ಟೋ ನೋಟಿಫಿಕೇಷನ್‌ಗಳು ಹಾಗೂ ಸರಕಾರದ ಆರ್ಡರುಗಳೂ ಕೂಡ ರಿಡಂಡೆಂಟು ಆಗುತ್ತವೆ. ಇಂತಹ ಬಿಲ್ಲನ್ನು ಗವರ್ನರ್‌ರವರ ಕಡೆಗೆ ಕೊಟ್ಟು ಅವರ ಅಸ್ಸೆಂಟು ಪಡೆಯಲು ಏತಕ್ಕಾಗಿ ಹಿಂಜರಿಯುತ್ತಿದ್ದೀರಿ? ಎಂದು ನಾನು ಇಲ್ಲಿ ತಮ್ಮನ್ನು ಕೇಳುತ್ತೇನೆ. ಮೊಟ್ಟಮೊದಲಿಗೇ ಇಂತಹ ಆರ್ಡಿನೆನ್ಸ್‌ನ್ನು ಗವರ್ನರ ಮೂಲಕ ಹೊರಡಿಸಲು ಅಧಿಕಾರವೇ ಇಲ್ಲ ಮತ್ತು ಆರ್ಟಿಕಲ್ 213 ರಂತೆ ಇದನ್ನು ಹೊರಡಿಸಿರುವುದು ತಪ್ಪು. ಇದರ ಬಗ್ಗೆ ನಾವು ಇಲ್ಲಿ ಪಾಯಿಂಟ್ ಆಫ್ ಆರ್ಡರು ಎತ್ತಿದರೂ ಸಹ ಅದಕ್ಕೆ ಸರ್ಕಾರದ ಪರ ತಕ್ಕ ಗಮನ ಕೊಡಲೇ ಇಲ್ಲ. ಎರಡನೆಯದು ಇದರಲ್ಲಿ ಸರಿಯಾದ ಒಂದು ಫೈನಾನ್ಷಿಯಲ್ ಮೆಮೊರಾಂಡಂನ್ನು ಕೊಟ್ಟು ಎಷ್ಟು ಖರ್ಚು ಬರುತ್ತದೆ ಎನ್ನುವ ವಿವರಗಳನ್ನು ಕೊಡಬೇಕಾಗಿತ್ತು. ಆದರೆ ಇಲ್ಲಿ ಅದನ್ನೂ ಕೊಡಲಿಲ್ಲ. ಇದಕ್ಕೆಲ್ಲಾ ಕಾನ್‌ಸ್ಟಿಟ್ಯೂಷನಲ್ ಪದ್ಧತಿಗಳನ್ನು ಅನುಸರಿಸಬೇಕಾಗಿದೆ. ಇದರಂತೆ ತಾವು ಯಾವುದನ್ನು ಯೋಚಿಸದೇ ಇಲ್ಲಿ ಬಿಲ್ಲನ್ನು ತಂದು ತಪ್ಪು ಮಾಡಿದ್ದೀರಿ. ಇಂತಹ ಒಂದು ಬಿಲ್‌ನ್ನು ಈಗ ತರಬೇಕಾದಂತಹ ಎಮರ್ಜನ್ಸಿಯಾದರೂ ಏನಿತ್ತು? ಸರಿಯಾದ ರೀತಿಯಲ್ಲಿ ಬಿಲ್ಲನ್ನು ತರಲು ನೀವು ಅಸಮರ್ಥರಾಗಿದ್ದೀರಿ ಎಂದು ಹೇಳದೆ ವಿಧಿ ಇಲ್ಲ. ಇದರ ಬಗ್ಗೆ ಬಾರಿಬಾರಿಗೂ ಪಾಯಿಂಟ್ ಆಫ್ ಆರ್ಡರುಗಳನ್ನು ತೆಗೆದು ಮನಮುಟ್ಟುವಂತೆ ಹೇಳಿದರೂ ನೀವು ಯಾವುದಕ್ಕೂ ಕಿವಿಗೊಡಲಿಲ್ಲ. ನಿಮಗೆ ಹೇಳಿ ಹೇಳಿ ಸಾಕಾಯಿತು. ನಿಮ್ಮ ಉದ್ದೇಶ ನಾವು ಪುನಃ ಈ ಕಾಯಿದೆಯನ್ನು ಹೈ ಕೋರ್ಟಿಗೆ ತೆಗೆದುಕೊಂಡು ಹೋಗಬೇಕೆಂದು ಇಲ್ಲಿ ಇಂತಹ ಘಟನಾ ವಿರೋಧಿ ಕಾನೂನುಗಳನ್ನು ಮಾಡುತ್ತಿದ್ದೀರಾ ಎಂದು ಕೇಳಬೇಕಾಗಿದೆ. ಇಂತಹ ಕಾನೂನು ಮಾಡಲಿಕ್ಕೆ ನಿಮಗೆ ಯಾವ ನ್ಯಾಯ ಇಲಾಖೆಯವರು ಸಲಹೆ ಕೊಟ್ಟರು? ನಿಮ್ಮ ಅಧಿಕಾರಿಗಳು ಮಾಡಿರುವುದು ಅಕ್ರಮವಾಗಿದೆ ಎಂದು ನಾವು ಇಲ್ಲಿ ಪದೇ ಪದೇ ಹೇಳುತ್ತಿದ್ದರೂ ಅದನ್ನು ಗಮನಿಸದೇ ಮಂತ್ರಿಮಂಡಲದ ಒಪ್ಪಿಗೆ ಪಡೆದು ಇಂತಹ ಅಕ್ರಮವಾದ ಕಾಯಿದೆಯನ್ನು ಏಕೆ ಮಾಡುತ್ತೀರಿ! ಇದಕ್ಕಾಗಿ ನಾವು ಹೈ ಕೋರ್ಟಿಗೆ ಹೋಗಿ ಈ ಕಾಯಿದೆ ನ್ಯಾಯಬದ್ಧವಾಗಿಲ್ಲ, ಇದನ್ನು ರದ್ದು ಮಾಡಬೇಕೆಂದು ಹೇಳಿ ಅಲ್ಲಿ ಕೇಳಬೇಕೇನು! ಇದಕ್ಕಾಗಿ ಇನ್ನೊಂದು ರಿಟ್ ಪಿಟಿಷನ್ ಫೈಲ್ ಮಾಡಿ ನಿಮ್ಮ ಅಡ್ವೋಕೇಟ್ ಜನರಲ್‌ರವರಿಗೆ ದಿನಕ್ಕೆ ಎರಡೂವರೆ ಸಾವಿರದಂತೆ ಫೀಸು ಕೊಟ್ಟು ಅವರ ಜೋಬನ್ನು ತುಂಬಿಸುವುದೇ ನಿಮ್ಮ ಉದ್ದೇಶವೇನು? ಹೀಗೆ ಬಡ ಬೋರೇಗೌಡನ ರೊಕ್ಕವನ್ನು ವಿನಾಕಾರಣ ಏತಕ್ಕಾಗಿ ಖರ್ಚುಮಾಡುತ್ತೀರಿ? ಬೇರೆ ಯಾವುದಾದರೂ ಉಪಯೋಗವಾಗುವ ಕೆಲಸಗಳಿಗೆ ಹಣ ಬೇಕು ಎಂದು ಕೇಳಿದರೆ ಹಣವಿಲ್ಲ ಎಂದು ಹೇಳುತ್ತೀರಿ. ಆದರೆ ಇಲ್ಲಿ ಹೀಗೆ ಅನ್ಯಾಯವಾಗಿ ಹಣವನ್ನೇಕೆ ಖರ್ಚು ಮಾಡುತ್ತೀರಿ? ಅಲ್ಲದೆ ಇದರಲ್ಲಿರುವ ಮೂರನೇ ತೊಂದರೆ ಎಂದರೆ ಇದರಲ್ಲಿ ಅನೇಕ ರಿಡಂಡೆಂಟ್ ಆದ ಕ್ಲಾಸುಗಳಿವೆ. ಹೀಗಿರುವಾಗ ನೀವು ಇಲ್ಲಿ ಎಲ್ಲ ಸೆಕ್ಷನ್‌ಗಳನ್ನೂ ತರುವುದಕ್ಕೆ ಬದಲಾಗಿ ಬರೀ ಹತ್ತನೇ ಕಲಮು ಒಂದನ್ನೇ ತಿದ್ದುಪಡಿ ತಂದು ಪಾಸು ಮಾಡಿಸಿಕೊಳ್ಳಬಹುದಾಗಿತ್ತು. ನಿಮ್ಮಲ್ಲಿ ದುರುದ್ದೇಶವೇನೂ ಇಲ್ಲದಾಗಿದ್ದರೆ ಉಳಿದ ಇತರ ಕ್ಲಾಸುಗಳನ್ನು ಹಾಗೇ ಬಿಡಬಹುದಾಗಿತ್ತು. ಹೀಗೆ ನೀವು ಮಾಡುತ್ತಿರುವುದು ಪ್ರಜಾಪ್ರಭುತ್ವಕ್ಕೆ ಶೋಭಿತವೇ!

ಮತ್ತೆ ಇದರಲ್ಲಿ ನೀವು ಎಕ್ಸ್‌ಪ್ಲೆನೇಟರಿ ಸ್ಟೇಟುಮೆಂಟು ಎಂದು ಕೊಟ್ಟಿದ್ದೀರಿ. ಇದನ್ನು ನಿಮ್ಮ ನ್ಯಾಯ ಇಲಾಖೆಯ ಅಧಿಕಾರಿಗಳು ಯಾರಾದರೂ ಸರಿಯಾಗಿ ಓದಿ ನೋಡಿದ್ದಾರೆಯೇ!

(ಶ್ರೀ ಕೆ. ಎಚ್. ಪಾಟೀಲ್)

ಇವರಿಗೆಲ್ಲಾ ಇದು ಸಮಾಧಾನವಾಗುತ್ತದೆಯೇ? ಏತಕ್ಕಾಗಿ ಇಂತಹ ಒಂದು ಆರ್ಡಿನೆನ್ಸ್ ಇಲ್ಲಿ ತರಬೇಕಾಯಿತು? ಇಂತಹ ಅರ್ಹತೆ ಇಲ್ಲದಿರುವ ಅಧಿಕಾರಿಗಳ ಮಾತನ್ನು ಕೇಳಿಕೊಂಡು ಇಂತಹ ಕಾನೂನನ್ನು ಏತಕ್ಕಾಗಿ ಮಾಡಲು ಹೊರಟಿದ್ದೀರಿ? ಇದಕ್ಕೆ ನಿಮ್ಮ ಅಧಿಕಾರಿಗಳು ಸರಿಯಾದ ವಿವರಣೆಗಳನ್ನು ತಮಗೆ ಕೊಟ್ಟಿದ್ದಾರೆಯೇ ಘಟನಾತ್ಮಕವಾಗಿ ಜನತೆ ನಿಮಗೆ ಅಧಿಕಾರ ಕೊಟ್ಟಿರುವಾಗ ಅದನ್ನು ಸರಿಯಾಗಿ ಪರಿಶೀಲನೆ ಮಾಡಿದ್ದೀರಾ ಎಂದು ಕೇಳಬೇಕಾಗಿದೆ. ಇಲ್ಲಿ ನೀವು ಜನತೆಗೆ ವಿಶ್ವಾಸ ದ್ರೋಹವೆಸಗಿದ್ದೀರಿ.

ಇನ್ನು ರೆಗ್ಯೂಲೇಟೆಡ್ ಮಾರ್ಕೆಟ್ಟು ಕಮಿಟಿಗಳಲ್ಲಿರುವ ಚೀಫ್ ಮಾರ್ಕೆಟಿಂಗು ಆಫೀಸರು ಬೇಕಾದಷ್ಟು ಸರ್ಕ್ಯುಲರ್‌ಗಳನ್ನು ಹೊರಡಿಸಿರುತ್ತಾರೆ. ''Delegation of power is an illegality'' ಇದು ಇಲ್ಲೀಗಲ್ ಆಗಿದೆ ಎಂದು ಸುಪ್ರೀಂ ಕೋರ್ಟಿಗೆ ಹೋಗಿ ಅವರ ನಿರ್ಣಯ ಬಂದಮೇಲೆ ಇದನ್ನು ಬದಲಾವಣೆ ಮಾಡಬೇಕೆಂದು ಇದ್ದೀರಾ? ನಿಮ್ಮ ಚೀಫ್ ಮಾರ್ಕೆಟಿಂಗ್ ಆಫೀಸರು ಹೊರಡಿಸಿರುವ ಸರ್ಕ್ಯುಲರ್‌ಗಳು ಇಲ್ಲೀಗಲ್ ಎಂದು ಎಷ್ಟೋ ಜನ ಹೈ ಕೋರ್ಟಿನಲ್ಲಿ ಚಾಲೆಂಜು ಮಾಡಿದ್ದಾರೆ. ಮಾನ್ಯ ಮಂತ್ರಿಗಳಾದ ಶ್ರೀ ಬಿ. ಎಲ್. ಗೌಡರವರು ಇಂತಹ ಅಪೀಲುಗಳೆಲ್ಲಾ ನಿಕಾಲು ಆದವು ಎಂದು ಒಮ್ಮೆ ಇಲ್ಲಿ ಹೇಳಿಬಿಟ್ಟರು. ಆದರೆ ಯಾವ ಒಂದು ಅರ್ಜಿ ಕೂಡ ಇನ್ನೂ ನಿಕಾಲು ಆಗಿಲ್ಲ. ಇನ್ನೂ ನಡೆಯುತ್ತಿವೆ. ಇದಕ್ಕಾಗಿ ಸುಪ್ರೀಂ ಕೋರ್ಟಿಗೆ ಹೋಗಿ ಅವರಿಂದ ನಿರ್ಣಯ ಪಡೆದ ಹೊರತು ಯಾವುದನ್ನೂ ಸರಿ ಮಾಡಲು ಸಾಧ್ಯವಿಲ್ಲ ಎಂದು ತಾವು ಭಾವಿಸಿರಬಹುದು. ಯಾವ ಡೆಮಾಕ್ರಟಿಕ್ ಸರಕಾರ ಇದ್ದರೂ ಕೂಡ ಇಂತಹ ಒಂದು ಬಿಲ್ಲಿಗೆ ಅವಕಾಶ ಕೊಡಕೂಡದು ಎಂದು ಹೇಳುತ್ತೇನೆ. ಇದಕ್ಕಾಗಿ ತಾವು ಈ ಬಿಲ್ಲನ್ನು ಬದಿಗಿಟ್ಟು ಇಂತಹ ಇಲ್ಲೀಗಲ್ ಸರ್ಕ್ಯುಲರುಗಳನ್ನು ಕಳುಹಿಸಲು ಅವಕಾಶ ಕೊಡಬಾರದು. ನಿಮ್ಮಲ್ಲಿರುವ ಐ.ಎ.ಎಸ್. ಅಧಿಕಾರಿಗಳೂ ಯಾವ ವಿವೇಚನೆಯೂ ಇಲ್ಲದೆ ಸರ್ಕ್ಯುಲರುಗಳನ್ನು ಹೊರಡಿಸಲು ಅವಕಾಶ ಕೊಡಬೇಡಿ. ಇದರಿಂದ ಜನತೆಗೆ ಯಾವ ರೀತಿಯ ಅನುಕೂಲಗಳೂ ಒದಗುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಬೇಕಾಗಿದೆ.

5-30 P.M.

ನಾವು ಈಗ ಎಲ್ಲಿಗೆ ಹೋಗೋಣ, ಹೋದರೆ ಹೈಕೋರ್ಟಿನವರ ಹತ್ತಿರ ಹೋಗಬೇಕಾಗುತ್ತದೆ. ಒಂದೇ, ಎರಡೇ, ಮೂರೆ, ಎಷ್ಟು ನೋಟಿಫೀಕೇಷನ್ ಹೊರಡಿಸಿದ್ದೀರೋ ಅವೆಲ್ಲಾ ಸರಿಯಾಗಿದೆಯೇ ಎಂದು ಕೇಳುತ್ತೇನೆ. ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ಈ ಸಭೆಯ ಎದುರಿಗೆ ಇಟ್ಟು ತಿಳಿವಳಿಕೆ ಕೊಟ್ಟರೆ ಅವಾಗ ಅದು ಯೋಗ್ಯವೆಂದು ಹೇಳಬಹುದು. ಈವೊತ್ತು ಅನೇಕ ಸಂದರ್ಭದಲ್ಲಿ ಜನತಾ ಪ್ರತಿನಿಧಿಗಳಿಂದ ದೂರುಗಳು ಬಂದಿವೆ. ಒಂದು ಕಡೆ ನೀವು ಒಕ್ಕಲಿಗರ ಹಿತಸಾಧನೆ ಮಾಡುತ್ತೇವೆ ಎಂದು ಹೇಳುತ್ತೀರಿ. ನ್ಯಾಯವಾದ ಒಕ್ಕಲಿಗನಿಗೆ ಇದು ಹಿತಸಾಧನೆಯಾಗುವುದಿಲ್ಲ. ಇನ್ನೊಂದುಕಡೆ ವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಡುತ್ತೇವೆ ಎಂದು ವಚನ ಕೊಡುತ್ತೀರಿ, ಅವನಿಗೂ ಹಿತಸಾಧನೆಯಾಗುವುದಿಲ್ಲ. ಇದರ ಪ್ರಯೋಜನ ಮೂರನೆಯವನಿಗೆ ದೊರಕುವಂತೆ ಮಾಡುತ್ತೀರಿ. ಈಗ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗೆ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸುವುದಕ್ಕೆ ಬದಲಾಗಿ ಜನತಾ ಪ್ರತಿನಿಧಿಗಳನ್ನು ಹಾಕಿದ್ದರೆ ಚೆನ್ನಾಗಿತ್ತು. ರೈತರ ಹಿತಸಾಧನೆಗೆ ಎಂದು ಒಬ್ಬ ಆಡಳಿತಾಧಿಕಾರಿಯನ್ನು ಹಾಕಿದರೆ ಅದಕ್ಕಿಂತ ಅವಮಾನ ಯಾವುದೂ ಇಲ್ಲ ಎಂದು ನಾನು ಹೇಳುತ್ತೇನೆ. ಕಾರಣ ಆ ಅಧಿಕಾರಿಗೆ ಪಗಾರ ಕೊಡಬೇಕಾಗುತ್ತದೆ, ಅಲ್ಲದೆ ಆ ಅಧಿಕಾರಿ ತನ್ನ ಹಿತಸಾಧನೆ ನೋಡಿಕೊಳ್ಳುತ್ತಾನೆಯೇ ಹೊರತು ಏನು ಒಂದು ಕೆಲಸವನ್ನೂ ಮಾಡುವುದಿಲ್ಲ. ಶ್ರೀಮಾನ್ ನಾಡಗೌಡರು ಇನ್ನು ಒಂದು ವರ್ಷದೊಳಗೆ ಚುನಾವಣೆ ಮಾಡುತ್ತೇವೆಂದು ಅಶ್ವಾಸನೆ ಕೊಟ್ಟಿದ್ದಾರೆ. ಇದು ಎಷ್ಟುಮಟ್ಟಿಗೆ ಸಾಧ್ಯವಾಗುತ್ತದೋ ಗೊತ್ತಿಲ್ಲ. ಅಲ್ಲಿಯತನಕ ತಮ್ಮ ಸರ್ಕಾರ ಇದ್ದದ್ದೇ ಆದರೆ ಇನ್ನು ಏನು ಬದಲಾವಣೆ ಮಾಡುತ್ತಾರೋ ಗೊತ್ತಿಲ್ಲ. ಇನ್ನು ಒಂದು ವರ್ಷ ಅವಕಾಶ ಕೊಟ್ಟರೆ ಹೇಳಿದಂತೆ ನಡೆಯುವುದಕ್ಕೆ ಸಾಧ್ಯವೇ, ನೋಡೋಣ. ನೀವು ಅಪಾಯಿಂಟ್ ಮಾಡಿರುವ ಅಧಿಕಾರಿಗಳೆಲ್ಲಾ ಧಾರವಾಡ ಡೆಪ್ಯೂಟೀ ಕಮೀಷನರ್ ಆಫೀಸಿನಲ್ಲಿ ಸೇರಿ ಮೊದಲಿಗೇನೇ ತಮಗೆಲ್ಲಾ ಕನಿಷ್ಟ 150 ರೂ. ಭತ್ತೆ ಹೆಚ್ಚು ಮಾಡಿಕೊಡಿರಿ ಎಂದು ನಾಡಗೌಡರ ಮುಂದೆ ಅವರ ಬೇಡಿಕೆ ಇಟ್ಟಿದ್ದಾರೆ. ಅದು ಒಂದು ಮಾಡಿದರೇ ಹೊರತು ಬೇರೆ ಯಾವುದೂ ಮಾಡಲಿಲ್ಲ. ಇದರಿಂದ ಅವರು ತಮ್ಮ ಅನುಕೂಲ ಮಾಡಿಕೊಳ್ಳುತ್ತಿದ್ದಾರೆಯೇ ಹೊರತು ಬೇರೆ ಕೆಲಸ ಏನೂ ಆಗುತ್ತಿಲ್ಲ. ಈವೊತ್ತಿನ ದಿವಸ ಇದನ್ನೆಲ್ಲಾ ಆಲೋಚನೆ ಮಾಡಿರಿ

ಎಂದು ನಾನು ಹೇಳುತ್ತೇನೆ. ಈವೊತ್ತಿನವರೆಗೆ ನೀವು ಹೊರಡಿಸಿದ ಆರ್ಡಿನೆನ್ಸ್‌ಗಳ ಮೂಲಕ ಏನು ಒಂದು ಕೆಲಸವನ್ನೂ ಮಾಡಲಿಲ್ಲ. ಯಾರು ರಿಟ್ ಹಾಕಿದ್ದಾರೋ ಅದು ಒಂದನ್ನು ಬಿಟ್ಟು ಬೇರೆ ನೋಟಿಫಿಕೇಷನ್ ಏನಾದರೂ ಹೊರಡಿಸಿದರೇ? ಇದರ ಬಗ್ಗೆ ಕಲೆಕ್ಟರ್ ಆಗಲಿ, ಅಸಿಸ್ಟೆಂಟ್ ಕಮೀಷನರ್ ಆಗಲಿ, ತಾಸೀಲ್ದಾರರೇ ಆಗಲಿ ಏನು ಕೆಲಸ ಮಾಡಿದ್ದಾರೆ? ರಗ್ಯುಲೇಟೆಡ್ ಮಾರ್ಕೆಟ್ ಕಮಿಟಿ ಬಗ್ಗೆ ವೋಟರ್ ಲಿಸ್ಟ್ ಮಾಡಿದ್ದಾರೆಯೇ? ಈವೊತ್ತಿನವರೆಗೂ ಅದರ ಕಡೆ ಏನೂ ಲಕ್ಷ್ಯ ಕೊಟ್ಟಿಲ್ಲ. ನಾವು ನಿಮ್ಮ ವಿರುದ್ಧವಾಗಿ ಭಾಷಣ ಮಾಡುವುದಿಲ್ಲ. ಈಗ ನೀವು ಹೊರಡಿಸಿದ ಆರ್ಡಿನೆನ್ಸ್ ತಪ್ಪು ಎಂದು ಹೇಳುತ್ತೇನೆ. ಇದಕ್ಕೆ 4 ಜನ ತಜ್ಞರ ಕಮಿಟಿಯನ್ನು ನೇಮಿಸೋಣ, ಹಿರಿಯ ಅಧಿಕಾರಸ್ಥರನ್ನೂ ಕರೆಸೋಣ, ಮತ್ತು ಈ ಮನೆಯ ಒಬ್ಬೊಬ್ಬ ಹಿರಿಯ ಸದಸ್ಯರನ್ನೂ ಕರೆಸೋಣ, ಶ್ರೀಮಾನ್ ನಾಡಗೌಡರವರನ್ನೂ, ಶ್ರೀಮಾನ್ ಬಿ. ಎಲ್. ಗೌಡರವರನ್ನೂ ಕರೆಯೋಣ. ದುರ್ದೈವದಿಂದ ಅವರು ಈವೊತ್ತು ಮಂತ್ರಿಗಳಾಗಿದ್ದಾರೆ. ಅವರು ನಾನು ಒಬ್ಬ ಸಾಧಾರಣ ಸದಸ್ಯ, ಮಂತ್ರಿಗಳಲ್ಲ ಎಂದು ತಿಳಿದುಕೊಂಡು ಕೆಲಸ ಮಾಡಿದರೆ ರೈತರ ಕಲ್ಯಾಣವಾಗುತ್ತದೆ. ನನಗೆ ಅಧಿಕಾರವಿದೆ, ನಾನು ಮಾಡಿದ್ದು ತಪ್ಪು ಇಲ್ಲ ಎಂದು ಹೇಳಿದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಈವೊತ್ತು ನಿಮ್ಮ ಕಡೆ 134 ಮಂದಿ ಇದ್ದದ್ದನ್ನು 138 ಮಂದಿ ಮಾಡಿಕೊಳ್ಳಲು 4 ಜನತಾ ಬಜಾರಗಳನ್ನು ಓಪನ್ ಮಾಡಿ ನಿಮಗೆ ಬೇಕಾದ 4 ಜನರನ್ನು ಛೇರ್ಮನ್ ಆಗಿ ತೆಗೆದುಕೊಂಡು, ನಿಮ್ಮ ಪಕ್ಷವನ್ನು ಬಲಪಡಿಸಿಕೊಳ್ಳುವಂತೆ ಮಾಡಬಾರದು. ಇದು ಸಾರ್ವಜನಿಕರ ಕೆಲಸ ಎಂದು ತಿಳಿಯಬೇಕು. ಪೂಜ್ಯ ಮಹಾತ್ಮಾಗಾಂಧೀಯವರು ಹೇಳಿದ ಒಂದು ವಿಷಯವನ್ನು ಮಾನ್ಯ ಮಂತ್ರಿಗಳಾದ ನಾಡಗೌಡರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಏನೆಂದರೆ ಮನುಷ್ಯ ಎಷ್ಟೋ ತಪ್ಪು ಮಾಡಬಹುದು, ಒಂದು ಸಾರಿ ಯೋಚನೆ ಮಾಡಿ ತಾನು ಮಾಡಿದ್ದು ತಪ್ಪು ಎಂದು ತಿಳಿದುಕೊಂಡರೆ ಆತ ಯೋಗ್ಯಮನುಷ್ಯನಾಗುತ್ತಾನೆ. ಈವೊತ್ತು ನಿಮಗೆ ಆಲೋಚನೆ ಮಾಡುವುದಕ್ಕೆ ಒಂದು ಅವಕಾಶವನ್ನು ಕೊಟ್ಟಿದ್ದೇವೆ. ನೀವು ಈ ಕಮಿಟಿಯನ್ನು ರೀಕಾನ್ಸಿಟ್ಯೂಟ್ ಮಾಡುವುದಕ್ಕೆ ತಯಾರಾಗಿದ್ದೀರಾ? ತಾವು ಏನು ತತ್ವ ಹೇಳುತ್ತೀರೋ ಅದನ್ನು ನಡಸಿಕೊಂಡು ಹೋಗಿ. ನಾನು ಒಂದು ವಿಷಯ ಹೇಳುತ್ತೇನೆ. ಬಸವೇಶ್ವರರ ಸಂಘ ರಿಜಿಸ್ಟ್ರೇಷನ್ ಆಗಿ ಎಷ್ಟು ದಿವಸ ಆಯಿತು? ನೀವು ಈ ಸಂಘಕ್ಕೆ ರಾಜೀನಾಮೆಯನ್ನು ಮಿನಿಸ್ಟರ್ ಆದಮೇಲಾದರೂ ಕೊಟ್ಟಿರಾ? ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ಈ ಸಂಘದವರು ಪ್ರತಿವರ್ಷವೂ ತನ್ನ ಲೆಕ್ಕಪತ್ರಗಳನ್ನು ಕೊಡುತ್ತಿದ್ದಾರೆಯೇ? ಚುನಾವಣೆ ಜರುಗುತ್ತಿದೆಯೇ? ಇಲ್ಲಾ, ನಿಮ್ಮಲ್ಲಿ ನಿಯಮಾಚರಣೆಗೆ ಮಹತ್ವವೇ ಇಲ್ಲ.

ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರು ಈ ಬಿಲ್ಲಿಗೆ ಸಂಬಂಧಪಟ್ಟಂತೆ ಮಾತನಾಡಬೇಕು.

ಶ್ರೀ ಕೆ. ಹೆಚ್. ಪಾಟೀಲ್.—ಶ್ರೀಮಾನ್ ಬಿ. ಎಲ್. ಗೌಡರು, ನಾಡಗೌಡರ ವಿರುದ್ಧ ಮಾತಾಡಲು ಇನ್ನಷ್ಟು ಪ್ರಚೋದನೆ ಮಾಡಲಿ ಎಂದು ನನ್ನನ್ನು ಹುರಿದುಂಬಿಸುತ್ತಿದ್ದಾರೆ. ಬಿ.ಎಲ್. ಗೌಡರೂ ಕೂಡ ನನ್ನ ಸ್ನೇಹಿತರೇ, ಆರೀತಿ ಕೇಳಬಾರದು ಎಂದು ಮನವಿಮಾಡಿಕೊಳ್ಳುತ್ತೇನೆ. ಸ್ವಾಮಿ, ಈ ದೃಷ್ಟಿಯಿಂದ ನಾನು ಕೇಳುವುದು ಮಾರ್ಕೆಟ್ ಕಮಿಟಿಗಳಿಗೆ 10-12 ವರ್ಷದಿಂದ ಚುನಾವಣೆಮಾಡಿದ್ದೀರಾ? ಚುನಾವಣೆ ಮಾಡಲಿಕ್ಕೆ ಹಿಂಜರಿದವರು ಯಾರು? ಇದಕ್ಕೆ ಹೊಣೆಗಾರರು ಯಾರು? ತಾವೇ ಎಂದು ನಾನು ಹೇಳುತ್ತೇನೆ. ಚುನಾವಣಾಕಾರ್ಯ ಕಲೆಕ್ಟರಲ್ಲೂ, ಅಸಿಸ್ಟೆಂಟ್ ಕಮಿಶನರಲ್ಲೂ, ತಾಸೀಲ್ದಾರರಲ್ಲೂ, ಅಡಕವಾಗಿದೆ. ಇದರಲ್ಲಿ ಯಾರು ಯಾರು ಸಂಬಂಧಪಟ್ಟವರು ಇದ್ದರೋ ಅವರಿಗೆ ಶಿಕ್ಷೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಅದರ ಬದಲಾಗಿ ಅವರಿಗಿಂದು ಹೆಚ್ಚಿನ ಅಧಿಕಾರ ಕೊಟ್ಟಿದ್ದೀರಿ. ಇದರ ಬಗ್ಗೆ ತಮ್ಮ ವರ್ತನೆ ಪರಾಂಬರಿಸಬೇಕೆಂದು ಕಳಕಳಿಯಿಂದ ಬಿನ್ನಹ ಮಾಡುತ್ತೇನೆ.

ಶ್ರೀ ಸದಾಶಿವಪ್ಪ ಪಾಟೀಲ್.—ಈ ಸೊಸೈಟಿಯ ಆಡಳಿತದ ಬಗ್ಗೆ ಏನಾದರೂ ಅವಿಶ್ವಾಸ ತರಬೇಕಾದರೆ ಅದಕ್ಕೆ ಅವಕಾಶ ಈ ಆಕ್ಟಿನಲ್ಲಿ ಇಲ್ಲ. ಆದರೆ ಸೊಸೈಟಿಯವರು ಸರ್ಕಾರದ ವಿರುದ್ಧವಾಗಿ ಅಥವಾ ಮಂತ್ರಿಗಳ ವಿರುದ್ಧವಾಗಿ ಆಡಳಿತ ಮಾಡಿದ ಪಕ್ಷದಲ್ಲಿ ಅಲ್ಲಿ ಅಡ್ಮಿನಿಸ್ಟ್ರೇಟರ್ ನೇಮಕ ಮಾಡಬಹುದು ಎಂದು ಇದೆ. ಇದಕ್ಕೆ ಏನು ಹೇಳುತ್ತೀರಿ?

ಶ್ರೀ ಕೆ. ಹೆಚ್. ಪಾಟೀಲ್.—ಸೂಪರಸೀಡ್ ಮಾಡಲಿಕ್ಕೆ 130ನೇ ಸೆಕ್ಷನ್ ಇದೆ. ಶ್ರೀಮಾನ್ ನಾಗಪ್ಪನವರೂ ಕೂಡ ನಮ್ಮ ನಜರಿಗೆ ತಂದಿದ್ದಾರೆ, 130ನೇ ಸೆಕ್ಷನ್ ಪ್ರಕಾರ ಅಡ್ಮಿನಿಸ್ಟ್ರೇಟರ್ ನೇಮಕವಾದಾಗ, ಅಥವಾ ಆರ್ಡಿನೆನ್ಸ್ ತಂದಾಗ ಆವೊತ್ತಿನ ಜನತೆ ಇದನ್ನು ಪರಿಶೀಲನೆ ಮಾಡಬೇಕು. ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಹಿಂದೆ ಸದಸ್ಯರಾಗಿದ್ದ ಶ್ರೀಮಾನ್ ಕೆ. ಪಿ. ಗದಗರವರು, ಮಾತನಾಡುತ್ತಾ "ನನ್ನ ಅಭಿಪ್ರಾಯ ಇಷ್ಟೇ, ಹೆಚ್ಚು ನ್ಯಾಯ ದೊರೆಯಬೇಕು ಎಂದರೆ ತತ್ಪಶಃ ಅದೇ ಇಲಾಖೆಯವರು ಅಪೀಲು ವಿಚಾರಣೆ ಮಾಡುವುದು ಸರಿಯಲ್ಲ; ಎಂದು ಹೇಳಿದ್ದಾರೆ. ಅವರೂ ಆಳುವ ಪಕ್ಷದ ಸದಸ್ಯರಾಗಿದ್ದರು. ಅವರು ಹೇಳಿದಂಥ ತತ್ವವನ್ನು ಎಷ್ಟುಮಟ್ಟಿಗೆ

(ಶ್ರೀ ಕೆ. ಎಚ್. ಪಾಟೀಲ್)

ಅಳವಡಿಸಿದ್ದಾರೆ ಎನ್ನುವುದನ್ನು ನೋಡಬೇಕು. ಇಂಥ ಉದಾತ್ತವಾದ ತತ್ವವನ್ನು ಯೂನಿವರ್ಸಿಟಿ ಸದಸ್ಯರಾಗಿ, ಸಿಂಡಿಕೇಟ್ ಸದಸ್ಯರಾಗಿ, ಅನೇಕ ಸಂಘ ಸಂಸ್ಥೆಗಳ ಚಾಲಕ ಪಾಲಕರಾಗಿ ಇದ್ದಂಥ ಮಾನ್ಯ ಮಂತ್ರಿಗಳಿಗೆ ನಾನು ಹೇಳಬೇಕಾಗಿಲ್ಲ. ಚುನಾವಣೆಯನ್ನು ಮಾಡುವ ಅಧಿಕಾರ ಯಾರಿಗೆ ಇತ್ತು ? ಮಾರ್ಕೆಟ್ ಕಮಿಟಿ ಚೇರ್‌ಮನ್ನರಿಗೆ ಆ ಅಧಿಕಾರ ಬರಬಾರದು ಎಂದು ಯಾವ ಉದ್ದೇಶದಿಂದ ಮೂಲ ಕಾಯಿದೆಯನ್ನು ಮಾಡಿದರೋ ಅದಕ್ಕೆ ಕೊಡಲಿ ಪೆಟ್ಟು ಕೊಟ್ಟರು. ಯಾರನ್ನು ಅಧಿಕಾರದಲ್ಲಿಟ್ಟಿದ್ದಾರೆ, ಅವರ ಕೈಯಲ್ಲಿ ಅಧಿಕಾರ ಮಾಡುವ ಅವಕಾಶವನ್ನು ಕೊಟ್ಟಿದ್ದಾರೆ. ಉದಾಹರಣೆಗೆ 100 ರೂಪಾಯಿ ಸಂಬಳ ಗಿಂಬಳದ ಅನುಕೂಲ ಇದ್ದಾಗ ಏಕೆ ಚುನಾವಣೆಯನ್ನು ಮಾಡುವುದಕ್ಕೆ ಹೋಗುತ್ತಾನೆ ಎನ್ನುವುದನ್ನು ನೋಡಬೇಕು. ಒಂದು ವರ್ಷದೊಳಗೆ ಚುನಾವಣೆಗಳು ಆಗುತ್ತವೆ ಎಂದು ತಿಳಿದುಕೊಂಡು ಆರ್ಡಿನೆನ್ಸ್ ಹೊರಡಿಸಿ ತಿದ್ದುಪಡಿ ಕಾಯಿದೆಯನ್ನು ತಂದಿದ್ದಾರೆ. ಕಾಯಿದೆಯಲ್ಲಿ ಇರುವ ಪ್ರಕಾರ ಒಂದು ವರ್ಷದೊಳಗೆ ಯಾವುದೇ ಕ್ರಮ ತೆಗೆದುಕೊಂಡರೂ ತೀರಿತು ಎಂದು ಹೇಳಿದ್ದಾರೆ. ಒಂದು ವರ್ಷದೊಳಗಾಗಿ ಚುನಾವಣೆಗೆ ಸಂಬಂಧಪಟ್ಟ ಕ್ರಮವನ್ನು ತೆಗೆದುಕೊಂಡು ಇಂತಿಷ್ಟು ಜನರನ್ನು ಇಂಥ ಕಾನ್‌ಸ್ಟಿಟ್ಯುಯೆನ್ಸಿಯಿಂದ ಚುನಾವಣೆ ಮಾಡುತ್ತೇವೆಂದು ಒಂದು ನೋಟಿಫಿಕೇಷನ್ ಹೊರಡಿಸಿದರೆ ತೀರಿತು ಮುಂದೆ 50 ವರ್ಷಗಳ ತನಕ ಚುನಾವಣೆ ಆಗದೆ ಇದ್ದರೂ ಅಧಿಕಾರದಲ್ಲಿ ಯಾರು ಇರುತ್ತಾರೆಯೋ ಅವರೇ ಮುಂದುವರಿಯುತ್ತಾರೆ.

ಶ್ರೀ ಸದಾಶಿವಪ್ಪ ಪಾಟೀಲ್.—ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕಾದರೆ ಯಾರಾದರೂ ಅಧಿಕಾರಿಯನ್ನು ನೇಮಕ ಮಾಡಬಹುದು. ಆದರೆ ಖಾಸಗಿಯವರನ್ನು ಆಡಳಿತಾಧಿಕಾರಿಯಾಗಿ ನೇಮಕ ಮಾಡಲಿಕ್ಕೆ ಬರುತ್ತದೆಯೇ? ಗಂಗಾವತಿಯಲ್ಲಿ ಖಾಸಗಿಯವರನ್ನು ನೇಮಕ ಮಾಡಿದ್ದಾರೆ. ಇಂಥದ್ದು ಮಾಡುವುದಕ್ಕೆ ಬರುತ್ತದೆಯೋ ಇಲ್ಲವೋ ಎನ್ನುವುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಪಿ. ಎಂ. ನಾಡಗೌಡ.—ಮಾರ್ಕೆಟಿಂಗ್ ಕಮಿಟಿಯನ್ನು ಸೂಪರ್‌ಸೀಡ್ ಮಾಡಿ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ನನ್ನ ಸ್ನೇಹಿತರು ಮಹತ್ವವಾದ ವಿಷಯವನ್ನು ಎತ್ತಿದ್ದಾರೆ. ಈ ಸರ್ಕಾರದಲ್ಲಿ ಯಾವುದು ಸಾಧ್ಯವಿಲ್ಲ? ಯಾವುದನ್ನು ಬೇಕಾದರೂ ಮಾಡುತ್ತಾರೆ. ಅವರು ಹೈಕೋರ್ಟಿನಲ್ಲಿ ಹಾಕಿದ್ದ ರಿಟ್ ವಾಪಸು ತೆಗೆದುಕೊಂಡುದರಿಂದ ಆ ಕರಾರಿನಮೇಲೆ ಅವರಿಗೆ ಛೇರ್‌ಮನ್ ಕೆಲಸ ಕೊಟ್ಟಿದ್ದಾರೆ. ಆದುದರಿಂದ ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದಾದರೂ ಈ ಸರ್ಕಾರದಲ್ಲಿ ಯಾವುದು ಆಗುವುದಿಲ್ಲ ಎಂದು ಹೇಳಬೇಡಿ.

ಶ್ರೀ ಎಚ್. ಸಿದ್ಧವೀರಪ್ಪ.—ಆರ್ಡಿನೆನ್ಸ್ ಹೊರಡಿಸಿದಮೇಲೆ ಹೊಸದಾಗಿ ಕಮಿಟಿಗಳನ್ನು ಗುಲ್ಬರ್ಗ ಡಿವಿಜನ್‌ನಲ್ಲಿ ಮಾಡಿದ್ದಾರೆ. ಅವುಗಳಿಗೆ ಅಡ್ಮಿನಿಸ್ಟ್ರೇಟರನ್ನು ನೇಮಿಸಿಲ್ಲ. ಇದು ನಿಜವೇ ?

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಸದಸ್ಯರು ಹೇಳುವುದು ಸತ್ಯಕ್ಕೆ ದೂರವಾದ ಮಾತು.

ಶ್ರೀ ಕೆ. ಎಚ್. ಪಾಟೀಲ್.—ಇದಕ್ಕೆ ಸಂಬಂಧಪಟ್ಟಂತೆ ಮೂಲ ಮಸೂದೆಯನ್ನು ಪಾಸ್ ಮಾಡುವಾಗ ಸಭೆಗೆ ಒಂದು ಭರವಸೆಯನ್ನು ಕೊಟ್ಟರು ಎನ್ನುವ ಮಾತನ್ನು ಹೇಳಿದ್ದೇನೆ. ಅದೇ ರೀತಿ ವಿರೋಧ ಪಕ್ಷದ ಸದಸ್ಯರು ಸರ್ಕಾರದಿಂದ ನಾಮಕರಣ ಹೊಂದಿದ ಸದಸ್ಯರು ಇರಬಹುದು ಎನ್ನುವ ಮಾತನ್ನು ಘಂಟಾಘೋಷವಾಗಿ ಹೇಳಿದ್ದಾರೆ. ಅದನ್ನು ಘನ ಸರ್ಕಾರದವರು ಒಪ್ಪದೆ ಮೂಲವಾದ ಬದಲಾವಣೆಗಳನ್ನು ಮಾಡಿದ್ದಾರೆ. ಹಿಂದೆ ಮೂಲ ಮಸೂದೆ ಸಭೆಯ ಮುಂದೆ ಬಂದಾಗ ಮಾನ್ಯ ಸದಸ್ಯರಾದ ಕೆ. ಎಚ್. ರಂಗನಾಥ್ ಅವರು 'ಈ ರೀತಿ ಪರಿಸ್ಥಿತಿ ಇರುವಾಗ್ಗೆ ಸರ್ಕಾರ ನೇಮಿಸುವ ಸದಸ್ಯರು ಇರತಕ್ಕುದರ ಅವಶ್ಯಕತೆ ಇಲ್ಲ. ಹೊಸದಾಗಿ ಮಾರ್ಕೆಟ್ ಕಮಿಟಿ ಮಾಡುವುದಾದರೆ ಮೊದಲನೆ ಕಮಿಟಿ ಈ ರೀತಿ ಮಾಡತಕ್ಕಂಥದನ್ನು ಒಪ್ಪಿಕೊಳ್ಳಬಹುದು. ಮುಂದೆ ಅವಧಿ ಮುಗಿದನಂತರ ಪುನಃ ಕಾಲಾವಕಾಶ ಹೆಚ್ಚು ಮಾಡಬಹುದು' ಎಂದು ಇದರಲ್ಲಿದೆ, ಎಂದು ಹೇಳಿದ್ದಾರೆ. ಆ ಹೊತ್ತಿನ ದಿವಸ ಮನಸ್ಸಿನಲ್ಲಿದ್ದಂಥ ಕಲ್ಮಷ ಹೊರಗೆ ಹಾಕುವುದಕ್ಕೆ ಪ್ರಯತ್ನ ಮಾಡಿದರು. ಆಗ ಈ ಸಭೆಗೆ ಆಶ್ವಾಸನೆಯನ್ನು ಕೊಟ್ಟು ಆ ರೀತಿ ಮಾಡುವುದಿಲ್ಲ, ಆ ರೀತಿಯ ಅಭಿಪ್ರಾಯವಿಲ್ಲ, ಸರ್ಕಾರ ನಾಮಕರಣ ಮಾಡುವುದರ ವಿರೋಧವಾಗಿದೆ ಎಂದು ಹೇಳಿದಂಥ

ಸರ್ಕಾರ ಪುನಃ ಅದನ್ನು ಹೇರುವಂತೆ ಮಾಡುವುದು ಹೇಗೆ ಸಾಧುವಾದುದು ? ಮಂತ್ರಿಗಳಿಗಿಂತ ಮಾರ್ಕೆಟ್ ಕಮಿಟಿಗಳಲ್ಲಿ ಇರುವವರು ಯಾವ ರೀತಿಯಿಂದಲೂ ಕಡಮೆ ಇಲ್ಲ. ಹಾಗಿರುವಾಗ ಮಂತ್ರಿಗಳು ಎಲ್ಲ ಅಧಿಕಾರವನ್ನೂ ತಹಸೀಲ್ದಾರರ ಮುಖಾಂತರವಾಗಿ ಕೇಂದ್ರೀಕೃತ ಮಾಡುತ್ತಿದ್ದಾರೆ. ಇದಕ್ಕಿಂತ ಹೆಚ್ಚಿನ ನಾಚಿಕೆಗೇಡಿನ ವಿಷಯ ಮತ್ತೊಂದಿಲ್ಲ. ನಿಮ್ಮ ಸರ್ಕಾರದಲ್ಲಿ ಯಾವ ರೀತಿಯಾಗಿ ಆಡಳಿತ ನಡೆಯುತ್ತಿದೆ, ನೀವು ಕೊಟ್ಟಂಥ ಆಶ್ವಾಸನೆಯಂತೆ ನಡೆಯುತ್ತೀರಾ ಎನುವುದಕ್ಕೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಬೆಂಗಳೂರು ಕಾರ್ಪೊರೇಷನ್ ಸೂಪರ್‌ಸೀಡ್‌ಮಾಡಿ ನಿಮ್ಮ ಅಧಿಕಾರಕ್ಕೆ ತೆಗೆದುಕೊಂಡಾಗ ಚುನಾವಣೆಗಳನ್ನು ಮಾಡುತ್ತೇವೆಂದು ಹೇಳಿದಿರಿ. ಈತನಕ ಆಗಿಲ್ಲ. ಈಗ ಮಾನ್ಯ ಬಿ. ಎಂ. ಪಾಟೀಲರು ಮಂತ್ರಿಗಳಾಗಿ ಹೊಸದಾಗಿ ಬಂದಿದ್ದಾರೆ. ಅವರು ನೀವು ಮಾಡಿದಂಥ ತಪ್ಪನ್ನು ಸರಿಪಡಿಸಬೇಕಾಗಿದೆ. ಗದಗ್ ಮುನಿಸಿಪಾಲಿಟಿಯನ್ನು ಸೂಪರ್‌ಸೀಡ್ ಮಾಡುವುದಕ್ಕೆ ಪ್ರಯತ್ನ ಮಾಡಿದಿರಿ. ನಿಮ್ಮ ಮುಖಕ್ಕೆ ಹೈಕೋರ್ಟಿನವರು "ಛೀ" ಹಾಕಿದರು.

MR. CHAIRMAN.—The hon. Member while addressing the Chair said "ನಿಮ್ಮ"; The hon. Member may please note that he has to refer to the Government as Government and not as: "ನಿಮ್ಮ"; The hon. Member was too harsh in his words.

SRI K. H. PATIL.—Sir, I express my regret for what I stated in excitement. But I may tell you, Sir, that I did not mean the Chair. I know the Chair is kind enough and today I am proud to address the Hon. Speaker who is sitting in the Chair.

ನಾನು ತಮ್ಮ ಮುಖಾಂತರವಾಗಿ ಸರ್ಕಾರಕ್ಕೆ ನಮ್ರಪೂರ್ವಕವಾಗಿ ನಿವೇದನೆ ಮಾಡಿಕೊಳ್ಳುತ್ತೇನೆ. ಅವರಿಗೆ ಎಂಥ ಪದವನ್ನು ಉಪಯೋಗ ಮಾಡಬೇಕು ಎನ್ನುವುದು ನನ್ನ ಡಿಕ್ಷನರಿಯಲ್ಲಿ ಸಿಕ್ಕುವುದಿಲ್ಲ. ಕಡಮೆ ಬೈಗಳ ಯಾವುದು ಎಂದು ಹುಡುಕಿದರೂ ಸಿಕ್ಕುವುದಿಲ್ಲ. ಗದಗ್ ಮುನಿಸಿಪಾಲಿಟಿಯನ್ನು ತೆಗೆದುಕೊಂಡು ಚುನಾವಣೆ ಮಾಡುತ್ತೇವೆಂದು ಹೇಳಿದವರು ಎರಡೂವರೆ ವರ್ಷವಾದರೂ ಇನ್ನೂ ಚುನಾವಣೆಗಳನ್ನು ಮಾಡಿಲ್ಲ. ಇಂಥ ಸರ್ಕಾರ ಅಧಿಕಾರದಲ್ಲಿ ಇರುವುದಕ್ಕೆ ಲಾಯಕ್ ಆಗಿದೆಯೇ ಎಂದು ಕೇಳುತ್ತಿದ್ದೇನೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ಪ್ರತಿ ವರ್ಷ ನಡೆಯಬೇಕು ಎಂದು ಹೇಳುತ್ತೇವೆ. ನಿಮ್ಮ ಕೈಯಲ್ಲಿ ಅಧಿಕಾರವನ್ನು ತೆಗೆದುಕೊಂಡಿದ್ದರೂ ಇನ್ನೂ ಚುನಾವಣೆಗಳನ್ನು ಮಾಡಿಲ್ಲ. ಧಾರವಾಡ ಡಿಸ್ಟ್ರಿಕ್ಟ್ ಆಯಿಲ್ ಪ್ರೋಸೆಸಿಂಗ್ ಸೊಸೈಟಿಯನ್ನು ನಿಮ್ಮ ಅಧೀನಕ್ಕೆ ತೆಗೆದುಕೊಂಡು ಮೂರು ನಾಲ್ಕು ವರ್ಷವಾದರೂ ಇನ್ನೂ ಚುನಾವಣೆ ಮಾಡಿಲ್ಲ. ಚುನಾವಣೆಗಳನ್ನು ನಡೆಸುವುದಕ್ಕೆ ರಿಜಿಸ್ಟ್ರಾರ್ ಅವರು ಪರವಾನಗಿ ಕೊಡಬೇಕು, ಅದಕ್ಕೆ ಮಂತ್ರಿಗಳಾದ ನಾಡಗೌಡರು ಹೇಳಬೇಕು, ಅವರು ಹೇಳಬೇಕಾದರೆ ಜನನಾಯಕದಿಂದ ಆದೇಶ ಬರಬೇಕು. ಇನ್ನಾದರೂ ನಿಮ್ಮ ಮೂಲ ಸ್ವರೂಪವನ್ನು ಬದಲಾವಣೆ ಮಾಡಿಕೊಳ್ಳಿ ಎಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಈಗಿರುವ ಅನೇಕ ಕಲಮುಗಳನ್ನು ನೋಡಿದರೆ ನೇರವಾಗಿ ಎಲ್ಲಾ ವ್ಯವಹಾರಗಳ ಮೇಲೂ ನಿರ್ಬಂಧ ಬೀಳುತ್ತಿದೆ. ಪ್ರೆಸಿಡೆಂಟರ ಒಪ್ಪಿಗೆಯಿಲ್ಲದೆ ಮಾಡುವುದು ಯೋಗ್ಯವಲ್ಲ, ಘಟನೆಗೆ ವಿರೋಧಕ್ಕಾಗಿ ಕೆಲಸಮಾಡುವುದು ಸೂಕ್ತವಲ್ಲ, ಈಗಲಾದರೂ ವಿಚಾರಮಾಡಿ. ಇದಕ್ಕೆ ಕ್ರಮಬದ್ಧವಾಗಿ ಪ್ರೆಸಿಡೆಂಟರ ಸಮ್ಮತಿ ಬೇಕೇಬೇಕು. ರಾಜ್ಯಪಾಲರ ಒಪ್ಪಿಗೆ ಪಡೆದಿರುವುದು ಸಾಲದು.

ಸರಕಾರದಲ್ಲಿ ಇನ್ನೊಂದು ಅರಿಕೆ. ಈ ಬಿಲ್ಲನ್ನು ಸಭೆಯ ಮುಂದಿಡುವಾಗ ನಮ್ಮ ಸಭಾ ನಿಯಮಗಳಿಗನುಗುಣವಾಗಿ 7 ದಿವಸಗಳ ಮುಂಚೆ ಇಡಬೇಕಾಗಿತ್ತು. ಆದರೆ ಹಾಗೆ ಮಾಡುವುದಕ್ಕಾಗಿಲ್ಲ. ಶ್ರೀ ನಾಡಗೌಡರು ತರಾತುರಿಯಲ್ಲಿ ತಂದು ಅಂಗೀಕಾರ ಪಡೆಯುವುದು ಸರಿಯಲ್ಲ. ನಿಯಮಕ್ಕೆ ಮೀರಿದೆ. ಬಿಲ್ಲನ್ನು ಮಂಡಿಸುವಾಗ ಇಂದು ಮಂಡನೆಯಾಗಲಿ, ಪರಿಶೀಲನೆಗೆ ನಿಧಾನವಾಗಿ ತೆಗೆದುಕೊಳ್ಳೋಣ ಎಂದು ಶ್ರೀ ವೀರೇಂದ್ರಪಾಟೀಲರು ಹೇಳಿದರು. ಆಮೇಲೆ ದಿನಾಂಕ 18 ರಂದು ಮಂಡನೆಯಾಯಿತು. ನಿಯಮಬದ್ಧವಾಗಿ 25ರ ನಂತರ ಮಂಡನೆಯಾಗಬೇಕಾಗಿತ್ತು. ಹಾಗಾಗಿಲ್ಲ. ಇದಲ್ಲದೆ ಸರ್ಕಾರದವರ ಬುದ್ಧಿ ಎಷ್ಟು ವಿಶಾಲವಾಗಿದೆ ಎಂಬುದನ್ನು ನೋಡಬಹುದು. ಜನಾಭಿಪ್ರಾಯ ಪಡೆಯಲು ಈ ಬಿಲ್ಲನ್ನು ಕಳುಹಿಸಬೇಕೆಂದು ಶ್ರೀ ಸಿದ್ಧವೀರಪ್ಪನವರು ಹೇಳಿದರು, ಅದಕ್ಕೆ ಅವಕಾಶ ಕೊಡಲಿಲ್ಲ. ಜನರ ಮನ್ನಣೆ ದೊರೆಯಬೇಕಾದ್ದು ಅವಶ್ಯಕ. ಜನರು ತಮಗೆ

(SRI K. H. PATIL)

ತಾಸಿಲ್ದಾರರು ಬೇಕೆಂದರೆ ಕೊಡಬಹುದು. ಸರಕಾರದವರು ಮಾಡಿರುವುದು ತಪ್ಪು ಎಂದು ಜನರು ಹೇಳಿದರೆ ತಿದ್ದಿಕೊಳ್ಳಬೇಕು. ಶ್ರೀ ನಾಡಗೌಡರು ನೇರವಾಗಿ ಈ ಸಭೆಯ ಪ್ರತಿನಿಧಿಯಲ್ಲ. ಅವರು ಜನರ ಪ್ರತಿನಿಧಿಯಾಗಿದ್ದರೆ ಸ್ವಲ್ಪ ವಿಚಾರಮಾಡಬಹುದಾಗಿತ್ತು. ಅಪ್ರತ್ಯಕ್ಷವಾಗಿ ಆಯ್ಕೆಯಾಗಿರುವ ಶ್ರೀ ನಾಡಗೌಡರು ಜನಾಭಿಪ್ರಾಯವನ್ನು ಕಡೆಗಾಣಿಸುವುದು ಸರಿಯಲ್ಲ. ಈ ದೃಷ್ಟಿಯಿಂದಲಾದರೂ ಈ ದಿವಸ ವಿಚಾರಮಾಡಿ. ಶ್ರೀ ರಾಮಕೃಷ್ಣ ಹೆಗಡೆಯವರಂಥ ಅನುಭವಿಗಳ ಮಾತನ್ನು ಕೇಳಿ. ಒಂದೇ ದಿವಸದಲ್ಲಿ ಅವರು ಮೂಲ ಕಾಯಿದೆ ಬಂದಾಗ ಪಾಸ್ ಮಾಡಿಸಿಕೊಳ್ಳಬಹುದಾಗಿತ್ತು. ಆದರೆ ಅವರು ನಿಮ್ಮಂತೆ ವರ್ತಿಸಲಿಲ್ಲ. ಅವರು ಮಸೂದೆ ಮಂಡನೆಮಾಡಿದಾಗ ಅದು ಸೆಲೆಕ್ಟ್ ಕಮಿಟಿಗೆ ಹೋಗಬೇಕೆಂದು ಹೇಳಿದಾಗ ತಕ್ಷಣ ಒಪ್ಪಿಕೊಂಡಿದ್ದಾರೆ, ಅದು ಪ್ರೊಸೀಡಿಂಗ್ಸ್‌ನಲ್ಲಿದೆ. ಅಂಥ ಔದಾರ್ಯ ಶ್ರೀ ನಾಡಗೌಡರಿಗೂ ಬರಲಿ, ಬಂದು ಈ ಬಿಲ್ಲನ್ನು ಅವರು ಜನಾಭಿಪ್ರಾಯಕ್ಕೆ ಕಳಿಸಲಿ, ಜನಾಭಿಪ್ರಾಯಪಡೆಯಲಿ. ಹಾಗೆ ಮಾಡಿದರೆ ಜನರು ಅವರನ್ನು ಕೊಂಡಾಡುತ್ತಾರೆ. ಆ ದೃಷ್ಟಿಯಿಂದ ಕೇಳುತ್ತಿದ್ದೇನೆ. ಶ್ರೀ ಮಾಲಿ ಮರಿಯಪ್ಪನವರೂ ಕೂಡ ಹಿಂದೆ ಈ ಸಂಬಂಧವಾದ ಬಿಲ್ಲನ್ನು ಸಭೆಯ ಮುಂದಿಟ್ಟು ಅದಕ್ಕೆ ಮನ್ನಣೆ ಪಡೆಯುವಾಗ ಕೂಡ ಎಷ್ಟೋ ತಿಳಿವಳಿಕೆ ಹೇಳಿದ್ದಾರೆ, ಅದನ್ನು ಗಮನಿಸಬೇಕು. ಇಂದು ಶ್ರೀ ಮಾಲಿ ಮರಿಯಪ್ಪನವರಿಲ್ಲ, ಆದರೆ ಅವರು ಹೇಳಿರುವುದು ರಿಕಾರ್ಡಿನಲ್ಲಿದೆ. ನಾನು ಅದನ್ನು ಹುಡುಕಲು ಪ್ರಯತ್ನ ಮಾಡಿದೆ, ಸಿಕ್ಕಲಿಲ್ಲ. ಜನರ ಭಯ ದೂರ ಮಾಡಿ ವಕ್ಕಲಿಗರ ಹಿತರಕ್ಷಣೆ ಮಾಡುವದಾಗಿ ಅವರು ಹೇಳಿದ್ದಾರೆ. ವಕ್ಕಲಿಗರು ಒಬ್ಬರೂ ಇಲ್ಲದಿರುವ ಮಂಡಲಿಯನ್ನು ಇಂದು ರಚಿಸಿದ್ದಾರೆ. ವಕ್ಕಲಿಗರನ್ನು ದೂರ ಸರಿಸಿ ಹಣ ಇರುವವರನ್ನು ಸೇರಿಸಿಕೊಂಡಿದ್ದಾರೆ, ದುಡ್ಡೇ ದೊಡ್ಡಪ್ಪ ಎಂದು ಹೇಳುವಂತೆ ಮಾಡಿದ್ದಾರೆ. 15 ಮಂದಿ ಸದಸ್ಯರಿದ್ದರೆ ಭಿನ್ನಾಭಿಪ್ರಾಯ ಬರುವುದು ಎಂದು ಇಂದು ಒಬ್ಬನೇ ಆದ ಅಧಿಕಾರಿಯನ್ನು ನೇಮಕಮಾಡಿದ್ದಾರೆ, ಅವರು ಬರೆದುದೇ ಠರಾವು, ರೊಕ್ಕ ಹೊಡೆಯುವುದಕ್ಕೆ ಸಾಕಷ್ಟು ಅವಕಾಶವಿರುವುದು. ಇಂದು ಕಪಾಟು ಮುರಿದು ಸಾಮಾನುಗಳನ್ನು ಮನೆಗೆ ತೆಗೆದುಕೊಂಡುಹೋಗುತ್ತಿದ್ದಾರೆ. ಗದಗ್ ಕಮಿಟಿಯಲ್ಲೇ ಹೀಗೆ ಮಾಡಿದ್ದಾರೆ. ಕಪಾಟು ಮುರಿಯುವ ಕೆಲಸ ಆಡಳಿತಾಧಿಕಾರಿ ಮಾಡುತ್ತಿದ್ದಾರೆ, ಹೀಗಿರುವಾಗ ಸರ್ಕಾರೀ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿದ್ದಾರೆಯೇ ? ಎಷ್ಟು ದಿವಸ ಹೀಗೆ ಮಾಡಲು ಸಾಧ್ಯ ? ಸ್ಕೂಲು ಬೋರ್ಡ್ ಅಡ್ಮಿನಿಸ್ಟ್ರೇಟರ್ ಒಬ್ಬರು ಒಂದು ಹಳ್ಳಿಗೆ ಹೋದರು, ಮಾಸ್ಟರ್ ಬಂದು ಅವರ ಸಿಪಾಯಿಗೆ ಸಾಹೇಬರಿಗೆ ತಿನ್ನಲು ಏನಾಗಬೇಕು ಎಂದು ಕೇಳಿದಾಗ ನೌಕರನೊಬ್ಬ ಅವರೇನೂ ತಿನ್ನುವುದಿಲ್ಲ, ರೊಕ್ಕ ಮಾತ್ರ ತಿನ್ನುವರು ಎಂದು ಹೇಳಿದನಂತೆ. ಹೀಗೆ ಮಾರ್ಕೆಟ್ ಕಮಿಟಿಯಲ್ಲಿ ರೊಕ್ಕ ತಿನ್ನುವವರನ್ನು ನೇಮಕ ಮಾಡುವುದಕ್ಕೆ ಹೊರಟಿದ್ದೀರಿ. ಕರಪ್ಟ್ ಅಧಿಕಾರಿಗಳ ನೇಮಕವಾದರೆ ಜನರು ಸರಿಯಾದ ಆಡಳಿತವನ್ನು ಯಾವರೀತಿ ನಿರೀಕ್ಷಣೆ ಮಾಡಬಲ್ಲರು ? ಹಣದ ಅಪವ್ಯಯ, ಅಕ್ರಮ ಸಂಪಾದನೆ ಮುಂತಾದುವುಗಳಿಗೆ ಶ್ರೀ ನಾಡಗೌಡರು ಜವಾಬ್ದಾರರಾಗಬೇಕಾಗುತ್ತದೆ. ಆದುದರಿಂದ ಸಾರ್ವಜನಿಕ ಅಭಿಪ್ರಾಯ ಪಡೆದು ನಂತರ ಈ ಬಿಲ್ಲನ್ನು ಮಂಡನೆ ಮಾಡುವುದು ಸೂಕ್ತ. ಇದನ್ನು ಶ್ರೀ ನಾಡಗೌಡರೂ ವಿಚಾರಪರರಾದ ಮುಖ್ಯ ಮಂತ್ರಿಗಳೂ ಗಮನಿಸುವುದು ಸೂಕ್ತ.

6-00 P.M.

ಸ್ವಾಮಿ, ಹೈಕೋರ್ಟಿನ ಎದುರು ತಮ್ಮ ಕೇಸುಗಳು ಬಂದಿವೆ. ತಮ್ಮ ಕೇಸುಗಳನ್ನು ಮಂಡನೆ ಮಾಡಿದಾಗ ಅಡ್ವೋಕೇಟ್ ಜನರಲ್‌ರವರು ಸಮರ್ಪಕವಾದ ರೀತಿಯಲ್ಲಿ ಮಂಡನೆ ಮಾಡಿದರೂ ಕೂಡ ಅದರ ಬದಲಾವಣೆ ಮಾಡುವುದಕ್ಕೆ ಕಾರಣವೇನು ಎಂಬುದನ್ನು ಗವರ್ನರ್ ಎದುರು ಹೇಳಿದಿರಾ ? ಈ ಸಭೆಯ ಎದುರು ಹೇಳಿದಿರಾ ? ನಿಮ್ಮ ಅಭಿಪ್ರಾಯ ಏನಿತ್ತು ಎಂಬುದನ್ನು ಏಕೆ ಹೇಳಲಿಲ್ಲ. ತಪ್ಪು ಅಭಿಪ್ರಾಯ ಲಾ ಡಿಪಾರ್ಟ್‌ಮೆಂಟಿನವರು ಕೊಟ್ಟರೇ ಹೇಗೆ ? ಇದನ್ನೆಲ್ಲಾ ತಾವು ಹೇಳಲಿಲ್ಲ. ಇದೆಲ್ಲವನ್ನೂ ನೋಡಿದರೆ ನಿಮ್ಮ ವರ್ತನೆ ಯಾವ ದೃಷ್ಟಿಯಿಂದಲೂ ನನಗೆ ಸಮಂಜಸ ಅಂತ ಅನಿಸುವುದಿಲ್ಲ. ಸಮರ್ಪಕ ಅನ್ನಿಸದ್ದರಿಂದ ನಿಮಗೆ ಕಳಕಳಿಯಿಂದ ಬಿನ್ನಹ ಮಾಡುತ್ತೇನೆ, ಏನೆಂದರೆ ನಿಮ್ಮ ಅಧಿಕಾರಿಗಳನ್ನು ಅಲ್ಲಿ ಹಾಕಿ ಅವರ ಕೈಗೆ ಅಧಿಕಾರವನ್ನು ಕೊಡಬೇಡಿ. ಒಕ್ಕಲಿಗರ ಪ್ರತಿನಿಧಿಯಾಗಿ ಯಾರು ಬರುತ್ತಾರೆ ಅವರನ್ನು ನಾಮಕರಣ ಮಾಡಿದರೆ ಬಹಳ ಸಂತೋಷಪಡುತ್ತೇನೆ. ಅದನ್ನು ಬಿಟ್ಟು ಇಂತಹ ಅಧಿಕಾರಿಗಳನ್ನು ತೆಗೆದುಕೊಂಡು ತಾವು ಇದನ್ನು ನಡೆಸುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಜನತೆಯ ಅಭಿಪ್ರಾಯಕ್ಕೆ ಮನ್ನಣೆ ದೊರೆಯುವಂತೆ ಅವಕಾಶವಾಗಲು ನೇರವಾಗಿ ಚುನಾವಣೆ ಮಾಡಲಿಕ್ಕೆ ಜನತೆಗೆ ಅವಕಾಶ ಮಾಡಿಕೊಡುತ್ತೀರಿ ಎಂದು ಕೇಳಿಕೊಂಡು ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ

ಕೊಟ್ಟ ಅಧ್ಯಕ್ಷರಿಗೆ ನನ್ನ ಈ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕೊನೆಯದಾಗಿ ಮಂತ್ರಿಮಂಡಲದಲ್ಲಿರತಕ್ಕ ನಮ್ಮಂತೆ ಆಯ್ಕೆಯಾಗಿ, ಬಂದಿರತಕ್ಕ ನಮ್ಮ ಪ್ರತಿನಿಧಿಯ ಕೈಯಲ್ಲಿ ಇಂತಹ ನಮ್ಮ ಒಂದು ಕಾಯಿದೆ ಮಾಡಲಿಕ್ಕೆ ಅವಕಾಶವಿಲ್ಲದಂತಾಗಿದೆ ಶ್ರೀಮಾನ್ ನಾಡಗೌಡರು ನಮ್ಮ ಸ್ನೇಹಿತರು, ಅವರೇ ಈ ಬಗ್ಗೆ ಸೂಕ್ತವಾದ ರೀತಿಯಲ್ಲಿ ಒತ್ತಾಯಮಾಡಿ ತಮ್ಮ ಮಂತ್ರಿ ಮಂಡಲದ ಸದಸ್ಯರಿಂದ ಯೋಗ್ಯ ನಿರ್ಣಯ ಮಾಡಿಸಲಿ ಎಂದು ಹೇಳಿ ಈ ಬಿಲ್ಲನ್ನು ಬಲವಾಗಿ ವಿರೋಧಿಸುತ್ತ ನನ್ನ ಮಾತನ್ನು ಮುಗಿಸುತ್ತೇನೆ.

[MR. SPEAKER in the Chair.]

ಶ್ರೀ ಸದಾಶಿವಪ್ಪ ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ, ಇಂದಿನ ದಿವಸ ಈ ತಿದ್ದುಪಡಿ ಮಸೂದೆಯನ್ನು ವಿರೋಧಿಸುತ್ತಾ ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ ಸಚಿವರಿಗೆ ಒಂದೆರಡು ಸಲಹೆಯನ್ನು ಕೊಡಬಯಸುತ್ತೇನೆ. ನಾನು ಹಿಂದೆ ರಾಯಚೂರು ರೆಗ್ಯುಲೇಟೆಡ್ ಮಾರ್ಕೆಟಿಂಗ್ ಕಮಿಟಿಯಲ್ಲಿ 4 ವರ್ಷದಿಂದ ರೈತರಪರವಾಗಿ ಸದಸ್ಯನಾಗಿದ್ದುಕೊಂಡು ಯಾವ ರೀತಿಯಿಂದ ಅಲ್ಲಿ ನಡೆಯುತ್ತಾ ಇದೆ ಅನ್ಯಾಯ ಏನಾಗುತ್ತಿದೆ ಎಂಬುದು ನನ್ನ ಅನುಭವಕ್ಕೆ ಬಂದಿದೆ. ನನಗೆ ತಿಳಿದ ಮಟ್ಟಿಗೆ ಅಡ್ಮಿನ್‌ಸ್ಟ್ರೇಟರನ್ನು ನೇಮಕ ಮಾಡುವುದರಿಂದ ಹೆಚ್ಚು ಅನ್ಯಾಯ ಆಗುವುದು ಎಂದರೆ ರೈತನ ಕೊಲೆಯಾಗುತ್ತದೆ ಎಂದು ಹೇಳುತ್ತೇನೆ. ಏಕೆಂದರೆ ರೈತನ ಸುಖವಾಗಲಿ, ದುಃಖವಾಗಲಿ, ಅದನ್ನು ತಿಳಿದುಕೊಳ್ಳಬೇಕೆಂದರೆ ರೈತವರ್ಗದ ಪ್ರತಿನಿಧಿಗೆ ಗೊತ್ತೇ ಹೊರತಾಗಿ ಈ ಅಡ್ಮಿನ್‌ಸ್ಟ್ರೇಟರ್‌ಗೆ ಗೊತ್ತಾಗಲಿಕ್ಕೆ ಸಾಧ್ಯವಿಲ್ಲ. ಉದಾಹರಣಾರ್ಥವಾಗಿ ರಾಯಚೂರು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯಲ್ಲಿ ನೂರಕ್ಕೆ ಎರಡು ರೂಪಾಯಿ ಕಮಿಷನ್‌ನ್ನು ಅಲ್ಲಿರತಕ್ಕ ಮಾರ್ಕೆಟಿಂಗ್ ಸೂಪರಿಂಟೆಂಡೆಂಟ್ ಇಲ್ಲೀಗಲ್ಲಾಗಿ ವ್ಯಾಪಾರಸ್ಥರು ರೈತರಿಂದ ಪಡೆದುಕೊಳ್ಳಲು ಅನುಮತಿ ಕೊಟ್ಟಿದ್ದಾರೆ. ಅದೇ ರೀತಿ ನಮ್ಮ ರೈತವರ್ಗಕ್ಕೆ ಈ ಆಕ್ಟ್‌ನಲ್ಲಿರತಕ್ಕ ಒಂದೂವರೆ ರೂಪಾಯಿಗೆ ಬದಲಾಗಿ 2 ರೂಪಾಯಿ ಕೊಡಬೇಕೆಂದು ಇಲೀಗಲ್‌ಆಗಿ ನನ್ನ ಏರಿಯಾದಲ್ಲಿ ವ್ಯಾಪಾರಸ್ಥರು ವಸೂಲು ಮಾಡಲಿಕ್ಕೆ ಹತ್ತಿದ್ದಾರೆ. ಇದು ಅನ್ಯಾಯ ಎಂದು ನಾವು ಪ್ರತಿಭಟಿಸಿದೆವು, ಸರ್ಕಾರಕ್ಕೆ ಅದರ ಒಂದು ನಿರ್ಣಯ ಮಾಡಿ ಕಳುಹಿಸಿಕೊಟ್ಟೆವು. ಆದರೆ ಆ ನಿರ್ಣಯದಿಂದ ಯಾವ ರೀತಿಯಿಂದಲೂ ಉಪಯೋಗವಾಗಲಿಲ್ಲ. ಒಂದು ಉದಾಹರಣೆ ಹೇಳುತ್ತೇನೆ, ಮಾನ್ಯ ವೀರೇಂದ್ರ ಪಾಟೀಲ್‌ರವರು ಹಿಂದಿನ ಪಿ.ಡಬ್ಲ್ಯೂ.ಡಿ. ಮಿನಿಸ್ಟರಾಗಿದ್ದಾಗ ರಾಯಚೂರಿಗೆ ಬಂದ ಸಂದರ್ಭದಲ್ಲಿ ಎರಡು ರೂಪಾಯಿ ಕಮಿಷನ್ ಹತ್ತು ವರ್ಷ ಕಾಲ ಇರುವ ಹಾಗೆ ಮಾಡಿದರೆ ಒಂದು ಲಕ್ಷ ರೂಪಾಯಿ ಡಿಫೆನ್ಸ್ ಫಂಡಿಗೆ ಕೊಡುತ್ತೇವೆ ಅಂತ ವ್ಯಾಪಾರಸ್ಥರು ಅಂದದ್ದನ್ನು ಒಪ್ಪಿಕೊಂಡು ಬಂದರು. ರೈತನ ಪ್ರತಿನಿಧಿ ಇದ್ದರೆ ಮಾತ್ರ ರೈತನ ಸುಖ ದುಃಖ ಕೇಳಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರಿಗೆ ಈಗಾಗಲೇ ಹಿಂದೆ ಪ್ರಚುರ ಮಾಡಿದ್ದಾರೆ ಮಾನ್ಯ ಮುಖ್ಯ ಮಂತ್ರಿಗಳು ಆ ರೀತಿ ಆಶ್ವಾಸನೆ ಕೊಟ್ಟಿಲ್ಲ ಎಂದು. ಅದನ್ನು ರೆಫ್ಯೂಸ್ ಮಾಡಿದ್ದಾರೆ.

ಶ್ರೀ ಎಂ. ನಾಗಪ್ಪ.—ರೆಫ್ಯೂಸ್ ಮಾಡಿದ್ದಾರೆ ಎಂದರೆ ಒಂದು ಲಕ್ಷ ರೂಪಾಯಿ ನ್ಯಾಷನಲ್ ಡಿಫೆನ್ಸ್ ಫಂಡಿಗೆ ಕೊಡಿ ಅಂತ ಹೇಳಿದ್ದನ್ನು ರೆಫ್ಯೂಸ್ ಮಾಡುತ್ತೀರಾ? ಎರಡನೆಯದು ಶೇಕಡ ಎರಡರಂತೆ ಫೀಜು 31ನೇ ಮಾರ್ಚಿ 1969ರ ವರೆಗೂ ಜಾರಿಯಲ್ಲಿದ್ದು ವಸೂಲಾಗುತ್ತಿತ್ತು ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ? ಬಂದಿದ್ದರೆ ಯಾವ ಕ್ರಮ ನೀವು ತೆಗೆದುಕೊಂಡಿದ್ದೀರಿ?

ಶ್ರೀ ಸದಾಶಿವಪ್ಪ ಪಾಟೀಲ್.—ಇದೇ ಸಭೆಯಲ್ಲಿ ಅದನ್ನು ಮಾನ್ಯ ಮಂತ್ರಿಗಳು ಅಲ್ಲಗಳೆದರು. ಆ ವಿಚಾರವಾಗಿ ನಾನು ಇದೇ ಮನೆಯಲ್ಲಿ 1965 ರಲ್ಲಿ ಪ್ರಸ್ತಾಪಮಾಡಿದ್ದೇನೆ. ಆ ದಿವಸ ಇಲ್ಲಿ ನಡೆದ ಚರ್ಚೆಯಲ್ಲಿ ವರ್ತಕರು ಪಡೆಯುತ್ತಿದ್ದ ಒಂದೂವರೆ ರೂಪಾಯಿಗಳ ಕಮಿಷನ್ ಏನಿತ್ತು ಅದನ್ನು ಎರಡು ರೂಪಾಯಿಗಳಿಗೆ ಹೆಚ್ಚುಮಾಡಬಾರದೆಂದು ಇಲ್ಲಿ ನಿರ್ಣಯ ಮಾಡಿದೆವು. ಅದರೇನಾಯಿತು! ಯಾರಿಗೂ ತಿಳಿಯದಂತೆ ಆ ವರ್ತಕರು 1965ರಿಂದ 69ರ ವರೆಗೆ 10-12 ಲಕ್ಷ ರೂಪಾಯಿಗಳನ್ನು ಎತ್ತಿಕೊಂಡು ಇಟ್ಟಿದ್ದಾರೆ. ಆ ಹಣ ಅವರ ಕಡೆ ಇದೆ. ಅದನ್ನು ಈಗಲಾದರೂ ಅವರಿಂದ ವಸೂಲ್ಮಾಡಿ ಯಾವುದಾದರೂ ಒಂದು ಇಂಜಿನಿಯರಿಂಗ್ ಕಾಲೇಜ್ ರಾಯಚೂರು, ಇತ್ಯಾದಿ ಕಾರ್ಯಕ್ಕೆ ಆ ಹಣವನ್ನು ವಿನಿಯೋಗಿಸಬೇಕೆಂದು ಹೇಳುತ್ತೇನೆ. ನಾನು ಕಳೆದ ನಾಲ್ಕು ವರ್ಷಗಳಿಂದಲೂ ಅಲ್ಲಿ ಮಾರ್ಕೆಟ್ ಕಮಿಟಿಯ ಸದಸ್ಯನಾಗಿದ್ದೆ. ಅಲ್ಲಿ ಏನೇನು ನಡೆಯುತ್ತಿದೆ ಎಂಬುದೆಲ್ಲಾ ನನಗೆ ಚೆನ್ನಾಗಿ ಮನದಟ್ಟಾಗಿದೆ. ಆ ನಮ್ಮ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಯಾರಾದರೊಬ್ಬ ರೈತ ತಾನು ಬೆಳೆದ ದವಸವನ್ನು ತಂದರೆ ಅಲ್ಲಿನ ವರ್ತಕರು ಸ್ಯಾಂಪಲ್ ಎಂತ ತಮಗೆ ಇಷ್ಟಬಂದಷ್ಟು ಸಾಮಾನುಗಳನ್ನು ಎತ್ತಿಕೊಂಡುಹೋದರೆ ಪುನಃ ಅದನ್ನು ರೈತನಿಗೆ

(ಶ್ರೀ ಸದಾಶಿವಪ್ಪ ಪಾಟೀಲ್)

ವಾಪಸ್ಸು ಕೊಡುವಂತೆಯೇ ಇಲ್ಲ. ಹೀಗೆ ಅಲ್ಲಿ ಎಷ್ಟೋ ಅನ್ಯಾಯಗಳು ನಡೆಯುತ್ತಿದ್ದವು. ಅದಕ್ಕಾಗಿ ಬೇಕಾದಷ್ಟು ಹೋರಾಟ ಮಾಡಿ ಅದನ್ನು ತಡೆಗಟ್ಟಿದ್ದಾಯಿತು. ಈಗ ಅದು ನಡೆಯುತ್ತಿಲ್ಲ. ಅಲ್ಲಿ ನಡೆಯುತ್ತಿರುವ ತೂಕದ ವಿಚಾರಕ್ಕೆ ಬಂದರೆ ಅದನ್ನು ಹೇಳತೀರದಾಗಿದೆ. ರೈತನು ತನ್ನ ಮಾಲನ್ನು ಅಂಗಡಿಯಲ್ಲಿ ದಾಸ್ತಾನಿಟ್ಟರೆ ಅದಕ್ಕೆ ವರ್ತಕನು ರಶೀದಿಯನ್ನು ಕೊಡುವುದಿಲ್ಲ. ಅದನ್ನು ತೂಕ ಸಹಾ ಮಾಡುವುದಿಲ್ಲ. ಇಷ್ಟೊಂದು ಅಕ್ರಮ ನಡೆವಳಿಕೆ ಇರುವ ಮಾರ್ಕೆಟ್ ಕಮಿಟಿ ರಾಜ್ಯದಲ್ಲಿ ಮತ್ತೊಂದಿರಲಾರದು. ನಮ್ಮಲ್ಲಿರತಕ್ಕ ಒಬ್ಬ ಸಣ್ಣ ನೌಕರನಿಂದ ಹಿಡಿದು ದೊಡ್ಡ ನೌಕರನವರೆಗೂ ಯಾರನ್ನಾದರೂ ವರ್ಗಮಾಡಬೇಕಾಗಿದ್ದರೆ ಅದಕ್ಕೆ ನಮ್ಮ ನಾಯಕರ ಅಪ್ಪಣೆಯಿಲ್ಲದೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ನಮ್ಮ ಗುಲ್ಬರ್ಗ ಡಿವಿಜನ್ನಿನ ಕಾನೂನೇ ಬೇರೆ, ಅಲ್ಲಿಯ ಲೆಕ್ಕಾಚಾರವೇ ಬೇರೆ. ಬೇರೆ ಈ ಕಮಿಟಿಗಳು ಚೆನ್ನಾಗಿ ಕೆಲಸಮಾಡುತ್ತಿದ್ದರೆ ಬಹಳ ಸಂತೋಷ. ಶ್ರೀ ಕೆ. ಎಚ್. ಪಾಟೀಲರು ಈ ಮಸೂದೆಯಿಂದ ರೈತರ ಕೊಲೆಯಾಗುತ್ತದೆ ಇದನ್ನು ತರಬಾರದೆಂದು ಹೇಳಿದ್ದೂ ಕೂಡ ಸರ್ಕಾರದವರಿಗೆ ಹಿಡಿಸಿದಂತೆ ಕಾಣಲಿಲ್ಲ. ಇದು ರೈತನನ್ನು ಕೊಲೆಮಾಡತಕ್ಕ ಶಾಸನವಾದ್ದರಿಂದ ನಾನು ಇದನ್ನು ವಿರೋಧಿಸುತ್ತೇನೆ.

Sri H. SIDDAVEERAPPA (Harihar).—Sir, I oppose this measure. I was wondering whether it serves any purpose in participating in this debate because I know whatever we say the other side is not listening to it with an open mind; they are not receptive to any criticisms that may be offered from this side and they seem to feel as the proverb says "*Hum kare so Kaida*" *i.e.*, whatever we do is the law; there is none to question. I feel so intensely about this measure for the reason that I was one of those who was very much interested. When I read that a Bill of this nature was passed in the Assembly in the year 1966—I was not a member then. I thought this was the only measure of a beneficial nature involving the multitudes of this country for their benefits this measure was brought. I knew that but for the incessent efforts of the well-wishers like Sri M. R. Patil and others this Bill could not have been brought on the statute. I also know that even at the late stage when some members felt that this was a measure which would try to put the nose ring on unscrupulous merchants and they tried to block the way. That was their intention. But the credit must also go to the then Minister Sri Puttaswamy who saw to it that the Bill was successfully piloted and it became law. What I said is fully substantiated by the subsequent events. As we know this measure gestated in the year 1963 and it came in the form of a Bill in the year 1966 and it was passed in the same year. But when it became law the Government of the day was not very enthusiastic in implementing it because there is a clause which states:

> "It shall come into force on such date as the State Government may, by notification, appoint."

The Government took nearly two years to notify this Act to become law. The Bill received the assent of the President on 19th August 1966 and the notification enforcing this Act was issued by the Government on 3rd May 1968. Then what happened subsequently after it became law is that immediately the vested interests got wild because they thought they were quite safe in the hands of this Government and

as soon as this Act was implemented some traders went to the High Court challenging the validity of this Act. There were as many as about 180 writ petitions in the High Court. The High Court then examined the provisions of this Act. I have read from a to z, line to line, the judgement of the High Court. Under section 154 (*c*) of the Act it is stated.

> "all market committees constituted, members of such committees appointed or elected and Chairmen and Vice-Chairmen, elected or appointed under the repealed enactments shall exercise the powers conferred, perform the functions, and be subject to the liabilities imposed by the provisions of this Act and the rules made thereunder on market committees members of such committees, Chairmen and Vice Chairmen, respectively, until the market committees are constituted under the provisions of this Act, and on the date of the first meeting of any market committee after such constitution under this Act, the market committee constituted under the repealed enactments shall be deemed to have been dissolved."

What the High Court has said is this. The High Court has said these Committees are not illegal Committees that were in existance prior to the passing of this Act. What they said was if you really want to have the Committees constituted under the new Act under Section 11, any Committee that shall be constituted must be preceded by a nominated Committee under Section 10. It has been very clear. There cannot be any dispute about that although the stand taken by the Advocate General is, that the element of nomination may not be necessary. The literal interpretation of the Section is that it was not intended by the framers of the Act to eliminate nomination. We cannot take it for granted that simply because that certain words are used there, we connot take it in the sense it has been put forward by the Advocate General. The Section 10 is followed by Section 11. The correct way of interpreting the Section 10 read with Section 11, there must be a nominated Committee. In the meanwhile the decision of tne High Court was published. Somehow or the other by hook or crook, they wanted to implement this after capturing the Taluk Boards. How the Taluk Boards came into being is known to all. They wanted to have all these Committees under their control after the general elections. We scented it. I moved a call attention notice on 3rd April 1969. They wanted to have their own Chairman and Vice-Chairmen and not anybody else. Even under Section 10, the main idea is that only an agriculturist should be Chairman and Vice-Chairman and the members should be the growers. They somehow wanted their own men. We got scent of it. We therefore, tabled a call attention notice. We raised a debate on that point and that has been reported in our

(SRI H. SIDDAVEERAPPA)

proccedings in Volume 19 No. IV. I want to read one or two sentences. It reads like this:

"As soon as the present session of the Assembly is over, the Government wants to abolish all the Market Committees that are already in existance by one stroke of the pen. They have asked the Deputy Commissioners to get ready for elections."

Our Hon. Deputy Minister did not give any hint but he stated that Government do not want any undue control over the constitution and functioning of the Market Committees. But they are anxious to do what is just and proper in the circumstances arising out of the High Court Judgement. The intention of the Government to do what is just and what is reasonable under the circumstances of the case; but I thought they would not take re-course to this. But what is the result? They promise something and do something also which I cannot reconcile myself. The devil Administrator is still to be continued. Under what provision this devil should be continued? Is that in consonance with the principles of the Act? If you bring an amendment, you must have some circumspection.

SRI P. M. NADGOUDA.—Nearly about 20 to 30 Committees are already managed by Deputy Commissioners and the Chairmen alone. There are no Committees dominated by Government. When the decision was taken that the Deputy Commissioners should manage the Committees, nobody raised any objection.

SRI H. SIDDAVEERAPPA.—This speaks volumes of inefficiency. Acts were passed 3 years ago. If you really intended to do justice, the Government would have got the elections conducted within the stipulated period. May I bring to your kind notice that there are Committees which were elected one year ago and fought like general elections and the elections had taken place only after the new rules and the bye-laws are framed? Is the Government aware of it? It has happened not only in Gulbarga as suggested by one Hon. Member here but in some other places also. I understand there are certain committees which are not governed by the Administrators and these Committees have been constituted after ordinances are issued. I cannot lay my hand in regard to the Committee that has been constituted after the ordinance is issued.

SRI P. M. NADGOUDA.—No such Committee has been constituted.

6-30 P.M.

SRI M. NAGAPPA.—For the informations of the House, I may say that still there is a committee working constituted before the promulgation of the ordinance and that committee is still working in Raichur.

Mr. SPEAKER.—The Minister will reply to the debate at the end. He need not classify by anything at this stage.

Sri H. SIDDAVEERAPPA.—This amounts to gross discrimination. This means a violation of the power vested in them. How can they say that the ordinance will have to be replaced by this Bill and how did the Minister think of having an administrator when there can be a committee at Raichur ?

Sri M. NAGAPPA.—I can give out the name of the Chairman. His name is Pumpa Reddi. This committee has been constituted under section 10 of the Act.

Sri H. SIDDAVEERAPPA.—This is a wonderful idea which has been projected by the Minister of having administrators. If the Minister had given us that information, we would have said, for heaven's sake do not have the administrator. You have your own man to conduct the affairs. Instead let us have even a nominated committee of non-officials. We will settle our accounts with them later on. But what can we do with the administrators ? They are fixed officers. I do not say they are all bad. I do not say that all of them are good. As we know these officers are saddled with a number of other administrative work. Take for instance the Deputy Commissioner Chitradurga. You make him the Chairman of the Marketing Committee at Chitradurg. Do you mean to say that he will be in a position to attend to this work even for one hour a day ? I know that the Deputy Commissioner has to attend to 25 or 30 committee meetings every week. He has to be compulsorily out of headquarters for nearly 20 days in a month. He has to discharge administrative work and what with this sputnik Ministers visiting every day, demanding his time, now-a-days it is very difficult for him to manage unless he has a duplicate. What will happen is, the Deputy Commissioner will often try to act as an absentee land-lord managing his lands in the village. Every day the problems arise for consideration. In a market like Davanagere, where the turn-over is to the tune of 5 crores annually, there will be proble msevery day. Every day, there will be dispute between the seller and the buyer. They want spot decisions. They want decisions to be given then and there. Otherwise, articles worth lakhs and lakhs of rupees will accummulate and there will be a glut. How can any body manage the market committee unless he is a full time officer ? You may say that in all these matters we want to have full time administrators. That is a different matter. Then there are other class of officers who are corrupt to the crore, who are the very embodiment of corruption. It is a honey-moon for them, if you keep this regulated market under their control, where they can make anything they like. Even some unscripulous non-officials were doing that in the capacity of chairman. Not all. But here, in this case, what will happen ? There is nobody to question him. Supposing the Secretary, and the Chairman collude, woe be to the growers who go there. Merchants will not suffer. They will make have and they will try to get as much

(SRI H. SIDDAVEERAPPA)

benefit out of the situation, because after all this Government has come to their rescue. What given by the right hand has been taken away by the left-hand. There are some officers who are likely to become administrators, who are in the habit of taking even Rs. 5, even Rs. 2. I am sure such officers will do the r hell before their period is over, given a favourable opportunity. I can give you one instance from my own constituency. The Hon. Revenue Minister is here. How many complaints he is having against the Thasildar of Harihar Taluk ? He is now the Chairman of the Municipal Council, from December 1968 although electlon took place. No Municipal Counciller is able to meet him because there are more than half-a-dozen writ petitions in the High Court. Signed petitions are given to the Government, in the matter of collection of levy, in the matter of municipal administration, and the highest officers have given their reports about them. Today, he is made an administrator of the regulated market of that place. How can our agriculturists bear this agony ? What is more, already after this man has become the administrator, he has done one very beneficial act to the growers ! There was a dispute with regard to the establishment of the market yard. There is a rich mill-owner in that place. This Thahsildar is hand in glove with that mill-owner. That has been stated in so many complaints. With a view to help that mill-owner, he wants this yard to be located very near and close to the mill, so that he may do whatever he likes; although all the merchants have deposited a sum of Rs. 60,000 for acquiring a particular land and although the owner of the land was willing to give that land for the regulated market, they did not want that land, but they wanted to acquire a particular piece of irrigated land with a view to help the mill-owner. This man has already sent his recommendation. When such things happen, can we tolerate it ? Why not you abolish the regulated markets and leave the agriculturists to the mercy of the merchants ? This arrangement was not there prior to 1940. If you cannot manage, why don't you think of having regulated markets for Administrators and make them all in all ? What is more, these Thasildars and others are bound to receive instructions or orders from above. They will take various considerations into account. They may say : Merchant 'A' is opposed to the Congress Party. Take action against him ; Cancel his licence ; do this, do that. Instructions are bound to flow either from the District Headquarters or from Bangalore. They are there only for name sake. The real administrators will be functioning from Bangalore—our Hon. Minister Sri P. M. Nada Gouda, who will issue *firmans* from here. This is how the administration is going to be spoiled. If there was no regulated market, then they would have managed somehow. Now our agriculturists are not so dull. They are intelligent enough. They know how to safeguard their interest. But what can they do ? Here is a man who is not easily amenable. The Villager will take his produce to the market and wait there for ten days and what is he to do ? If at least the Market committee was there, h

would have secured a fair deal because even now there are so many sincere and well-meaning secretaries. Such people are not tolerated. There are attempts to beat them ; there are attempts to assault them ; even criminal complaints have been lodged against them. Honest people are harassed ; dishonest people may go merry. And the entire administration will be used to break the backbone of the grower. The man who cannot defend himself will be in a woeful position. I feel this clash could have been avoided if my friend had taken pains to see as to how to get out of it. No doubt, the High Court stated that the first Committee must be nominated. If you had consulted us, we would have shown you the way. Why should you consult us ? You do what strikes you and your ruling party. On the last day your party took decision to nominate so many. Subsequently you changed your mind for reasons best known to yourself. Please bring that file and show it to the Speaker. Let him see what steps you had taken to nominate members to these committees. You could have avoided this intolerable position of having administrators in our State if only you had carefully studied Section 152. Section 152 reads as follows :

"Orders for bringing this Act into force :—

(1) Nowithstanding anything contained in this Act or in any other law for the time bring in force, the State Government may by order published in the official Gazette make such provisions as appears to it to be necessary or expedient—

(*a*) for bringing the provisions of this Act into effective operation ;

(*b*) for removing difficulties arising in connection with the transition to the provisions of this Act or giving effect to the provisions of this Act ;

(*c*) so far as it appears necessary or expedient in connection with any of the matters aforesaid for varying the powers or jurisdiction of any court or authority and empowering new courts or other authorities to exercise such jurisdiction as may be specified in such order.

(2) The provision made by any order under sub-section (1) shall, subject to the provisions of section 149, have effect as if enacted in this Act, and any such order may be made so as to be retrospective to any date not earlier than the date of commencement of this Act :

Provided that no person shall be deemed to be guilty of an offence by reason of so much of any such order as makes any provision thereof retrospective to any date before the making thereof."

My main contention is this : If the Government had consulted their Law Department to find out whether there was any provision under the Act wherefrom they could escape from unenviable position, surely

(SRI H. SIDDAVEERAPPA)

some way could have been found out under Section 152 (b). It was not the intention of the framers of the Act when the Act was passed in the year 1966 that the element of nomination must be introduced. Their main contention was that these committees will serve the purpose of the new committees constituted under Section 11. Perhaps their intention was that when they enacted Section 10 to have nominated committees in cases where new regulated market committees are formed. Where there is no regulated market committee, a committee comes into being. When there is need to regulate the marketing activities in an area, the first market committee is constituted by the Government. That is the intention; I have no doubt about it. But somehow because of the loose wording in this Section by the framers of the Act, the High Court came so a conclusion, about which we cannot quarrel with the High Court. The High Court tried to interpret the letter of law as it is there and as it appears to the Judges; they have taken the literal meaning; they need not go beyond that. Probably if the Government had gone to the Supreme Court in the interests of the growers, a different verdict might have been possible. Never mind; the Government have not gone in appeal. But the mind of the Government is made abundantly clear, unequivocal and specific from the arguments advanced by the learned Advocate-General who has taken a very sane view when he stated: Well, let this committee continue. When the Advocate-General argues, he only interprets the mind of the Government and tells what the Government thinks about it.

SRI P. M. NADGOUDA.—That is not accepted by the High Court.

SRI H. SIDDAVEERAPPA.—That is true. I myself stated that; I have not minced words. After the High Court decision, you could have added an enabling clause under Section 152. You could have validated these committees until the new election takes place. So far as this position is concerned, I have no doubt in my mind. The introduction of this element of appointment of arbitrators is wholly alien to the main Act, because even the High Court has made it very clear in their very lengthy judgement. We will have to think whether this was matter which needed an extraordinary remedy like an Ordinance. The Government knew that the Legislature would meet in the month of August because by that time the calendar of events for the election of the President had already been published. So the Government knew that this Assembly was bound to meet somewhere in the month of August; 21st August was the last date by which this House should have met. When the Government knew that, where was the need for them to issue this Ordinance. That is an abuse of power. I need not interpret the promulgation because you yourself stated that it is not for us to interpret. It is none of our business; it is the business of the Judiciary. I

am sure the Government and the framers will get rebuffs at the hands of the judiciary and the way in which they have issued this extraordinary Ordinance in circumstances which did not permit them to issue Ordinance. This is a matter affecting trade—both intra-State and inter-State, under so many clauses of the Constitution. When the State Government knew all that, still they come and say: What does it matter ? Supposing the High Court were to strike it down as ultra vires of the Constitution, they are not the losers. They will come again to us and say: What to do, the High Court has done this. The again they will want time to help their own men. As I have already said, this is a Government which is out to safeguard the interests of people who are traders. They have no bias in favour of the agriculturists. The longer the period for which this enactment is held up, the better for their tribe. That is how they seem to feel. Otherwise they could have had recourse to some other provisons. I need not enter into elaborate arguments with regard to Article 2ı3 and 304. But, suffice it to say at this stagethat very extraordinary power of issuing an ordinance has been used. t is something like using a big gun to beat a mouse, not knowing what incalculable harm they are doing. In the year 1965 in our State an ordinance was issued when there was war between Pakistan and India. The administrators then were really circumspective; they were wise. The elections to local bodies were approaching near. What they said was that until the emergency was over no election would be held and they also said that the existing committees would continue until the elections take place. By one stroke of pen our Taluk Boards and Village Panchayats continued for eight years without an election. Then when the Repealing Act was brought they said that one year from that day election would be held to all these bodies. A time limit was fixed. Where have you provided for such a thing in this Bill ? You said that steps may be taken. I know the steps you will be taking. It will be a tortoise step. At least now if you openly make a statement on the floor of the House that within six months you are going to have elections I will withdraw all my remarks I have passed against you. Are you prepared to make a statement that within six months or nine months or one year the elections shall take place ?

SRI P. M. NADGOUDA.—When a senior hon. Member makes a statement and, when the Government assures him that elections will be conducted within one year he must withdraw all remarks.

SRI H. SIDDAVEERAPPA.—What will happen if you do not hold elections ? Is this Government going to resign ?

SRI P. M. NADGOUDA.—We cannot doit. We will have to come to the Assembly. The hon. Senior Member cannot raise this question.

SRI H. SIDDAVEERAPPA.—I cannot understand this attitude. These people are incapable of holding elections for the reason that although two years have elapsed, there are no voters' list, no steps have been taken to hold elections. These administrators will not be in a

(SRI H. SIDDAVEERAPPA)

position to shoulder the responsibility and I learn elections will cost 17 lakhs of rupees. Preparation of the voters list, scrutiny and various other things will cost a huge sum. We know that election nowadays even for the village panchayats is not easy. He says that within one year, he will do. I doubt it.

Sri K. PUTTASWAMY.—Let the hon. Member if he is very earnest about it, move a suitable amendment. Government will give serious consideration for the suggestion he makes.

Sri H. SIDDAVEERAPPA.—I have moved an amendment. It is already there.

Sri P. M. NAD GOUDA.—My assurance stands. It should not be one way traffic. I will give the assurance and he must withdraw his remarks.

Mr. SPEAKER.—The assurance of the Government cannot be conditional.

Sri P. M. NADGOUDA.—My submission is when a senior and esteemed colleague makes an unequivocal statement, the Government accepts it unequivocally. He must abide by it.

Sri K. PUTTASWAMY.—We have made clear that the Government is dead-set in holding elections w thin one year. In order to see that the Government is compelled to hold elections within one year and on failure of the Government for any reason to hold elections within a year, the Government is obliged to come to this House. I think that should serve the purpose.

Mr. SPEAKER.—I think both two sides are coming closer to each other in their view-points and therefore there should be less debate. We shall continue this debate tomorrow also.

The House adjourns now and will meet tomorrow at 1 P.M.

The House adjourned at Seven of the Clock to meet again at One of the Clock on Tuesday the 26th August 1969.

(WD 13459—GPB—600—13-11-1969)